ಜನಶಕ್ತಿ

ದುಡಿಯುವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ

ಕಾಮ್ರೆಡ್ ಕೋದಂಡರಾಮ್, ಲಾಲ್ ಸಲಾಮ್




ಸಂಪುಟ 13 | ಸಂಚಿಕೆ 44 | ಅಕ್ಟೋಬರ್ 28–ನವೆಂಬರ್ 3, 2019 | ಪುಟ 16 | ರೂ.10/-

Web : www.janashakthi.co.in e-mail : janashakthi2007@gmail.com

ಉಪಚುನಾವಣೆಗಳಲ್ಲಿ ಬಿಜೆಪಿಗೆ ಮುಖಭಂಗ







ಮತಾಂಧನೊಬ್ಬನನ್ನು ಪೂಜನೀಯಗೊಳಿಸುವ ಪರಿ



ಜಾತಿರಹಿತ –ವರ್ಗರಹಿತ ಸಮಾಜ ನಿರ್ಮಾಣ ಅಸಾಧ್ಯವಲ್ಲ

– ಕಾಂ. ರಾಘವಲು

ತ್ರಿಪುರಾ ಸಿಪಿಐ(ಎಂ) ಮುಖಂಡ ಬಾದಲ್ ಚೌಧುರಿ ಬಂಧನ ಸರ್ವಾಧಿಕಾರಶಾಹೀ ದಾಳಿ–ಸಿಪಿಐ(ಎಂ) ಪೊಲಿಟ್‌ಬ್ಯುರೊ ಖಂಡನೆ

ತ್ರಿಪುರಾದ ಸಿಪಿಐ(ಎಂ) ಮುಖಂಡರಾದ ಬಾದಲ್ ಚೌಧುರಿಯವರನ್ನು ಅವರು ಅಗರ್ತಲಾದ ಖಾಸಗಿ ಆಸ್ಪತೆಯೊಂದರಲ್ಲಿ ಐಸಿಯುನಲ್ಲಿ ಇರುವಾಗಲೇ ಬಂಧಿಸಲಾಗಿದೆ. ಇದನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ಬಲವಾಗಿ ಖಂಡಿಸಿದೆ.

ಬಾದಲ್ ಚೌಧುರಿ ಹಿಂದಿನ ಎಡರಂಗ ಸರಕಾರದಲ್ಲಿ ಪಿಡಬ್ಲ್ಯುಡಿ ಮಂತ್ರಿಯಾಗಿದ್ದರು. ಪ್ರಸಕ್ತ ಬಿಜೆಪಿ ರಾಜ್ಯಸರಕಾರ, ಚೌಧುರಿಯವರು ಮಂತ್ರಿಯಾಗಿದ್ದಾಗ ಕೆಲವು ಪ್ರಾಜೆಕ್ಟುಗಳ ನಿರ್ವಹಣೆಯಲ್ಲಿ ಅಕ್ರಮಗಳಾಗಿವೆ ಎಂದು ಅವರ ಮೇಲೆ ಸುಳ್ಳು ಆರೋಪಗಳನ್ನು ಹಾಕಿದೆ. ರಾಜ್ಯ ಸರಕಾರದ ಹಿಂದಿನ ಮುಖ್ಯ ಕಾರ್ಯದರ್ಶಿ ಸೇರಿದಂತೆ ಹಲವು ಹಿರಿಯ ಅಧಿಕಾರಗಳ ಹೆಸರುಗಳೂ ಎಫ್‌ಐಆರ್‌ನಲ್ಲಿವೆ. ಇದು ಈ ಬಿಜೆಪಿ ಸರಕಾರ ಆಧಾರಹೀನ ಆರೋಪಗಳನ್ನು ಹೊರಿಸಲು ಮತ್ತು ಸಿಪಿಐ(ಎಂ) ಮುಖಂಡತ್ವದ ಮೇಲೆ ಗುರಿಯಿಡಲು ಯಾವ ಮಟ್ಟಕ್ಕೆ ಹೋಗಬಲ್ಲದು ಎಂಬುದನ್ನು ತೋರಿಸುತ್ತದೆ ಎಂದಿರುವ ಪೊಲಿಟ್‌ಬ್ಯುರೊ, ಬಾದಲ್ ಚೌಧುರಿ ಆಸ್ಪತ್ರೆಯಲ್ಲಿರುವಾಗ ಮತ್ತು ತ್ರಿಪುರಾ ಹೈಕೋರ್ಟ್ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಪರಿಶೀಲಿಸುತ್ತಿರುವಾಗಲೇ ಅವರನ್ನು ಬಂಧಿಸಿರುವುದು ಹಗೆಸಾಧಿಸಿಕೊಳ್ಳುವ ಕ್ರಮ ಎಂಬುದನ್ನು ತೋರಿಸುತ್ತದೆ ಎಂದಿದೆ.ಆದರೆ ಇಂತಹ ಕ್ರಮಗಳು ಸಿಪಿಐ(ಎಂ)ನ್ನು ಹತ್ತಿಕ್ಕಲಾರವು ಮತ್ತು ಅದರ ಪ್ರತಿಷ್ಠೆಗೆ ಮಸಿ ಬಳೆಯಲಾರವು, ಏಕೆಂದರೆ ತ್ರಿಪುರಾದ ಜನತೆಗೆ ಎಡರಂಗ ಸರಕಾರದ ಪ್ರಾಮಾಣಿಕ ಮತ್ತು ಮಾದರಿ ದಾಖಲೆಯ ಬಗ್ಗೆ ತಿಳಿದಿದೆ. ಬಾದಲ್ ಚೌಧುರಿಯವರ ಮೇಲೆ ಹಾಕಿರುವ ಸುಳ್ಳು ಆರೋಪಗಳ ವಿರುದ್ಧ ಸಿಪಿಐ(ಎಂ) ಕಾನೂನಾತ್ಮಕವಾಗಿಯೂ ಮತ್ತು ರಾಜಕೀಯವಾಗಿಯೂ ಹೋರಾಡುತ್ತದೆ ಎಂದು ಪೊಲಿಟ್‌ಬ್ಯುರೊ ಹೇಳಿದೆ.

ಸಿಪಿಐ(ಎಂ)ನ ಕೇಂದ್ರ ಸಮಿತಿ ಸದಸ್ಯರಾಗಿರುವ ಬಾದಲ್ ಚೌಧುರಿಯವರನ್ನು ಹುಡುಕುವ ಹೆಸರಲ್ಲಿ ಬಿಜೆಪಿ ರಾಜ್ಯ ಸರಕಾರ ಸಿಪಿಐ(ಎಂ) ರಾಜ್ಯ ಸಮಿತಿ ಕಚೇರಿಯೂ ಸೇರಿದಂತೆ ಪಕ್ಷದ ಕಚೇರಿಗಳು ಮತ್ತು ಮುಖಂಡರ ಮೇಲೆ ದಾಳಿಗಳನ್ನು ನಡೆಸಿತ್ತು.

ಚೌಧುರಿಯವರ ಮೇಲೆ ಹಾಕಿರುವ ಆರೋಪಗಳಲ್ಲಿ ಯಾವುದೇ ಹುರುಳಿಲ್ಲ, ಅವರನ್ನು ಸಿಗಿಸಿ ಹಾಕಲೆಂದೇ ಮಾಡಿರುವ ಪ್ರಯತ್ನ ಎಂಬುದಕ್ಕೆ ಸಾಕಷ್ಟು ಪುರಾವೆಗಳಿವೆ. ನ್ಯಾಯಾಂಗ ಪ್ರಕ್ರಿಯೆಯನ್ನು ಬುಡಮೇಲು ಮಾಡಲು ಅಲ್ಲವಾದರೂ, ಅದರ ವಿರುದ್ಧ ಭಾವನೆಗಳನ್ನು ಹುಟ್ಟಿಸಲು ಬಿಜೆಪಿ ಮತ್ತು ಅದರ ಆಡಳಿತ ಸಾಧ್ಯವಾದುದನ್ನೆಲ್ಲವನ್ನೂ ಮಾಡುತ್ತಿದೆ ಎಂಬುದನ್ನೂ ಕಳೆದ ಕೆಲವು ದಿನಗಳ ಘಟನಾವಳಿಗಳು ತೋರಿಸುತ್ತವೆ. ಯಾವುದೇ ಸ್ವತಂತ್ರ ನ್ಯಾಯಾಂಗ ಪರೀಕ್ಷಣೆ ಚೌಧುರಿಯವರನ್ನು ನಿರಪರಾಧಿ ಎಂದು ತೋರಿಸುತ್ತವೆ ಎಂಬುದು ಖಂಡಿತ ಎಂದು ಪೊಲಿಟ್‌ಬ್ಯುರೊ ಈ ಮೊದಲು ನೀಡಿದ ಹೇಳಿಕೆ ತಿಳಿಸಿತ್ತು.

ಬಿಜೆಪಿ ರಾಜ್ಯ ಸರಕಾರದ ವಿಫಲತೆಗಳಿಂದಾಗಿ ಜನಗಳಲ್ಲಿ ಅಸಂತೃಪ್ತಿ ಹೆಚ್ಚುತ್ತಿವುದರಿಂದಾಗಿ ಅದು ರಾಜ್ಯದಲ್ಲಿ ಸಿಪಿಐ(ಎಂ) ಮುಖಂಡರನ್ನು 'ಬೆನ್ನಟ್ಟುತ್ತಿದೆ. ಅಕ್ಟೋಬರ್ 16ರಂದು ಬಾದಲ್ ಚೌಧುರಿಯವರನ್ನು ಹುಡುಕುವ ಹೆಸರಲ್ಲಿ ಸಿಪಿಐ(ಎಂ) ರಾಜ್ಯ ಸಮಿತಿ ಕಚೇರಿ, ದೇಶೇರ್ ಕಥಾ ದಿನಪ್ರತಿಕೆಯ ಕಚೇರಿಯ ಮತ್ತು ಸಿಐಟಿಯು ರಾಜ್ಯಸಮಿತಿ ಕಚೇರಿಯ ಮೇಲೂ ದಾಳಿಗಳು ನಡೆದವು. ಪೋಲೀಸರಿಗೆ ಅಡ್ಡ ಪಡಿಸಿದರೆಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಲಿಯ ಸದಸ್ಯ ಮತ್ತು ಮಾಜಿ ಸಂಸತ್ ಸದಸ್ಯ ನಾರಾಯಣ ಕರ್ ರವರನ್ನು ಅವರ ಮನೆಯಿಂದಲೇ ಬಂಧಿಸಲಾಯಿತು. ಮ್ಯಾಜಿಸ್ಟ್ರೇಟ್ ಕೋರ್ಟ್ ಅವರನ್ನು ಆ ದಿನವೇ ಜಾಮೀನಿನ ಮೇಲೆ ಬಿಡುಗಡೆ ಮಾಡಿತು.

ಪಕ್ಷ, ತ್ರಿಪುರಾ ಜನತೆಯೊಂದಿಗೆ ಬಿಜೆಪಿ ಸರಕಾರದ ಈ ಅಸಹ್ಯ ಸರ್ವಾಧಿಕಾರಶಾಹೀ ದಾಳಿಗಳ ವಿರುದ್ಧ ಹೋರಾಡುತ್ತದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ನವಂಬರ್ 21– ಆದಿವಾಸಿಗಳು, ಅರಣ್ಯವಾಸಿಗಳ ಸಂಸದ್ ಘೇರಾವ್ ನವಂಬರ್ 17 ರಿಂದ ರಾಜ್ಯಗಳು, ಜಿಲ್ಲೆಗಳಲ್ಲಿ ಪೂರ್ವಭಾವಿ ಪ್ರತಿಭಟನೆಗಳು

ಆದಿವಾಸಿಗಳು ಮತ್ತು ಅರಣ್ಯವಾಸಿಗಳ ಹಕ್ಕುಗಳನ್ನು ದುರ್ಬಲಗೊಳಿಸಲು ನಡೆಯುತ್ತಿರುವ ಪ್ರಯತ್ನಗಳ ವಿರುದ್ಧವಾಗಿ ಭೂಮಿ ಅಧಿಕಾರ್ ಆಂದೋಲನ್ ಮತ್ತು ಅರಣ್ಯ ಹಕ್ಕುಗಳ ಗುಂಪುಗಳು ನವಂಬರ್ 21ರಂದು ದಿಲ್ಲಿಯಲ್ಲಿ ಸಂಸದ್ ಮಾರ್ಗದಲ್ಲಿ 'ಸಂಸತ್ತು ಘೇರಾವ್" ನಡೆಸಲು ನಿರ್ಧರಿಸಿವೆ. ಇದಕ್ಕೆ ಪೂರ್ವಭಾವಿಯಾಗಿ ಅದರ ಹಿಂದಿನ ವಾರ ಗ್ರಾಮ, ಜಿಲ್ಲಾ ಮತ್ತು ರಾಜ್ಯ ಮಟ್ಟದಲ್ಲಿ ಈ ಉಲ್ಲಂಘನೆಗಳ ವಿರುದ್ಧ ಕಾರ್ಯಾಚರಣೆಗಳನ್ನು ನಡೆಸಲಾಗುವುದು ಎಂದು ಅವರು ಹೇಳಿದ್ದಾರೆ.

ಸುಪ್ರಿಂ ಕೋರ್ಟ್ ಅರಣ್ಯ ಹಕ್ಕುಗಳ ಕಾಯ್ದೆಯನ್ನು ಫೆಬ್ರುವರಿ 13, 2019ರಂದು ನೀಡಿದ ತೀರ್ಪಿಗೆ ದೇಶಾದ್ಯಂತ ವ್ಯಕ್ತವಾದ ಆಕ್ರೋಶದ ಹಿನ್ನೆಲೆಯಲ್ಲಿ ತನ್ನ ತೀರ್ಪನ್ನು ಜುಲೈ 10 ರ ವರೆಗೆ ತಡೆಹಿಡಿಯಿತು. ಈ ಕುರಿತು ವಿಚಾರಣೆ ಇನ್ನೂ ನಡೆಯುತ್ತಿದೆ. ವಿಚಾರಣೆಯ ಮುಂದಿನ ದಿನಾಂಕವನ್ನು ನವಂಬರ್ 26 ಎಂದು ನಿಗದಿಪಡಿಸಲಾಗಿದೆ. ಆದ್ದರಿಂದ ಅದುವರೆಗೆ ಯಾವುದೇ ಒಕ್ಕಲೆಬ್ಬಿಸುವಿಕೆಯನ್ನು ಮಾಡುವಂತಿಲ್ಲ. ಆದರೂ, ಅರಣ್ಯ ಇಲಾಖೆ ಜನಗಳನ್ನು ಅವರ ಭೂಮಿಯಿಂದ ಹೊರದಬ್ಬುತ್ತಿದೆ, ಅವರ ಬೆಳೆ, ವಸತಿಗಳನ್ನು ಧ್ವಂಸ ಮಾಡುತ್ತಿದೆ. ಇದರಿಂದಾಗಿ ಮಧ್ಯಪ್ರದೇಶದ ಬುರ್‍ಹಾಣಪುರದಲ್ಲಿ ಮತ್ತು ಉತ್ತರಪ್ರದೇಶದ ಸೋನ್‌ಭದ್ರದಲ್ಲಿ ಹಿಂಸಾಚಾರಗಳು ನಡೆದಿವೆ. ಎನ್‌ಡಿಎ ಸರಕಾರ ಕಾರ್ಪೊರೇಟ್ ಲೂಟಿಗೆ ಮತ್ತು ಆದಿವಾಸಿಗಳ ಶೋಷಣೆಗೆ ಅನುಕೂಲ ಮಾಡಿಕೊಡಲು ಭಾರತೀಯ ಅರಣ್ಯ ಕಾಯ್ದೆ, 1927ಕ್ಕೆ ತಿದ್ದುಪಡಿ ತರುವ ಬಗ್ಗೆ ಯೋಚಿಸುತ್ತಲೇ ಇದೆ.

ಈ ಹಿನ್ನೆಲೆಯಲ್ಲಿ ಕಳೆದ ಕೆಲವು ತಿಂಗಳಿಂದ ಭೂಮಿ ಹಕ್ಕು ಗುಂಪುಗಳು ಮತ್ತು ಆದಿವಾಸಿ ಗುಂಪುಗಳ ಹಲವು ಸಭೆಗಳು ನಡೆದಿವೆ. ಜುಲೈ 22ರಂದು ದೇಶಾದ್ಯಂತ 300ಕ್ಕೂ ಹೆಚ್ಚು ಸಾಮೂಹಿಕ ಪ್ರತಿಭಟನೆಗಳು ನಡೆದಿವೆ. ಹಲವು ಸಂಘಟನೆಗಳು ಸುಪ್ರಿಂ ಕೋರ್ಟಿನ ಮುಂದಿರುವ ಕೇಸಿನಲ್ಲಿ ಮಧ್ಯಪ್ರವೇಶಿಸಿವೆ. ಚಳುವಳಿಗಳ ಒತ್ತಡದಿಂದಾಗಿ ಹಲವು ರಾಜ್ಯ ಸರಕಾರಗಳು ಅಫಿಡವಿಟ್‌ಗಳನ್ನು ಸಲ್ಲಿಸಿವೆ. ಆದರೂ, ಅರಣ್ಯ ಹಕ್ಕುಗಳ ಕಾಯ್ದೆಯ ಪ್ರಕಾರ ಆದಿವಾಸಿಗಳು ಮತ್ತು ಅರಣ್ಯವಾಸಿಗಳ ಹಕ್ಕುಗಳನ್ನು ರಕ್ಷಿಸಬೇಕಾದ ಕೇಂದ್ರ ಸರಕಾರ ಮೋಸದ ನಿಲುವು ತಳೆದಿದೆ ಎಂದು ಭೂಮಿ ಹಕ್ಕುಗಳ ಚಳುವಳಿ ಮತ್ತು ಅರಣ್ಯವಾಸಿಗಳ ಸಂಘಟನೆಗಳು ಹೇಳುತ್ತಿವೆ.

ಹೀಗೆ ಅರಣ್ಯ ಹಕ್ಕುಗಳ ಉಲ್ಲಂಘನೆಗಳು ಮತ್ತು ಅರಣ್ಯ ಹಕ್ಕುಗಳ ಕಾಯ್ದೆಯನ್ನು ದುರ್ಬಲಗೊಳಿಸುತ್ತಿರುವುದರ ವಿರುದ್ಧ ಈ ಗುಂಪುಗಳು ಮತ್ತು ಸಂಘಟನೆಗಳು ಒಂದು ರಾಷ್ಟ್ರೀಯ ಕ್ರಿಯಾಯೋಜನೆಯನ್ನು ರೂಪಿಸಿವೆ. ಇದರ ಭಾಗವಾಗಿ ಸಂಸತ್ತು ಘೇರಾವೊ ಮತ್ತು ಅದಕ್ಕೆ ಪೂರ್ವಭಾವಿಯಾಗಿ ಬುಡಮಟ್ಟಗಳಲ್ಲಿ ಪ್ರತಿಭಟನೆಗಳನ್ನು ಹಮ್ಮಿ ಕೊಳ್ಳಲಾಗಿದೆ.

ಮೋದಿ ನೇತೃತ್ವದ ಹಿಂದಿನ ಎನ್‌ಡಿಎ ಸರಕಾರ 2013ರ ಭೂಮಿ ಸ್ವಾಧೀನ ಕಾಯ್ದೆಯನ್ನು ಬದಲಿಸಲು ಸುಗ್ರೀವಾಜ್ಞೆ ಹೊರಡಿಸಿದಾಗ ದೇಶಾದ್ಯಂತ ರೈತಾಪಿ ಜನಗಳು ಸಿಡಿದೆದ್ದ ಹಿನ್ನೆಲೆಯಲ್ಲಿ ದೇಶದ ರೈತ ಸಂಘಟನೆಗಳ ಒಂದು ಜಂಟಿ ವೇದಿಕೆಯಾಗಿ ಭೂಮಿ ಅಧಿಕಾರ್ ಆಂದೋಲನ್ ರಚನೆಗೊಂಡದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಈ ಹೋರಾಟದ ಫಲವಾಗಿ ಮೋದಿ–1 ಸರಕಾರ ಆ ಸುಗ್ರೀವಾಜ್ಞೆಯನ್ನು ಹಿಂತೆಗೆದುಕೊಳ್ಳಬೇಕಾಗಿ ಬಂತು ಎಂಬುದನ್ನೂ ಇಲ್ಲಿ ನೆನಪಿಸಿಕೊಳ್ಳಬಹುದು.

ರೈತರು, ಕಾರ್ಮಿಕರು, ಆದಿವಾಸಿಗಳು ಮತ್ತು ಇತರ ಅರಣ್ಯವಾಸಿಗಳ ಹಕ್ಕುಗಳ ಮೇಲೆ ದಾಳಿಗಳಿಗೆ ಸವಾಲನ್ನು ನ್ಯಾಯಾಲಯಗಳಲ್ಲೂ ಮತ್ತು ನೆಲದಲ್ಲೂ ಮುಂದುವರೆಸಲು ತಾನು ಪಣ ತೊಟ್ಟಿರುವುದಾಗಿ ಹೇಳಿರುವ ಭೂಮಿ ಅಧಿಕಾರ್ ಆಂದೋಲನ ಸಮಾನ ಅಭಿಪ್ರಾಯಗಳಿರುವ ಗುಂಪುಗಳು ನವಂಬರ್ 21 ರ ಸಂಸತ್ತು ಘೇರಾವ್‌ಗೆ ಬೆಂಬಲ ನೀಡಬೇಕೆಂದು ಕೋರಿದೆ.

ಭೂಮಿ ಕಾಯ್ದೆ 2013ರ ಕಲಮು 24(2)ರ ಮೇಲೆ ವಿಚಾರಣೆಯ ಮೊದಲು ಸುಪ್ರಿಂ ಕೋರ್ಟ್ ಪಕ್ಷಪಾತದ ಆರೋಪಗಳನ್ನು ನಿವಾರಿಸಿಕೊಳ್ಳಬೇಕು ಎಂದೂ ಭೂಮಿ ಅಧಿಕಾರ್ ಆಂದೋಲನ್ ಹೇಳಿದೆ. ಈ ಕುರಿತ ಹಿಂದಿನ ತೀರ್ಪುಗಳಲ್ಲಿ ಭಾಗಿಯಾಗಿದ್ದ ನ್ಯಾಯಾಧೀಶರು ಈಗ ಅವನ್ನೇ ಪ್ರಶ್ನಿಸುವ ಈ ವಿಚಾರಣೆಯಲ್ಲೂ ಇರುವುದು ವಿವಾದಗಳಿಗೆ ಆಸ್ಪದ ಕೊಟ್ಟಿದೆ. ಅಂತಹ ನ್ಯಾಯಾಧೀಶರು ಈ ವಿಚಾರಣೆಯಿಂದ ಹೊರಗುಳಿಯುವುದು ಸಂವಿಧಾನಿಕವಾಗಿ ಸರಿಯೆನಿಸುವ ಕ್ರಮ, ಏಕೆಂದರೆ ಇದು ಕೋಟ್ಯಂತರ ರೈತರು ಮತ್ತು ಕೃಷಿಯನ್ನು ಅವಲಂಬಿಸಿರುವವರು ಮತ್ತು ಮತ್ತು ಅವರ ಹಿತಗಳಿಗೆ ಸಂಬಂಧಪಟ್ಟ ವಿಷಯ. ಕೇಂದ್ರ ಸರಕಾರ ಕೂಡ ಈ ವಿಷಯದಲ್ಲಿ ಸ್ಪಷ್ಟ ನಿಲುವು ತಳೆಯಬೇಕು ಎಂದೂ ಭೂಮಿ ಅಧಿಕಾರ್ ಆಂದೋಲನ್ ಹೇಳಿದೆ.

ಜನಸಾಮಾನ್ಯರಿಗೆ ಬ್ಯಾಂಕಿಂಗ್ ಸೇವೆಗಳ ಕಡಿತದ ವಿರುದ್ಧ 3 ಲಕ್ಷ ಬ್ಯಾಂಕ್ ನೌಕರರ ಮುಷ್ಕರ

ಅಕ್ಟೋಬರ್ 22ರಂದು ದೇಶದಲ್ಲಿ ಬ್ಯಾಂಕಿಂಗ್ ಉದ್ಯಮ ಸ್ಥಬ್ಧಗೊಂಡಿತು. ದೇಶಾದ್ಯಂತ ಮೂರು ಲಕ್ಷಕ್ಕೂ ಹೆಚ್ಚು ಬ್ಯಾಂಕ್ ನೌಕರರು ದೇಶದಲ್ಲಿ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಬಿಕ್ಕಟ್ಟು ತರುತ್ತಿರುವ ಪ್ರಶ್ನೆಗಳ ಮೇಲೆ ಒಂದು ದಿನದ ಮುಷ್ಕರ ನಡೆಸಿದರು. ಅಖಿಲ ಭಾರತ ಬ್ಯಾಂಕ್ ನೌಕರರ ಸಂಘ (ಎಐಬಿಇಎ) ಮತ್ತು ಭಾರತದ ಬ್ಯಾಂಕ್ ನೌಕರರ ಒಕ್ಕೂಟ(ಬಿಇಎಫ್‌ಐ) ಸಾರ್ವಜನಿಕ ವಲಯದ ಬ್ಯಾಂಕುಗಳ ವಿಲೀನ, ಕೆಟ್ಟ ಸಾಲಗಳು ಅಂದರೆ ದೊಡ್ಡ ಕಾರ್ಪೊರೇಟ್‌ಗಳು ಮರುಪಾವತಿ ಮಾಡದಿರುವ ಸುಸ್ತಿ ಸಾಲಗಳನ್ನು ಮನ್ನಾ ಮಾಡುವುದು, ನಿಗದಿತ ಠೇವಣಿಗಳ ಮೇಲೆ ಬಡ್ಡಿದರಗಳು ನಿರಂತರವಾಗಿ ಇಳಿಯುತ್ತಿರುವುದು ಮತ್ತು ಸಾಮಾನ್ಯ ಠೇವಣಿದಾರರಿಂದ ಮನಬಂದಂತೆ ದಂಡಗಳನ್ನು ಮತ್ತು ವಿವಿಧ ಸೇವೆಗಳಿಗೆ ಶುಲ್ಕಗಳನ್ನು ವಸೂಲಿ ಮಾಡುತ್ತಿರುವುದರ ವಿರುದ್ಧ, ಹಾಗೂ ಬೇಕೆಂದೇ ಸಾಲ ಮರುಪಾವತಿ ಮಾಡದ ಕಾರ್ಪೊರೇಟ್‌ಗಳಿಂದ ಸಾಲ ವಸೂಲಿ ಮಾಡಬೇಕು ಮತ್ತು ಬ್ಯಾಂಕ್‌ಗಳಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಹೊಸ ನೇಮಕಾತಿಗಳನ್ನು ಮಾಡಬೇಕು ಎಂಬ ಬೇಡಿಕೆಗಳ ಮೇಲೆ ಈ ಮುಷ್ಕರಕ್ಕೆ ಕರೆ ನೀಡಿದ್ದವು.

ಬಹಳಷ್ಟು ಸ್ಥಳಗಳಲ್ಲಿ ಅಂದು ಬ್ಯಾಂಕ್ ಗೇಟ್‌ಗಳು ಮುಚ್ಚಿದ್ದವು, ದೊಡ್ಡ ಸಂಖ್ಯೆಯಲ್ಲಿ ನೌಕರರು, ನಿವೃತ್ತ ನೌಕರರು ಕೂಡ ಈ ಗೇಟ್‌ಗಳ ಮುಂದೆ ಮತಪ್ರದರ್ಶನ ನಡೆಸಿ ತಮ್ಮ ಬೇಡಿಕೆಗಳಿಗೆ ದನಿ ನೀಡಿದರು. ಮಹಾನಗರಗಳಲ್ಲಿ ಮತ್ತು ಮಹತ್ವದ ಕೇಂದ್ರಗಳಲ್ಲಿ ದೊಡ್ಡ ರ‍್ಯಾಲಿಗಳು, ಮೆರವಣಿಗೆಗಳೂ ನಡೆದವು. ಎಟಿಎಂಗಳ ಮೇಲೂ ಮುಷ್ಕರದ ಪ್ರಭಾವ ಬಿದ್ದಿತ್ತು.

ಈ ಮುಷ್ಕರದಿಂದ ಬ್ಯಾಂಕುಗಳ ಗ್ರಾಹಕರಿಗೆ ಅನಾನುಕೂಲವಾಗಿರುವ ಬಗ್ಗೆ ಖೇದ ವ್ಯಕ್ತಪಡಿಸಿರುವ ಬಿಇಎಫ್‌ಐ, ಇದು ಸಾರ್ವಜನಿಕ ವಲಯದ ಬ್ಯಾಂಕುಗಳನ್ನು ಸಾಲಗಳನ್ನು ಹಿಂದಿರುಗುಸದೆ ಸಾರ್ವಜನಿಕರ ಲಕ್ಷ ಕೋಟಿ ರೂ.ಗಳನ್ನು ಲೂಟಿ ಮಾಡಿದ ಕಾರ್ಪೊರೇಟ್‌ಗಳಿಗೇ ವಹಿಸಿ ಕೊಡುವ ಹುನ್ನಾರದ ಬಗ್ಗೆ ನೌಕರರ ಆತಂಕದ ಅಭಿವ್ಯಕ್ತಿಯಾಗಿದೆ, ಹಿರಿಯ ನಾಗರಿಕರ ಉಳಿತಾಯಗಳಿಗೆ ಕೊಡುವ ಬಡ್ಡಿಯನ್ನು ನಿರಂತರವಾಗಿ ಕಡಿಮೆ ಮಾಡುತ್ತ ಅವರನ್ನು ನಿಧಾನವಾಗಿ ಬದುಕಲು ಪರದಾಡುವಂತಹ ಸ್ಥಿತಿಯತ್ತ ತಳ್ಳುತ್ತಿರುವ ಬಗ್ಗೆ ಆತಂಕದ ಅಭಿವ್ಯಕ್ತಿಯಾಗಿದೆ, ಒಂದು ಘನತೆಯ ಬದುಕಿಗಾಗಿ ಹಂಬಲಿಸುತ್ತಿರುವ ನಿರುದ್ಯೋಗಿ ಯುವಜನರ ಬಗ್ಗೆ ಆತಂಕದ ಅಭಿವ್ಯಕ್ತಿಯಾಗಿದೆ ಎಂದು ಬಿಇಎಫ್‌ಐ ಮುಷ್ಕರದ ನಂತರ ನೀಡಿರುವ ಹೇಳಿಕೆಯಲ್ಲಿ ತಿಳಿಸಿದೆ.

"ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದೊಂದಿಗೆ ಅದರ ಸಹಯೋಗಿ ಬ್ಯಾಂಕುಗಳು ಮತ್ತು ಮಹಿಳಾ ಬ್ಯಾಂಕಿನ ವಿಲೀನದ ನಂತರ ಒಂದೇ ವರ್ಷದಲ್ಲಿ ಎರಡು ಸಾವಿರ ಶಾಖೆಗಳು ಮುಚ್ಚಿದವು ಎಂಬ ವರದಿಯ ಬಗ್ಗೆ ನಮಗೆ ಆತಂಕವಾಗಿದೆ; ದೇನಾ ಬ್ಯಾಂಕ್ ಮತ್ತು ವಿಜಯಾ ಬ್ಯಾಂಕನ್ನು ಬ್ಯಾಂಕ್ ಆಫ್ ಬರೋಡಾದೊಂದಿಗೆ ವಿಲೀನ ಮಾಡಿರುವುದರಿಂದಾಗಿ ಒಂದು ವರ್ಷದೊಳಗೆ ಮುಚ್ಚಬೇಕಾಗಿರುವ ನೂರಾರು "ತುಂಬಾ ನಿಕಟ"ವಾಗಿರುವ ಶಾಖೆಗಳನ್ನು ಗುರುತಿಸಲಾಗಿದೆ ಎಂಬ ವರದಿಗಳ ಬಗ್ಗೆ ನಮಗೆ ಆತಂಕವಾಗಿದೆ; ವಿಲೀನದ ಪ್ರಕ್ರಿಯೆಯಿಂದಾಗಿ ತಾವು ಪಡೆಯುವ ಬ್ಯಾಂಕಿಂಗ್ ಸೇವೆಗಳ ಸ್ಥಳದ ಬದಲಾವಣೆಯಿಂದಾಗಿ ಗ್ರಾಹಕರಿಗೆ ಆಗುವ ಅನಾನುಕೂಲಗಳ ಬಗ್ಗೆ ನಮಗೆ ಆತಂಕವಾಗಿದೆ. ಆದ್ದರಿಂದ ನಮ್ಮ ಗ್ರಾಹಕರ ಹಿತದೃಷ್ಟಿಯಿಂದ ಸಾರ್ವಜನಿಕ ವಲಯದ ಬ್ಯಾಂಕುಗಳ ವಿಲೀನದ ವಿರುದ್ಧ ಹೋರಾಡಲು ನಾವು ಕಟಿಬದ್ಧರಾಗಿದ್ದೇವೆ. ಸರಕಾರ ತನ್ನ ಅಸಹ್ಯ ಧೋರಣೆಯನ್ನು ಬದಲಿಸುವ ವರೆಗೆ ನಮ್ಮ ಹೋರಾಟ ಮುಂದುವರೆಯುತ್ತದೆ ಎಂದು ನಮ್ಮ ಮಾನ್ಯ ಗ್ರಾಹಕರುಗಳಿಗೆ ಆಶ್ವಾಸನೆ ನೀಡುತ್ತೇವೆ. ನಮ್ಮ ಹೋರಾಟಕ್ಕೆ ನಿಮ್ಮ ಬೆಂಬಲವನ್ನು ಮುಂದುವರೆಸಬೇಕು ಎಂದು ಕೋರುತ್ತೇವೆ" ಎಂದು ಮುಂದುವರೆದು ಬಿಇಎಫ್‌ಐನ ಹೇಳಿಕೆ ಕೋರಿದೆ.



ಬ್ಯಾಂಕ್ ನೌಕರರ ಈ ಮುಷ್ಕರಕ್ಕೆ ಸಾರ್ವಜನಿಕ ವಲಯದ ಬ್ಯಾಂಕುಗಳ ಅಧಿಕಾರಿಗಳ ಸಂಘಟನೆಗಳು, ರಿಝರ್ವ್ ಬ್ಯಾಂಕ್ ಮತ್ತು ಗ್ರಾಮೀಣ ಬ್ಯಾಂಕ್ ನೌಕರರು ಮತ್ತು ಅಧಿಕಾರಿಗಳ ಸಂಘಟನೆಗಳು ಹಾಗೂ ವಿಮಾ ನೌಕರರ ಸಂಘಟನೆಗಳಲ್ಲದೆ ಸಿಐಟಿಯು ಸೇರಿದಂತೆ ಎಲ್ಲ ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಮತ್ತು ವಿಶ್ವ ಕಾರ್ಮಿಕ ಸಂಘಗಳ ಒಕ್ಕೂಟ(ಡಬ್ಲ್ಯುಎಫ್‌ಟಿಯು) ಬೆಂಬಲ ನೀಡಿದವು. ಇದಕ್ಕಾಗಿ ಬಿಇಎಫ್‌ಐ ಅವರಿಗೆ ಕೃತಜ್ಞತೆ ಸಲ್ಲಿಸಿದೆ.

ಸಂಪಾದಕೀಯ

ಮುಸ್ಲಿಂ ಅಲ್ಪಸಂಖ್ಯಾತರ ಆತಂಕ ಹೆಚ್ಚುತ್ತಿದೆ

ದೇಶದಲ್ಲಿ ವ್ಯಾಪಿಸುತ್ತಿರುವ ದ್ವೇಷ ರಾಜಕಾರಣದಿಂದಾಗಿ ಹಿಂದುಗಳ ಬಂಧುಗಳೇ ಆಗಿರುವ ಮುಸ್ಲಿಂ ಬಾಂಧವರಲ್ಲಿ ಆತಂಕ ಹೆಚ್ಚುತ್ತಿದೆ ಎಂದು ಇತ್ತೀಚೆಗೆ ಆಂಧ್ರ ಪ್ರದೇಶದ ವಿಜಯವಾಡದಲ್ಲಿ ನಡೆದ ಮುಸ್ಲಿಂ ಮುಖಂಡರ ಸಭೆಯಲ್ಲಿ ಈ ಅಭಿಪ್ರಾಯ ವ್ಯಕ್ತವಾಯಿತು. ಕರ್ನಾಟಕದ ಪತ್ರಿಕೆಗಳಲ್ಲಿಯೂ ಅದು ಸುದ್ದಿಯಾಯಿತು. ಮುಸಲ್ಮಾನರ ಈ ಭಾವನೆಯಲ್ಲಿ, ಅವರು ಅಲ್ಲಲ್ಲಿ ವ್ಯಕ್ತಪಡಿಸುತ್ತಿರುವ ಅವರ ಆತಂಕದಲ್ಲಿ ಏನಾದರೂ ಸತ್ಯಾಂಶ ಇದೆಯಾ? ಅವರು ಭಯ ಭೀತಿಪಡುವುದಕ್ಕೆ ಆಧಾರವಿದೆಯಾ?

ಭಾರತದಲ್ಲಿ ಮುಸಲ್ಮಾನರ ಸಂಖ್ಯೆ ವಿಶ್ವದಲ್ಲೇ ಅತಿ ಹೆಚ್ಚು; ಬೇರೆ ದೇಶಗಳಿಗಿಂತಲೂ ಮುಸಲ್ಮಾನರು ಇಲ್ಲಿ ಹೆಚ್ಚು ಸುರಕ್ಷಿತವಾಗಿದ್ದಾರೆ ಎಂದು ಹೇಳುವ ಹಿಂದುಗಳಿದ್ದಾರೆ. ಆದರೆ ನೊಂದು, ಬೆಂದು, ಕಂಗೆಟ್ಟಿರುವ ಮುಸಲ್ಮಾನರು ಎತ್ತುವ ಪ್ರಶ್ನೆಗಳಿಗೆ ಇಲ್ಲಿ ಉತ್ತರವಿಲ್ಲ. ಕೇಂದ್ರದ ಬಿಜೆಪಿ ಸರ್ಕಾರ ನಮ್ಮ ಸಂವಿಧಾನಬದ್ಧ ಹಕ್ಕುಗಳನ್ನು ದಮನ ಮಾಡುತ್ತಿದೆ. ನಮ್ಮ ಯುವಕರನ್ನು ಸಂಶಯದ ಆಧಾರದಲ್ಲಿ ಬಂಧಿಸಿ ವರ್ಷಗಟ್ಟಲೆ ಜೈಲಿನಲ್ಲಿ ಇಡಲಾಗುತ್ತದೆ. ಬಿಜೆಪಿ, ಆರೆಸ್ಸೆಸ್ ನಾಯಕರ ಪ್ರಚೋದನಾಕಾರಿ ಭಾಷಣಗಳಿಂದ ದೇಶಾದ್ಯಂತ ನಮ್ಮ ಮೇಲೆ ಹಲ್ಲೆಗಳಾಗುತ್ತವೆ. ಮೋದಿಜಿಯವರಿಗೆ ನಾವೂ ಮತ ಹಾಕಿದ್ದೇವೆ. ಆದರೆ ಅವರು ಎರಡನೇ ಬಾರಿ ಅತ್ಯಧಿಕ ಬಹುಮತದಿಂದ ಆಯ್ಕೆಯಾಗಿ ಬಂದ ನಂತರ ಕೆಲವು ಹಿಂದು ಸಂಘಟನೆಗಳ ಆಕ್ರಮಣಕಾರಿ ಪ್ರವೃತ್ತಿ ಹೆಚ್ಚಾಗಿದೆ. ನಮ್ಮ ಜೀವ, ನಮ್ಮ ಆಸ್ತಿ, ನಮ್ಮ ಉದ್ಯೋಗ, ನಮ್ಮ ಆಚರಣೆಗಳಿಗೆ ರಕ್ಷಣೆ ನೀಡುವಂತಹ ಕಾನೂನನ್ನು ರೂಪಿಸುವುದು ಅಗತ್ಯವಿದೆ ಎಂದು ಅವರು ಆಗ್ರಹಿಸತೊಡಗಿದ್ದಾರೆ.

ಭಾರತ ದೇಶದ ದೊಡ್ಡ ಸಂಖ್ಯೆಯ ಹಿಂದುಗಳು, ನಾವು ಬಂಧುಗಳು ಎಂದು ಹೇಳುಕೊಳ್ಳುವವರು ಕಣ್ಣಿಗೆ ಕೇಸರಿ ಬಟ್ಟೆ ಕಟ್ಟಿಸಿಕೊಂಡಿದ್ದಾರೆ. ಅವರು ಸತ್ಯವನ್ನು ಕಾಣದವರಾಗಿದ್ದಾರೆ. ಮುಸಲ್ಮಾನರ ಬಗ್ಗೆ ದ್ವೇಷವನ್ನು ಬೆಳೆಸಲಾಗಿದೆ. ಹಿಂದುಗಳಿಗೆ ಮುಸಲ್ಮಾನರು ಮಾಡುವುದೆಲ್ಲವೂ ತಪ್ಪಾಗಿ ಕಾಣುತ್ತದೆ, ಅವರನ್ನು ಹಿಂದುಗಳ ಶತ್ರುಗಳೆಂದು ಬಿಂಬಿಸಲಾಗುತ್ತಿದೆ. ಮುಸಲ್ಮಾನರೆಲ್ಲರೂ ಭಯೋತ್ಪಾದಕರೆಂದು ಬಣ್ಣಿಸುತ್ತಾ ಬರಲಾಗಿದೆ. ಮುಸಲ್ಮಾನರಿಗೆ ಹಿಂದೂಸ್ತಾನಕ್ಕಿಂತ ಪಾಕಿಸ್ತಾನದ ಮೇಲೆ ಹೆಚ್ಚು ನಿಷ್ಠೆ ಎಂದು ವ್ಯಾಖ್ಯಾನಿಸಲಾಗುತ್ತಿದೆ. ದೇಶದ ಎಲ್ಲಾ ಸಮಸ್ಯೆಗಳಿಗೆ ಅವರೇ ಕಾರಣ ಎಂದು ಎಳೆಯ ಮಕ್ಕಳ ಮನಸ್ಸುಗಳಲ್ಲಿಯೂ ಮುಸ್ಲಿಂ ದ್ವೇಷದ ವಿಷವನ್ನು ತುಂಬಲಾಗುತ್ತದೆ. ಇಂತಹ ಆರೋಪ ಆಪಾದನೆಗಳಿಂದ ಬಡವರೇ ಹೆಚ್ಚಿನ ಸಂಖ್ಯೆಯಲ್ಲಿರುವ ಮುಸಲ್ಮಾನ ಕುಟುಂಬಗಳಲ್ಲಿ ಕನಿಷ್ಠ ನೆಮ್ಮದಿಯೂ ಇಲ್ಲದಂತಾಗಿದೆ.

ಭಾರತವನ್ನು ಆರ್ಥಿಕವಾಗಿ ಒಂದು ಬಲಾಢ್ಯ ರಾಷ್ಟ್ರವಾಗುವುದನ್ನು ತಪ್ಪಿಸಲು ಭಾರತವನ್ನು ಬ್ರಿಟಿಷರು ಇಬ್ಭಾಗ ಮಾಡಿದರು. ಈ ತಪ್ಪು ತೀರ್ಮಾನಕ್ಕೆ ಇಂದು ಭಾರತೀಯರು ಬೆಲೆ ತೆರುತ್ತಿದ್ದೇವೆ. ಎರಡು ದೇಶಗಳಾಗಿ ವಿಂಗಡನೆ ಆದಾಗ ಪಾಕಿಸ್ತಾನ ಮುಸ್ಲಿಂ ರಾಷ್ಟ್ರವಾಯಿತು. ಇದೊಂದು ಸೋಲು ಎಂದು ಭಾವಿಸಿದ್ದ ಹಿಂದುತ್ವ ಶಕ್ತಿಗಳು ದ್ವೇಷದ ಜ್ವಾಲೆಯನ್ನು ಜೀವಂತವಾಗಿಟ್ಟು ಸೇಡಿಗಾಗಿ ಕಾಯುತ್ತಾ ಅರ್ಭಟಿಸುತ್ತಿದ್ದಾರೆ.

ಎರಡು ನೆರೆಯ ದೇಶಗಳ ನಡುವೆ, ಅದರಲ್ಲೂ ಅವಸರದಲ್ಲಿ ವಿಭಜನೆಗೊಂಡ ಎರಡು ದೇಶಗಳ ನಡುವೆ ಗಡಿ ವಿವಾದಗಳು ಇರುವುದು ಸಹಜ, ಪೂರ್ವಜರ ಆಸ್ತಿಯನ್ನು ಹಂಚಿಕೊಂಡ ಸಹೋದರರ ನಡುವೆ ಇರುವ ಭಿನ್ನಾಭಿಪ್ರಾಯಗಳು ಗಂಭೀರ ಸಂಘರ್ಷಕ್ಕೆ ಕಾರಣವಾಗುವಂತೆ. ಗಡಿಗಳು ಇರುವ ವರೆಗೂ ಗಡಿ ವಿವಾದಗಳು ಇದ್ದೇ ಇರುತ್ತವೆ. ಆದ್ದರಿಂದ ಸಮ ಸಮಾಜವನ್ನು ಬಯಸುವವರು ಗಡಿಗಳೇ ಇಲ್ಲದ ವಿಶ್ವದ ಕನಸು ಕಾಣುತ್ತಾರೆ. ಗಡಿ ವಿವಾದಗಳಿಗೆ ಯುದ್ಧ ಪರಿಹಾರವಲ್ಲ. ಆಕ್ರಮಣ, ಸರ್ಜಿಕಲ್ ಸ್ಟ್ರೈಕ್ ಮುಂತಾದವುಗಳಿಂದ ಚುನಾವಣೆಗಳಲ್ಲಿ ಓಟು ಗಳಿಸಬಹುದೇ ಹೊರತು ಗಡಿಯಲ್ಲಿ ಶಾಂತಿಯನ್ನಲ್ಲ.

ಮುಸಲ್ಮಾನರು ಹಿಂದುಗಳಂತೆ ಅಥವ ಮತ್ತಿತರ ಕೋಮಿನವರಂತೆ ಅವರೂ ಮನುಷ್ಯರೇ. ಹಿಂದುಗಳಲ್ಲಿ ಇರುವ ಎಲ್ಲ ಒಳ್ಳೆಯ ಹಾಗೂ ಕೆಟ್ಟ ಪ್ರವೃತ್ತಿಗಳು ಅವರಲ್ಲಿಯೂ ಇರುತ್ತವೆ. ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಮುಸಲ್ಮಾನರು ಹೋರಾಡಿ ಪ್ರಾಣಬಲಿದಾನ ಮಾಡಿಲ್ಲವೆ? ಭಾರತದ ಪಾಕಿಸ್ತಾನ ಗಡಿ ಘರ್ಷಣೆಯಲ್ಲಿ ಪಾಕಿಸ್ತಾನಿ ಯೋಧರ ಗುಂಡಿಗೆ ಎದೆಕೊಟ್ಟು ಹುತಾತ್ಮರಾದ ಮುಸಲ್ಮಾನರಿಲ್ಲವೆ? ಸ್ವಾತಂತ್ರ್ಯಾ ನಂತರ ದೇಶದ ಅಭಿವೃದ್ಧಿಗಾಗಿ ಬೆವರು ಸುರಿಸುತ್ತಿರುವ ಕಾರ್ಮಿಕರಲ್ಲಿ, ರೈತರಲ್ಲಿ ಮುಸಲ್ಮಾನರೂ ಇಲ್ಲವೆ? ಅವರಿಗೆ ಸಮಾನ ಅವಕಾಶ ದೊರೆಯದಿದ್ದರೂ ಸಿಕ್ಕ ಅವಕಾಶಗಳನ್ನು ಬಳಸಿಕೊಂಡು ವಿಜ್ಞಾನಿಗಳಾದವರು, ಶ್ರೇಷ್ಠ ವೈದ್ಯರಾದವರು ಸುಪ್ರಸಿದ್ಧ ನ್ಯಾಯಾಧೀಶರಾದವರು ಮತ್ತು ಆ ಮೂಲಕ ತಾಯ್ನಾಡಿನ ಸೇವೆ ಸಲ್ಲಿಸುತ್ತಿರುವ ಮುಸಲ್ಮಾನರಿಲ್ಲವೆ? ಅವರೆಲ್ಲರೂ ಭಯೋತ್ಪಾದಕರೆ? ಹಿಂದುಗಳಲ್ಲಿ ಕಳ್ಳರು, ದರೋಡೆಕೋರರು, ಕೊಲೆಗಡುಕರು, ಅತ್ಯಾಚಾರಿಗಳು ಇಲ್ಲವೆ? ಹಾಗಾದರೆ ಎಲ್ಲಾ ಹಿಂದುಗಳು ದುಷ್ಟರೆ? ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ವಿರುದ್ಧ ಹೋರಾಡುತ್ತಾ ರಣರಂಗದಲ್ಲಿ ಪ್ರಾಣಕೊಟ್ಟು ಹುತಾತ್ಮನಾದ ಟಿಪ್ಪು ಸುಲ್ತಾನ್ ಚರಿತ್ರೆಯನ್ನು ಶಾಲಾ ಪಠ್ಯಕ್ರಮದಿಂದ ಕಿತ್ತು ಹಾಕಲು ಹೊರಟಿರುವುದು ದ್ವೇಷ. ಅದು ಹಿಂದು ಧರ್ಮವಲ್ಲ. ಇಂತಹ ದ್ವೇಷವನ್ನು ಬಿತ್ತುವುದರಿಂದ, ಹರಡುವದರಿಂದ ದೇಶದ ಉದ್ಧಾರ ಆಗಲಾರದು. ಎಷ್ಟೊ ಜನ ಮುಸಲ್ಮಾನರು ಗೋಮಾಂಸ ತಿನ್ನುವುದಿಲ್ಲ. ಯಾಕೆ ಅದನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ? ಎಷ್ಟೊ ಹಿಂದು ಮುಸ್ಲಿಂ ಹುಡುಗ ಹುಡುಗಿ ಮದುವೆ ಮಾಡಿಕೊಂಡು ಸುಖ ಸಂಸಾರ ನಡೆಸುವವರು ಇರುವಾಗ ಅದು ಯಾಕೆ ನಮಗೆ ಮಾದರಿಯಾಗಬಾರದು?

ಮಂದಿರ ನಾಶಮಾಡಿ ಮಸೀದಿ ಕಟ್ಟಿದ ಆರೋಪ. 300 ವರ್ಷಗಳ ಹಿಂದೆ ಅದು ನಡೆದದ್ದೇ ಆಗಿದ್ದರೆ ಇಂದಿನ ಮುಸಲ್ಮಾನರನ್ನು ಯಾಕೆ ಬಲಿಪಶು ಮಾಡಬೇಕು? ಅಲ್ಲೊಂದು ಭವ್ಯವಾದ ದೇವಸ್ಥಾನ ಇತ್ತು ಎಂಬುದೊಂದು ಕಟ್ಟುಕತೆ. ಪುರಾತತ್ವ ಇಲಾಖೆಗೆ ಅಲ್ಲಿ ಯಾವುದೇ ಸಾಕ್ಷಿ ಪುರಾವೆ ದೊರಕಿಲ್ಲ. ಆದಾಗ್ಯೂ ಎಲ್ಲರೂ, ಅದೊಂದು ಆಸ್ತಿ ವಿವಾದ ಆಗಿರುವುದರಿಂದ ನ್ಯಾಯಾಲಯದ ತೀರ್ಪನ್ನು ಮಾನ್ಯ ಮಾಡಬೇಕು. ತೀರ್ಪು ಹೇಗೂ ಬರಲಿ, ಎಲ್ಲರೂ ತಲೆಬಾಗಬೇಕು. ಭಾರತದ ಬಹುಮುಖಿ ಸಂಸ್ಕೃತಿಯನ್ನು ಎತ್ತಿಹಿಡಿಯಬೇಕು.

ಬಿಜೆಪಿಗೆ ಮುಖಭಂಗ


ಚುನಾವಣೆಗಳಲ್ಲಿ ಬಿಜೆಪಿಗೆ ಹಿನ್ನಡೆ ಭಾವೋದ್ರೇಕಕಾರೀ ಪ್ರಚಾರದ ಪ್ರಭಾವ ಕುಂದುತ್ತಿರುವದನ್ನು ಸೂಚಿಸಿದೆ: ಸಿಪಿಐ(ಎಂ) ಪೊಲಿಟ್ ಬ್ಯುರೊ



ಕೆ.ಯು. ಜನೀಶ್



ವಿ.ಕೆ. ಪ್ರಶಾಂತ್



ವಿನೋದ್ ನಿಕೊಲೆ

ಮಹಾರಾಷ್ಟ್ರ ಮತ್ತು ಹರ್ಯಾಣ ವಿಧಾನಸಭೆಗಳ ಚುನಾವಣೆಗಳು ಮತ್ತು ಗುಜರಾತ್, ಉತ್ತರಪ್ರದೇಶ, ಬಿಹಾರ, ರಾಜಸ್ಥಾನ, ಕೇರಳ, ಅಸ್ಸಾಂ ಮುಂತಾದ ರಾಜ್ಯಗಳ ಉಪಚುನಾವಣೆಗಳ ಫಲಿತಾಂಶಗಳು ಬಿಜೆಪಿ ಹೊತ್ತಿಸಿರುವ ಕೋಮುವಾದಿ ರಾಷ್ಟ್ರವಾದಿ ಭಾವೋದ್ರೇಕಕಾರೀ ಪ್ರಚಾರದ ಪ್ರಭಾವ ಕುಂದುತ್ತಿದೆ ಎಂಬುದನ್ನು ಸ್ಪಷ್ಟವಾಗಿ ತೋರಿಸಿವೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಟಿಪ್ಪಣಿ ಮಾಡಿದೆ.

ಪ್ರಧಾನ ಮಂತ್ರಿಗಳು ಮತ್ತು ಗೃಹಮಂತ್ರಿಗಳು ಇಬ್ಬರೂ ಒಂದು ಹಿಂದುತ್ವ ರಾಷ್ಟ್ರವಾದಿ ಪ್ರಚಾರವನ್ನು ಹರಿಯ ಬಿಟ್ಟರು. ಆದರೆ ಮಹಾರಾಷ್ಟ್ರದಲ್ಲಿ ಬಿಜೆಪಿ-ಶಿವಸೇನೆ ಅಧಿಕಾರಕ್ಕೆ ಮರಳಿರುವುದು ಕಡಿಮೆ ಬಹುಮತದೊಂದಿಗೆ. ಹರ್ಯಾಣದಲ್ಲಿ ಬಿಜೆಪಿ ಬಹುಮತ ಗಳಿಸುವಲ್ಲಿ ವಿಫಲವಾಗಿದೆ. ಸರಕಾರವನ್ನು ಕಳೆದುಕೊಂಡಿರುವುದರಿಂದಾಗಿ ಅದು ಎಂದಿನ ತನ್ನ ನೀಚ ಕುದುರೆ ವ್ಯಾಪಾರಕ್ಕೆ ಇಳಿಯುತ್ತದೆ, ಜನಾದೇಶವನ್ನು ಈ ರೀತಿಯಾಗಿ ಅಪಹರಿಸುವುದನ್ನು ತಡೆಯಲು ಪ್ರತಿಪಕ್ಷಗಳು ಚುರುಕುಗೊಳ್ಳಬೇಕು ಎಂದು ಪೊಲಿಟ್‌ಬ್ಯುರೊ ಹೇಳಿದೆ.

ಆರ್ಥಿಕ ಹಿಂಜರಿತ ಆಳಗೊಳ್ಳುತ್ತಿರುವುದರೊಂದಿಗೆ ಜನಗಳ ಜೀವನಾಧಾರಗಳ ಮೇಲಿನ ಹೊರೆಗಳು ಹೆಚ್ಚುತ್ತಿವೆ ಎಂಬ ಗಂಭೀರ ವಸ್ತುಸ್ಥಿತಿ ಈಗ ಮುನ್ನೆಲೆಗೆ ಬರುತ್ತಿದೆ. ಇದು ಜನಗಳ ಹೆಚ್ಚುತ್ತಿರುವ ಆರ್ಥಿಕ ಸಂಕಟಗಳ ವಿರುದ್ಧ ಐಕ್ಯ ಹೋರಾಟಗಳನ್ನು ತೀವ್ರಗೊಳಿಸಬೇಕಾದ ಅಗತ್ಯವನ್ನು ಎತ್ತಿ ತೋರಿಸುತ್ತಿದೆ ಎಂದೂ ಸಿಪಿಐ(ಎಂ) ಪೊಲಿಟ್ ಬ್ಯುರೊ ಹೇಳಿದೆ.

ಕೇರಳದಲ್ಲಿ ಯುಡಿಎಫ್‌ನಿಂದ ಎರಡು ಸ್ಥಾನಗಳನ್ನು ಪಡೆದುಕೊಂಡಿರುವ ಸಿಪಿಐ(ಎಂ) ನೇತೃತ್ವದ ಎಲ್‌ಡಿಎಫ್‌ನ್ನು ಪೊಲಿಟ್ ಬ್ಯುರೊ ಅಭಿನಂದಿಸಿದೆ. ಮಹಾರಾಷ್ಟ್ರದಲ್ಲಿ ದಹಾಣು ಕ್ಷೇತ್ರದಲ್ಲಿ ಸಿಪಿಐ(ಎಂ) ಒಂದು ಮಹತ್ವದ ವಿಜಯ ಗಳಿಸಿದೆ. ಪಕ್ಷದಲ್ಲಿ ನಂಬಿಕೆ ವ್ಯಕ್ತಪಡಿಸಿರುವ ಜನತೆಗೆ ಸಿಪಿಐ(ಎಂ) ಪೊಲಿಟ್‌ಬ್ಯುರೊ ತನ್ನ ನಮನಗಳನ್ನು ಸಲ್ಲಿಸಿದೆ.

45 ವರ್ಷಗಳಿಂದ ಯುಡಿಎಫ್‌ನ ಭದ್ರನೆಲೆಯಾಗಿದ್ದ ಪಾಲ ವಿಧಾನಸಭಾ ಕ್ಷೇತ್ರವನ್ನು ಕೆಲವು ದಿನಗಳ ಹಿಂದೆ ನಡೆದ ಉಪಚುನಾವಣೆಯಲ್ಲಿ ಎಲ್‌ಡಿಎಫ್ ಗೆದ್ದುಕೊಂಡಿತ್ತು. ಈಗ ಅಕ್ಟೋಬರ್ 21ರಂದು ನಡೆದ ಉಪಚುನಾವಣೆಗಳಲ್ಲಿ ಮತ್ತೆ ಎರಡು ಯುಡಿಎಫ್‌ನ ಭದ್ರನೆಲೆಗಳನ್ನು ಎಲ್‌ಡಿಎಫ್ ಗೆದ್ದುಕೊಂಡಿದೆ. ರಾಜಧಾನಿ ತಿರುವನಂತಪುರದಲ್ಲಿರುವ ವಟ್ಟಿಯೂರ್ ಕಾವು ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ತಿರುವನಂತಪುರದ ಮೇಯರ್ ವಿ.ಕೆ. ಪ್ರಶಾಂತ್ 14,465 ಮತಗಳ ಅಂತರದಿಂದ ಗೆದ್ದರೆ, ಪಟ್ಟಣಂತಿಟ್ಟ ಜಿಲ್ಲೆಯ ಕೋಣಿ ಕ್ಷೇತ್ರದಿಂದ ಡಿವೈಎಫ್‌ಐ ಉಪಾಧ್ಯಕ್ಷ ಕೆ.ಯು. ಜನೀಶ್ 9953 ಮತಗಳಿಂದ ಗೆದ್ದಿದ್ದಾರೆ.

ಯುಡಿಎಫ್ ಮಂಜೇಶ್ವರ ಮತ್ತು ಎರ್ನಾಕುಳಂ ಕ್ಷೇತ್ರಗಳನ್ನು ಉಳಿಸಿಕೊಂಡಿದೆ. ಆದರೆ ಅದು ಗಳಿಸಿದ ಮತಗಳ ಪ್ರಮಾಣ ತೀವ್ರವಾಗಿ ಇಳಿದಿದೆ. ಮತ್ತೊಂದು ಉಪಚುನಾವಣೆಯ ಕ್ಷೇತ್ರವಾದ ಅರೂರ್‌ನಲ್ಲಿ ಎಲ್‌ಡಿಎಫ್ ಅಭ್ಯರ್ಥಿ ಕೇವಲ 2000 ಮತಗಳಿಂದ ಸೋತಿದ್ದಾರೆ.

ನಾಲ್ಕು ಶಾಸಕರು ಇತ್ತೀಚಿನ ಲೋಕಸಭಾ ಚುನಾವಣೆಗಳಲ್ಲಿ ಆಯ್ಕೆಯಾದ್ದರಿಂದ, ಮತ್ತು ಮಂಜೇಶ್ವರದಲ್ಲಿ ಮುಸ್ಲಿಂ ಲೀಗ್ ಶಾಸಕರ ನಿಧನದಿಂದಾಗಿ ಈ ಉಪಚುನಾವಣೆಗಳು ನಡೆದವು. ಈ ಉಪಚುನಾವಣೆಗಳ ನಂತರ ಎಲ್‌ಡಿಎಫ್‌ನ ಸಂಖ್ಯಾಬಲ 91 ರಿಂದ 93ಕ್ಕೆ ಏರಿದೆ.

ಮಹಾರಾಷ್ಟ್ರದ ದಹಾಣು ಕ್ಷೇತ್ರದಿಂದ ಸಿಪಿಐ(ಎಂ) ಅಭ್ಯರ್ಥಿ ವಿನೋದ್ ನಿಕೊಲೆ 4321 ಮತಗಳ ಅಂತರದಿಂದ ಒಂದು ಮಹತ್ವದ ವಿಜಯ ಗಳಿಸಿದ್ದಾರೆ.

ವರದಿ: ವಾ.ಉ.

ಕರಾವಳಿ ಕದಿ

ಬೆಳ್ತಂಗಡಿಯಲ್ಲಿ ದ.ಕ.ಜಿಲ್ಲಾ ಪ್ರಥಮ ಆದಿವಾಸಿ ಹಕ್ಕುಗಳ ಸಮಾವೇಶ

ಬಂಡವಾಳಶಾಹಿಗಳ ಮೋಜು-ಮಸ್ತಿಗಾಗಿ ಶತಮಾನಗಳಿಂದ ಅರಣ್ಯಗಳಲ್ಲಿ ವಾಸ ಮಾಡುತ್ತಿರುವ ಆದಿವಾಸಿಗಳನ್ನು ತೆರವು ಮಾಡಲು ಹುನ್ನಾರ ನಡೆಯುತ್ತಿದೆ. ಈಗಾಗಲೇ 26 ಲಕ್ಷ ಅರಣ್ಯವಾಸಿ ಆದಿವಾಸಿಗಳ ಕುಟುಂಬಗಳನ್ನು ಒಕ್ಕಲೆಬ್ಬಿಸಲು ಸುಪ್ರೀಂಕೋರ್ಟ್ ತೀರ್ಪು ನೀಡಿದೆ. ಆದರೂ ಕೇಂದ್ರ ಸರಕಾರ ಇದರ ವಿರುದ್ಧ ಮೇಲ್ಮನವಿ ಸಲ್ಲಿಸದೆ ಆದಿವಾಸಿಗಳ ಜೀವನದೊಂದಿಗೆ ಚೆಲ್ಲಾಟವಾಡುತ್ತಿದೆ ಎಂಬುದಾಗಿ ಕರ್ನಾಟಕ ಆದಿವಾಸಿ ಹಕ್ಕುಗಳ ರಾಜ್ಯ ಸಮಿತಿ ಸಹ ಸಂಚಾಲಕ ಎಸ್.ವೈ.ಗುರುಶಾಂತ್ ಆಕ್ರೋಶ ವ್ಯಕ್ತಪಡಿಸಿದರು.

ಬೆಳ್ತಂಗಡಿಯಲ್ಲಿ ಅಕ್ಟೋಬರ್ 20 ರಂದು ನಡೆದ ದಕ್ಷಿಣ ಕನ್ನಡ ಜಿಲ್ಲೆಯ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯ ನೇತೃತ್ವದಲ್ಲಿ ಜಿಲ್ಲೆಯ ಆದಿವಾಸಿಗಳ ಪ್ರಥಮ ಸಮಾವೇಶವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಭೀಕರ ಪ್ರಕೃತಿ ವಿಕೋಪಕ್ಕೆ ತುತ್ತಾಗಿ ಪಶ್ಚಿಮ ಘಟ್ಟ ಪ್ರದೇಶದಲ್ಲಿ ವಾಸಿಸುವ ಮಲೆಕುಡಿಯ ಮತ್ತಿತರ ಆದಿವಾಸಿಗಳು ತಮ್ಮ ನೆಲೆಯನ್ನು ಕಳೆದುಕೊಳ್ಳುವ ಭೀತಿಯಲ್ಲಿದ್ದರೂ ಇಂದಿಗೂ ಸೂಕ್ತ ರೀತಿಯ ಪರಿಹಾರ ನೀಡುವಲ್ಲಿ ಕೇಂದ್ರ ಹಾಗೂ ರಾಜ್ಯ ಸರಕಾರಗಳು ವಿಫಲವಾಗಿವೆ. ಸರಕಾರಗಳ ಈ ರೀತಿಯ ಬೇಜವಾಬ್ದಾರಿ ವಿರುದ್ಧ ತೀವ್ರ ಸ್ವರೂಪದ ಹೋರಾಟಕ್ಕೆ ಮುಂದಾಗಲು ಅವರು ಕರೆ ನೀಡಿದರು.

ಸಮಾವೇಶವನ್ನುದ್ದೇಶಿಸಿ ಸಿಐಟಿಯು ರಾಜ್ಯ ಉಪಾಧ್ಯಕ್ಷ ವಸಂತ ಆಚಾರಿ, ರೈತ ಕಾರ್ಮಿಕ ಮುಖಂಡರಾದ ಎಸ್.ಎಂ.ಶಿವಕುಮಾರ್, ಸದಾಶಿವ ದಾಸ್, ಹರಿದಾಸ್, ಆದಿವಾಸಿ ಮುಖಂಡರಾದ ವಸಂತ ನಡ ಮಾತನಾಡಿದರು. ಆದಿವಾಸಿ ರಾಜ್ಯ ಸಹಸಂಚಾಲಕರಾದ ಡಾ.ಕೃಷ್ಣಪ್ಪ ಕೊಂಚಾಡಿ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಅವರು ಜಿಲ್ಲೆಯ ಆದಿವಾಸಿ ಸಮಸ್ಯೆಗಳು ಹಾಗೂ ಅವುಗಳ ಪರಿಹಾರಕ್ಕಾಗಿ ಈವರೆಗೆ ಆದಿವಾಸಿ ಹಕ್ಕುಗಳ ಸಮಿತಿಗಳು ನಡೆಸಿರುವ ಹೋರಾಟಗಳ ಬಗ್ಗೆ ವರದಿಯನ್ನು ಮಂಡಿಸಿದರು.

ದ.ಕ.ಜಿಲ್ಲೆಯಲ್ಲಿ ಮಲೆಕುಡಿಯ, ಕೊರಗ ಹಾಗೂ ಮರಾಟಿ ನಾಯ್ಕ್ ಎಂಬ ಸರಕಾರ ಗುರುತಿಸಿರುವ 3 ಬುಡಕಟ್ಟುಗಳಲ್ಲದೆ, ಬುಡಕಟ್ಟು ಮನ್ನಣೆಗೆ ಅರ್ಹವಾದ ಕುಡುಬಿ ಸಮುದಾಯವೂ ಸಾಕಷ್ಟು ಸಂಖ್ಯೆಯಲ್ಲಿದೆ. ಈ ಸಮುದಾಯಗಳ ಪ್ರತಿನಿಧಿಗಳೂ ಸಮಾವೇಶದಲ್ಲಿ ಭಾಗವಹಿಸಿದ್ದರು. ಜಿಲ್ಲೆಯಲ್ಲಿ ಇತ್ತೀಚೆಗೆ ನೆಲೆಯೂರಿರುವ ಅಲೆಮಾರಿ ಶಿಳ್ಳೆಕ್ಯಾತ ಸಮುದಾಯದ ಬಗೆಗೂ ಸಮಾವೇಶ ಚರ್ಚಿಸಿತು.

ಆದಿವಾಸಿ ಹಕ್ಕುಗಳ ಸಮಿತಿಯ ಶಶಿಕಲಾ ಮಂಗಳೂರು, ಜಯಾನಂದ ಪಿಲಿಕಲ, ಸಿಐಟಿಯು ಜಿಲ್ಲಾ ಮುಖಂಡರಾದ ಯೋಗೀಶ್ ಜಪ್ಪಿನಮೊಗರು ಸಮಾವೇಶದಲ್ಲಿ ಭಾಗವಹಿಸಿದ್ದರು. ಸಮಾವೇಶದ ಸಂಚಾಲಕ ಶೇಖರ ಲಾಯಿಲ ಸ್ವಾಗತಿಸಿ ನಿರೂಪಿಸಿದರು. ಸಮಾವೇಶವು 15 ಮಂದಿ ಆದಿವಾಸಿ ಹಕ್ಕುಗಳ ಜಿಲ್ಲಾ ಸಮಿತಿಯೊಂದನ್ನು ಆಯ್ಕೆ ಮಾಡಿರುತ್ತದೆ. ಜಿಲ್ಲಾ ಪ್ರಧಾನ ಸಂಚಾಲಕರಾಗಿ ವಸಂತ ನಡ ಅವರನ್ನು ಹಾಗೂ 5 ಮಂದಿ ಸಹಸಂಚಾಲಕರ ಆಯ್ಕೆಯನ್ನೂ ಸಮಾವೇಶ ನಡೆಸಿರುತ್ತದೆ.

ಎರಡು ಡಿವೈಎಫ್ಐ ವಲಯ ಸಮ್ಮೇಳನಗಳು:

ಉಳ್ಳಾಲ ವಲಯ ಡಿವೈಎಫ್ಐ 14 ನೇ ಸಮ್ಮೇಳನ:

ದೇರಳಕಟ್ಟೆಯಲ್ಲಿ ಅಕ್ಟೋಬರ್ 20 ರಂದು ನಡೆದ ಉಳ್ಳಾಲ ವಲಯ ಡಿವೈಎಫ್ಐ ಸಮ್ಮೇಳನವನ್ನು ಹಂಪಿ ವಿ.ವಿ.ನಿಲಯದ ವಿಶ್ರಾಂತ ಪ್ರಾಧ್ಯಾಪಕ ಪ್ರೊ. ಚಂದ್ರ ಪೂಜಾರಿ ಉದ್ಘಾಟಿಸಿದರು. ದಕ್ಷಿಣ ಕನ್ನಡ ಜಿಲ್ಲೆಯ ಜನರು ಬುದ್ಧಿವಂತರು ಎನ್ನಲಾಗುತ್ತಿದೆ. ಆದರೆ ಜಿಲ್ಲೆಯಲ್ಲಿ ರಸ್ತೆಗಳ ಅಭಿವೃದ್ಧಿಗಾಗಿ, ನಿರುದ್ಯೋಗ ಸಮಸ್ಯೆ ನಿವಾರಣೆಗಾಗಿ, ಶಿಕ್ಷಣ ಹಾಗೂ ಮೂಲ ಸೌಕರ್ಯಗಳಿಗಾಗಿ ಯಾರೂ ಧ್ವನಿ ಎತ್ತುತ್ತಿಲ್ಲ. ಯುವಜನರು ಈ ಬಗ್ಗೆ ಮುಂದೆ ಬರಬೇಕಾಗಿದೆ ಎಂದವರು ಆಗ್ರಹಿಸಿದರು.

ಡಿವೈಎಫ್ಐ ರಾಜ್ಯ ಸಮಿತಿ ಅಧ್ಯಕ್ಷ ಮುನೀರ್ ಕಾಟಿಪಳ್ಳ, ಡಿವೈಎಫ್ಐ ದ.ಕ. ಜಿಲ್ಲಾಧ್ಯಕ್ಷ ಬಿ.ಕೆ.ಇಮ್ತಿಯಾಜ್ ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡಿದರು. ಡಿವೈಎಫ್ಐ ಉಳ್ಳಾಲ ವಲಯಾಧ್ಯಕ್ಷ ಜೀವನ್‌ರಾಜ್ ಕುತ್ತಾರ್ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು. ಡಿವೈಎಫ್ಐ ಜಿಲ್ಲಾ ಸಮಿತಿ ಸದಸ್ಯರಾದ ನವೀನ್ ಕೊಂಚಾಡಿ, ರಫೀಕ್ ಹರೇಕಳ, ಆಶಾ ಬೋಳೂರು, ಉಳ್ಳಾಲ ವಲಯ ಮುಖಂಡರಾದ ರಜಾಕ್ ಮೊಂಟೆಪದವು, ಸುನಿಲ್ ತೇವುಲ, ಅಶ್ರಫ್ ಕೆಸಿರೋಡ್, ಎಸ್ಎಫ್ಐ ಜಿಲ್ಲಾ ಕಾರ್ಯದರ್ಶಿ ವಿಕಾಸ್ ಕುತ್ತಾರ್ ಮೊದಲಾದವರು ಸಮ್ಮೇಳನದ ಉದ್ಘಾಟನೆಯಲ್ಲಿ ಭಾಗವಹಿಸಿದ್ದರು. ರಜಾಕ್ ಮೊಂಟೆಪದವು ಸ್ವಾಗತಿಸಿ, ಸುನೀಲ್ ತೇವುಲ ವಂದಿಸಿದರು.

ಸಮ್ಮೇಳನವು ನೂತನ ಸಮಿತಿಯನ್ನು ರಚಿಸಿದ್ದು, ಅಶ್ರಫ್ ಕೆಸಿರೋಡ್ ಅಧ್ಯಕ್ಷರಾಗಿ, ಸುನಿಲ್ ತೇವುಲ ಕಾರ್ಯದರ್ಶಿಯಾಗಿ, ಅಶ್ರಫ್ ಹರೇಕಳ ಕೋಶಾಧಿಕಾರಿಯಾಗಿ ಆಯ್ಕೆಯಾಗಿರುತ್ತಾರೆ.

ಡಿವೈಎಫ್ಐ ಬಂಟ್ವಾಳ ತಾಲೂಕು ಸಮ್ಮೇಳನ:

ಡಿವೈಎಫ್ಐ ವತಿಯಿಂದ ಅಕ್ಟೋಬರ್ 20 ರಂದು ಬಿಸಿರೋಡಿನಲ್ಲಿ ಬಂಟ್ವಾಳ ತಾಲೂಕು ಸಮಾವೇಶವನ್ನು ನಡೆಸಲಾಯಿತು. ಸಂವಿಧಾನಬದ್ಧ ಹಕ್ಕುಗಳಿಗಾಗಿ ಯುವಜನತೆ ಹೋರಾಟಕ್ಕೆ ಮುಂದಾಗಬೇಕೆಂದು ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದ ಡಿವೈಎಫ್ಐ ದ.ಕ.ಜಿಲ್ಲಾ ಕಾರ್ಯದರ್ಶಿ ಸಂತೋಷ್ ಬಜಾಲ್ ಕರೆ ನೀಡಿದರು. ಮುಖ್ಯ ಅತಿಥಿಯಾಗಿ ಪತ್ರಕರ್ತ ಲತೀಫ್ ನೇರಳಕಟ್ಟೆ ಭಾಗವಹಿಸಿ ಮಾತನಾಡಿದರು.

ಡಿವೈಎಫ್ಐ ತಾಲೂಕು ಮಾಜಿ ಕಾರ್ಯದರ್ಶಿ ಉದಯಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಸಾಮಾಜಿಕ ಮುಖಂಡರಾದ ರಾಮಣ್ಣ ವಿಟ್ಲ ಉಪಸ್ಥಿತರಿದ್ದರು. ಸಮಾವೇಶವು ಡಿವೈಎಫ್ಐ ತಾಲೂಕು ಸಮಿತಿಯನ್ನು ಆಯ್ಕೆ ಮಾಡಿದ್ದು, ಸುರೇಂದ್ರ ಕೋಟ್ಯಾನ್ ಅಧ್ಯಕ್ಷರಾಗಿ, ತುಲಸೀದಾಸ್ ಕಾರ್ಯದರ್ಶಿಯಾಗಿ ಆಯ್ಕೆಯಾಗಿರುತ್ತಾರೆ.



ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಜಪ್ಪಿನಮೊಗರು ಘಟಕದ ಸಮಾವೇಶ

ಜನವಾದಿ ಮಹಿಳಾ ಸಂಘಟನೆಯ ಜಪ್ಪಿನಮೊಗರು ಘಟಕದ ಸಮಾವೇಶವು ಜಿಲ್ಲಾ ಅಧ್ಯಕ್ಷರಾದ ಜಯಂತಿ ಬಿ.ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ತಾ.20-10-2019 ರ ಆದಿತ್ಯವಾರ ಜಪ್ಪಿನಮೊಗರು ಲಯನ್ಸ್ ಸಭಾ ಭವನದಲ್ಲಿ ಜರಗಿತು. ಸಮಾವೇಶವನ್ನು ಜಿಲ್ಲಾ ಉಪಾಧ್ಯಕ್ಷರಾದ ಹೇಮಲತಾನವರು ಉದ್ಘಾಟಿಸಿ ಸಮಾಜದಲ್ಲಿ ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯಗಳ ವಿರುದ್ಧ ಸಂಘಟಿತರಾಗಿ ಧ್ವನಿ ಎತ್ತಬೇಕಾಗಿದೆ ಹಾಗೂ ಮಹಿಳೆಯರಲ್ಲಿ ಜಾಗೃತಿ ಮೂಡಿಸುವ ಪ್ರಯತ್ನವನ್ನು ಮಾಡಬೇಕಾಗಿದೆ. ಮಹಿಳಾ ಸಂಘಟನೆಯು ರಾಷ್ಟ್ರಮಟ್ಟದಲ್ಲಿ ಈ ಕೆಲಸವನ್ನು ಮಾಡುತ್ತಿದೆ. ಜಿಲ್ಲೆಯಲ್ಲಿ ಸಂಘಟನೆಯನ್ನು ಬಲಪಡಿಸಲು ಎಲ್ಲರೂ ಪ್ರಯತ್ನಿಸಬೇಕೆಂದು ಕರೆ ನೀಡಿದರು. ಮುಖ್ಯ ಅತಿಥಿಯಾದ ಭಾರತೀಯ ಜೀವ ವಿಮಾ ನಿಗಮದ ಉದ್ಯೋಗಿ ಸಾಯಿರಾ ಸ್ವರ್ಣಲತಾ ಡಿಸೋಜ ಅವರು ಮಾತನಾಡಿ ಮಹಿಳೆಯರಿಗೆ ಬಾಲ್ಯದಿಂದಲೇ ಧೈರ್ಯ ತುಂಬಿ ತಮ್ಮ ಸ್ವಂತ ಶಕ್ತಿಯ ಮೇಲೆ ನಿಲ್ಲುವಂತೆ ಪ್ರೇರಣೆ ಕೊಡಬೇಕೆಂದು ಹೇಳಿದರು. ಅಧ್ಯಕ್ಷೀಯ ಭಾಷಣ ಮಾಡಿದ ಜಯಂತಿ ಶೆಟ್ಟಿಯವರು ಮಹಿಳೆಯರು ಸಮಾಜದ ಎಲ್ಲಾ ರಂಗದಲ್ಲೂ ತಮ್ಮ ಸಾಮರ್ಥ್ಯವನ್ನು ಪ್ರದರ್ಶಿಸುತ್ತಿದ್ದಾರೆ, ಅವರು ಇನ್ನಷ್ಟು ಬೆಳೆಯಬೇಕಾದರೆ ಸಮಾಜದ ಎಲ್ಲಾ ವರ್ಗದ ಜನರ ಸಹಕಾರ ಅಗತ್ಯವಾಗಿದೆ. ಜನವಾದಿ ಮಹಿಳಾ ಸಂಘಟನೆಯು ಮಹಿಳೆಯರ ಹಾಗೂ ಸಮಾಜದ ಒಟ್ಟು ಅಭಿವೃದ್ಧಿಗಾಗಿ ದುಡಿಯುತ್ತಿದೆ ಎಂದು ಹೇಳಿದರು. ಜಪ್ಪಿನಮೊಗರು ಗ್ರಾಮ ಯುವಕ ಮಂಡಲದ ಮಾಜಿ ಅಧ್ಯಕ್ಷರಾದ ಉದಯಚಂದ್ರ ರೈ ಅವರು ಸಮಾವೇಶಕ್ಕೆ ಶುಭ ಸಂದೇಶ ನೀಡಿದರು.

ವೇದಿಕೆಯಲ್ಲಿ ಜನವಾದಿ ಮಹಿಳಾ ಸಂಘಟನೆಯ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಭಾರತಿ ಬೋಳಾರ್, ಘಟಕ ಕಾರ್ಯದರ್ಶಿ ರಶ್ಮಿ ಶೆಟ್ಟಿ, ಕೋಶಾಧಿಕಾರಿ ಬೇಬಿ ಸೇನವ ಉಪಸ್ಥಿತರಿದ್ದರು.

ಮುಂದಿನ ವರ್ಷಕ್ಕೆ ಸಾಹಿರಾ ಸ್ವರ್ಣಲತಾ ಡಿಸೋಜ ಅಧ್ಯಕ್ಷರಾಗಿ, ಜಯಂತಿ ಶೆಟ್ಟಿ, ಹೇಮಾ ಶೆಟ್ಟಿ ಉಪಾಧ್ಯಕ್ಷರಾಗಿ, ಅಶ್ವಿನಿ ಕಾರ್ಯದರ್ಶಿಯಾಗಿ, ಜಯಲಕ್ಷ್ಮಿ, ರಶ್ಮಿ, ಸುಭಾಷಿನಿ ಜೊತೆ ಕಾರ್ಯದರ್ಶಿಗಳಾಗಿ, ಬೇಬಿ ಸೇನವ ಕೋಶಾಧಿಕಾರಿಯಾಗಿ ಹಾಗೂ 21 ಮಂದಿಯ ಕಾರ್ಯಕಾರಿ ಸಮಿತಿಯನ್ನು ಆಯ್ಕೆಮಾಡಲಾಯಿತು.

ರಶ್ಮಿಯವರು ಸ್ವಾಗತಿಸಿ, ಬೇಬಿ ಸೇನವ ಧನ್ಯವಾದ ನೀಡಿದರು. ಧನಲಕ್ಷ್ಮಿಯವರು ಕಾರ್ಯಕ್ರಮವನ್ನು ನಿರೂಪಿಸಿದರು.



ನೀರಿನ ದರ ವಿಪರೀತ ಏರಿಕೆ ಸಿಪಿಐ(ಎಂ) ವಿರೋಧ

ಮಂಗಳೂರು ಮಹಾನಗರ ಪಾಲಿಕೆಯು ಕಳೆದ ಏಪ್ರಿಲ್ ತಿಂಗಳಿನಲ್ಲಿ ಹೆಚ್ಚಳ ಮಾಡಿರುವ ನೀರಿನ ದರವು ವಿಪರೀತ ಹಾಗೂ ಅವೈಜ್ಞಾನಿಕ ಎಂದು ಸಿಪಿಐ(ಎಂ) ಪಂಜಿಮೊಗರು ವಾರ್ಡ್ ಸಮಿತಿ ಆರೋಪಿಸಿದೆ.

ಹಿಂದಿನ ದರಕ್ಕಿಂತ ಮೂರರಿಂದ ಐದು ಪಟ್ಟು ದರ ಹೆಚ್ಚಳ ಮಾಡಿರುವುದು ನ್ಯಾಯವಲ್ಲ. ಕನಿಷ್ಠ ಮಿತಿಯಲ್ಲೂ ಕಡಿತಗೊಳಿಸಲಾಗಿದೆ. ಪಾಲಿಕೆಯೊಳಗೆ ಜನಪ್ರತಿನಿಧಿಗಳ ಆಡಳಿತ ಇಲ್ಲದೇ ಇರುವ ಸಮಯವನ್ನು ಬಳಸಿಕೊಂಡು ಮನಸ್ಸೋ ಇಚ್ಛೆ ದರ ಹೆಚ್ಚಿಸಲಾಗಿದೆ. ಮೂರು ತಿಂಗಳುಗಳ ಕಾಲ ಬಿಲ್ಲನ್ನು ನೀಡದೇ ಇದೀಗ ಏಕಕಾಲದಲ್ಲಿ ಬಿಲ್ ನೀಡಲಾಗುತ್ತಿದೆ. ಇದರಿಂದ ಕನಿಷ್ಠ ಬಳಕೆ ರೀಡಿಂಗ್ ಮಾನದಂಡವನ್ನು ತಪ್ಪಾಗಿ ಅನುಸರಿಸಲಾಗುತ್ತಿದೆ. ಈ ಅವ್ಯವಸ್ಥೆಯನ್ನು ಕೂಡಲೇ ಸರಿಪಡಿಸಬೇಕು ಎಂದು ಮಂಗಳೂರು ಮಹಾನಗರ ಪಾಲಿಕೆ ಆಯುಕ್ತರಿಗೆ ತಾ. 18-10-2019 ರಂದು ಸಿಪಿಐ(ಎಂ) ಪಂಜಿಮೊಗರು ಶಾಖೆ ಮನವಿ ಸಲ್ಲಿಸಿದೆ.

ನಿಯೋಗದಲ್ಲಿ ಪಕ್ಷದ ಮುಖಂಡರಾದ ಮಾಜಿ ಕಾರ್ಪೊರೇಟರ್ ದಯಾನಂದ ಶೆಟ್ಟಿ, ಎ. ಅಹಮ್ಮದ್ ಬಶೀರ್, ನವೀನ್ ಡಿ'ಸೋಜಾ, ನೌಷದ್, ಚರಣ್ ಶೆಟ್ಟಿ ಉಪಸ್ಥಿತರಿದ್ದರು.







ಕಾರ್ಪೋರೇಟ್ ಸಂಸ್ಥೆಗಳಿಗೆ ತೆರಿಗೆ ವಿನಾಯಿತಿ, ಜನಸಾಮಾನ್ಯರಿಗೆ ಜಿಎಸ್‌ಟಿ ಹೊರೆ – ಎಸ್. ವರಲಕ್ಷ್ಮಿ

ಭಾರತ ಇಂದು ಕಾರ್ಪೋರೇಟ್ ಪರವಾದ, ಉಳ್ಳವರ ಪರವಾದ ಆಡಳಿತ ನಡೆಸುತ್ತಿರುವ ಸರ್ಕಾರಗಳಿಂದ ಕೂಡಿದೆ. ಬಡವರು, ಜನಸಾಮಾನ್ಯರು, ಕಾರ್ಮಿಕರು ತಮ್ಮ ದಿನನಿತ್ಯದ ಬದುಕಿಗಾಗಿ ಪರದಾಡುವಂತಾಗಿದ್ದಾರೆ. ಕಾರ್ಪೋರೇಟ್ ಸಂಸ್ಥೆಗಳಿಗೆ ತೆರಿಗೆ ವಿನಾಯಿತಿ ನೀಡಿ ಜನಸಾಮಾನ್ಯರಿಗೆ ಜಿಎಸ್‌ಟಿ ತೆರಿಗೆ ಹೇರಿ ಕೇಂದ್ರದ ಮೋದಿ ಸರ್ಕಾರ ಸಂಕಷ್ಟಕ್ಕೆ ತಳ್ಳುತ್ತಿದೆ ಎಂದು ಸಿಐಟಿಯು ರಾಜ್ಯ ಅಧ್ಯಕ್ಷರಾದ ಎಸ್. ವರಲಕ್ಷ್ಮಿ ಆರೋಪಿಸಿದರು.

ಹಾಸನ ನಗರದಲ್ಲಿ ನಡೆಯುತ್ತಿರುವ ಸಿಐಟಿಯುನ 5ನೇ ಹಾಸನ ಜಿಲ್ಲಾ ಸಮ್ಮೇಳನದ ಅಂಗವಾಗಿ ಕಾರ್ಮಿಕ ಬೃಹತ್ ಮೆರವಣಿಗೆ ಹಾಗೂ ಬಹಿರಂಗ ಸಭೆಯನ್ನು ಉದ್ಘಾಟಿಸಿ ಮಾತನಾಡುತ್ತಿದ್ದ ಅವರು ಭಾರತ ದೇಶ ಬಡವರು, ಕಾರ್ಮಿಕರು, ರೈತರು, ಜನಸಾಮಾನ್ಯರು ಕಟ್ಟಿರುವ ದೇಶ. ಇದು ಕೇವಲ ಒಂದು ಧರ್ಮಕ್ಕೆ ಸೀಮಿತವಾದುದಲ್ಲ, ಜಗತ್ತಿನ ಹಸಿವಿನ ಸೂಚ್ಯಾಂಕದಲ್ಲಿ ಭಾರತ 102ನೇ ಸ್ಥಾನದಲ್ಲಿರುವುದು ಮೋದಿಯವರ ದುರಾಡಳಿತಕ್ಕೆ ಅತ್ಯುತ್ತಮ ಉದಾಹರಣೆಯಾಗಿದೆ. ಮುಕೇಶ್ ಅಂಬಾನಿಯ ಆದಾಯ ವರ್ಷದಿಂದ ವರ್ಷಕ್ಕೆ ಹಲವು ಪಟ್ಟು ಹೆಚ್ಚಾಗುತ್ತಿದೆ. ಆದರೆ ಕಾರ್ಮಿಕರ ಆದಾಯದಲ್ಲಿ ಯಾವ ಹೆಚ್ಚಳವೂ ಆಗುತ್ತಿಲ್ಲ. ಬದಲಿಗೆ ದಿನಕ್ಕೆ 178 ರೂ ಕೂಲಿಯನ್ನು ನಿಗಧಿ ಮಾಡುವ ಮೂಲಕ ಮೋದಿಯವರು ಬಡವರ ಬದುಕನ್ನು ಬೀದಿಪಾಲು ಮಾಡುತ್ತಿದ್ದಾರೆ. 2019 ರ ಲೋಕಸಭಾ ಚುನಾವಣೆಗೆ ಸರಾಸರಿ 60 ಸಾವಿರ ಕೋಟಿ ಹಣ ಖರ್ಚಾಗಿದ್ದು ಬಿಜೆಪಿ ಒಂದೇ ಪಕ್ಷ 27 ಸಾವಿರ ಕೋಟಿ ರೂ ಖರ್ಚು ಮಾಡಿದೆ. ಜೊತೆಗೆ ಸನ್ಯಾಸಿ ಬಾಬಾ ರಾಮ್‌ದೇವ್ ಆದಾಯವೂ ಕೂಡ 6 ಸಾವಿರ ಕೋಟಿ ರೂಪಾಯಿಗೆ ಏರಿಕೆಯಾಗಿದೆ ಆದರೆ ಕಷ್ಟಪಟ್ಟು ದುಡಿಯುವ ಕಾರ್ಮಿಕರ



ಆದಾಯವನ್ನು ಹೆಚ್ಚಳ ಮಾಡುವ ನಿಟ್ಟಿನಲ್ಲಿ ಸರ್ಕಾರಗಳು ನೀತಿಗಳನ್ನು ರೂಪಿಸದಿರುವುದು ದುರಂತ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತಿ ನೌಕರರ ಸಂಘದ ಅಧ್ಯಕ್ಷರಾದ ಮಾರುತಿ ಮಾನ್ಪಡೆಯವರು ಮಾತನಾಡಿ ದೇಶವನ್ನು ಮೋದಿಯವರ ದುರಾಡಳಿತದಿಂದ ಮುಕ್ತ ಮಾಡಬೇಕಿದೆ. ರೈತರು ಕಾರ್ಮಿಕರನ್ನು ರಕ್ಷಿಸಬೇಕಿದೆ. ಮೋದಿಯವರ ಆರ್ಥಿಕ ನೀತಿಗಳನ್ನು ಭಾರತದಿಂದ ಕಿತ್ತೊಗೆಯಬೇಕಿದೆ ಅದಕ್ಕಾಗಿ ಈ ಕೆಂಬಾವುಟ ಹಿಡಿಯಲೇಬೇಕಿದೆ ಎಂದರು. ಹಾಗೆಯೇ ರಾಜ್ಯದಲ್ಲಿನ ಯಡಿಯುರಪ್ಪ ಸರ್ಕಾರವೂ ಅದೇ ದಾರಿಯಲ್ಲಿ ಸಾಗುತ್ತಿದೆ ಕನಿಷ್ಠ ಸೌಜನ್ಯಕ್ಕಾದರೂ ಪ್ರವಾಹ ಪೀಡಿತ ಪ್ರದೇಶದ ಜನರನ್ನು ಅವರ ಕಷ್ಟಗಳನ್ನು ಕೇಳಿ, ಪರಿಹಾರ ಕೊಡಲು ಹಣವಿಲ್ಲವೆಂದು ಹೇಳುತ್ತಾರೆ ಆದರೆ ಶಾಸಕರನ್ನು ಕೊಂಡುಕೊಳ್ಳಲು ಅಧಿಕಾರ ಹಿಡಿಯಲು ಹಣವಿದೆ ಎಂದು ಟೀಕಿಸಿದರು. ಪ್ರವಾಹದಿಂದ ತತ್ತರಿಸಿರುವ ಕರ್ನಾಟಕದಲ್ಲಿ ನೆರೆಯಿಂದಾಗಿ ಮನೆಮಠಗಳನ್ನು ಕಳೆದುಕೊಂಡು ಜನ ಬೀದಿಗೆ ಬಿದ್ದಿದ್ದಾರೆ. ಒಂದು ಸೂರನ್ನೂ ಕೂಡ ಕಟ್ಟಿಸಿಕೊಡಲು ಇವರಿಂದ ಸಾಧ್ಯವಾಗಿಲ್ಲವೆಂದರೆ ಇದು ನಾಚಿಕೆಯಾಗುವ ವಿಷಯವೆಂದರು.


ಸಿಐಟಿಯು ಜಿಲ್ಲಾಧ್ಯಕ್ಷರಾದ ಧರ್ಮೇಶ್ ಮಾತನಾಡಿ ಇಂದು ನಡೆಯುತ್ತಿರುವ ಹಾಸನ ಜಿಲ್ಲಾ ಸಮ್ಮೇಳನವು ಕಾರ್ಮಿಕರ, ರೈತರ, ಜನಸಾಮಾನ್ಯರ ಹಕ್ಕುಗಳ ಆಧಾರದಲ್ಲಿ ಚರ್ಚಿಸಿ ಎಲ್ಲರಿಗೂ ಸಿಗಬೇಕಾದ ಹಕ್ಕುಗಳಿಗಾಗಿ ನಿರಂತರ ಹೋರಾಟಕ್ಕೆ ಸಜ್ಜಾಗಲು ಮುನ್ನುಡಿಯಾಗುತ್ತಿದೆ ಎಂದರು. ದೇಶದಲ್ಲಿ ಕಾರ್ಮಿಕರು ಗುಲಾಮರಂತೆ ದುಡಿದರೂ ನೆಮ್ಮದಿಯ ಜೀವನವನ್ನು ನಡೆಸಲು ಸಾಧ್ಯವಾಗುತ್ತಿಲ್ಲವಾಗಿದೆ. ಸರಿಯಾದ ಸಂಬಳ ಸಿಗದೆ ಪರದಾಡುವಂತಾಗಿದೆ. ಮೋದಿಯವರ ಕಾರ್ಪೋರೇಟ್ ನೀತಿಗಳಿಂದಾಗಿ ಸಾರ್ವಜನಿಕ ಉದ್ದಿಮೆಗಳು ಮುಚ್ಚಿ ಹೋಗುತ್ತಿವೆ ಇದರಿಂದಾಗಿ ಲಕ್ಷಾಂತರ ಕುಟುಂಬಗಳು ಬೀದಿಗೆ ಬೀಳುವ ಪರಿಸ್ಥಿತಿ ಎದುರಾಗಲಿದೆ ಇಂತಹ ನೀತಿಗಳ ವಿರುದ್ಧ ದುಡಿಯುವ ಜನ ಸಂಘಟಿತರಾಗಿ ಐಕ್ಯ ಹೋರಾಟ ನಡೆಸಬೇಕು ಎಂದು ಕರೆ ನೀಡಿದರು.


ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾಧ್ಯಕ್ಷರಾದ ಎಚ್.ಆರ್ ನವೀನ್ ಕುಮಾರ್ ಮಾತನಾಡಿ ಇಂದು ನಮ್ಮ ದೇಶದಲ್ಲಿ ಜನಸಾಮಾನ್ಯರಿಂದ ಲೂಟಿ ಹೊಡೆದು ಸರ್ಕಾರದ ಬೊಕ್ಕಸ ತುಂಬಿಸಿಕೊಳ್ಳುವ ಮಸೂದೆಗಳನ್ನು ಜಾರಿಗೆ ತರಲಾಗಿದೆ. ಮೋದಿಯವರು ಮೋಟಾರು ವಾಹನ ಮಸೂಧೆಯನ್ನು ತಂದು ಜನರಿಂದ ಹಣ ವಸೂಲಿ ಮಾಡುತ್ತಿದೆ. ಇದರ ಬದಲು ಹಾಳಾದ ರಸ್ತೆಗಳಲ್ಲಿ ಸಂಚಾರ ಮಾಡಲಾಗದೆ ಬಿದ್ದು ಪ್ರಾಣ ಕಳೆದುಕೊಳ್ಳುತ್ತಿರುವ ಜನರನ್ನು ರಕ್ಷಿಸಲು ರಸ್ತೆ ಕಾನೂನು ಮಸೂದೆಗಳನ್ನು ತಂದು ಎಲ್ಲಾ ರಸ್ತೆಗಳನ್ನು ಗುಂಡಿ ಮುಕ್ತಗೊಳಿಸಿ ನಂತರ ವಾಹನ ಮಸೂದೆ ಜಾರಿ ಬಗ್ಗೆ ಯೋಚಿಸಬೇಕಿತ್ತು ಎಂದರು. ರೈತರು ಇಂದು ತಾವು ಬೆಳೆದ ಬೆಳೆಗೆ ಸರಿಯಾದ ಬೆಲೆ ಸಿಗದೆ ನಷ್ಟ ಅನುಭವಿಸುತ್ತಿದ್ದು ಖಾಸಗೀ ಸಾಲ, ಬ್ಯಾಂಕ್ ಸಾಲಗಳನ್ನು ತೀರಿಸಲಾಗದೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದರೂ ಸಹ ತಲೆ ಕೆಡಿಸಿಕೊಳ್ಳದೆ ಸಮುದ್ರ ತೀರದಲ್ಲಿ ಕಸ ಬಾಚುವಂತಹ ಷೋ ಕಾರ್ಯಕ್ರಮಗಳನ್ನು ನಡೆಸಿಕೊಂಡು ಮೋದಿಯವರು ತಮ್ಮ ಸಮಯಗಳನ್ನು ಕಳೆಯುತ್ತಿರುವುದು ದುರಂತವೇ ಸರಿ ಎಂದರು.

ಬಹಿರಂಗ ಸಭೆಯ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಸಿಐಟಿಯುನ ಗೌರವಾಧ್ಯಕ್ಷರಾದ ವಿ.ಸುಕುಮಾರ್ ರವರು ನಮ್ಮ ಚಳುವಳಿಗೆ ಎಂದೂ ಸಾವಿಲ್ಲ ನಮ್ಮ ವಿಚಾರಗಳಿಗೆ ಸಾವಿಲ್ಲ. ನಮ್ಮ ದೇಶದ ಶಕ್ತಿಯಾಗಿರುವ ದುಡಿಯುವ ಜನರನ್ನು ಸಂಘಟಿಸಿ ಹೋರಾಟಕ್ಕೆ ಇಳಿಯಬೇಕಿದೆ ಆ ದಿಕ್ಕಿನಲ್ಲಿ ನಮ್ಮ ಸಮ್ಮೇಳನ ಯಶಸ್ವಿಯಾಗಲಿ ಎಂದು ಹೇಳಿದರು. ವೇದಿಕೆಯಲ್ಲಿ ಸಿಐಟಿಯು ಮುಖಂಡರಾದ ಜಿ.ಪಿ ಸತ್ಯನಾರಾಯಣ, ಎಂ.ಬಿ ಪುಷ್ಪ, ಅಶೋಕ್, ಅರವಿಂದ್, ಸೌಮ್ಯ, ಬೋಜಪೂಜಾರಿ, ಹಾಜರಿದ್ದರು. ಮಂಜುನಾಥ್ ಕೆ.ಎಸ್ ಕಾರ್ಯಕ್ರಮ ನಿರ್ವಹಿಸಿದರು. ●

ನವಂಬರ್, 18 ರಿಂದ: ನಿವೇಶನ ರಹಿತರಿಗೆ ಸರಕಾರಿ ಜಾಗ ಮಂಜೂರಾತಿಗೆ ಆಗ್ರಹಿಸಿ ಉಡುಪಿ ಡಿ. ಸಿ. ಕಚೇರಿ ಚಲೋ ಹೋರಾಟ – ವೆಂಕಟೇಶ್ ಕೋಣಿ ಕರೆ


ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಉಡುಪಿ ಜಿಲ್ಲಾ ಸಮಿತಿ ಮತ್ತು ಮನೆ, ನಿವೇಶನ ರಹಿತರ ಹೋರಾಟ ಸಮಿತಿಯ ಆಶ್ರಯದಲ್ಲಿ ಉಡುಪಿ ಜಿಲ್ಲೆಯಾದ್ಯಂತ ಸರಕಾರದಿಂದ ಸಮೀಕ್ಷೆಯಲ್ಲಿ ಆಯ್ಕೆಗೊಂಡ ಅರ್ಹ ಬಡ ನಿವೇಶನ ರಹಿತ ಫಲಾನುಭವಿಗಳಿಗೆ ಭೂಮಿ ಮಂಜೂರು ಮಾಡಲು ಸರಕಾರಿ/ಖಾಸಗೀ ಜಾಗ ಗುರುತಿಸಬೇಕೆಂದು ಒತ್ತಾಯಿಸಿ 18 ನವಂಬರ್ 2019 ಸೋಮವಾರದಿಂದ ಅನಿರ್ದಿಷ್ಟಾವಧಿ ಉಡುಪಿ (ಮಣಿಪಾಲ) ಜಿಲ್ಲಾಧಿಕಾರಿ ಕಛೇರಿ ಎದುರು ಜರಗುವ ನಿವೇಶನ ರಹಿತರ ಭೂಮಿ ಹಕ್ಕಿನ ನಿರ್ಣಾಯಕ ಹೋರಾಟವನ್ನು ಯಶಸ್ವಿಗೊಳಿಸಬೇಕು ಎಂದು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಉಡುಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವೆಂಕಟೇಶ ಕೋಣಿ ಕರೆ ನೀಡಿದರು. 20 ನವಂಬರ್ 2019 ರಂದು ಬೈಂದೂರು ಸಿಐಟಿಯು ಕಚೇರಿ ಸಭಾಂಗಣದಲ್ಲಿ ಜರಗಿದ ಬೈಂದೂರು, ತಗ್ಗರ್ಸೆ ಪಡುವರಿ, ಯಡ್ತರೆ ಗ್ರಾಮಗಳ ನಿವೇಶನ ರಹಿತರ ಬೃಹತ್ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು.ನಿವೇಶನ ರಹಿತರ ಕೈಗೆ ಭೂಮಿ ಹಕ್ಕು ಪತ್ರ ಸಿಗುವ ತನಕ ಈ ಹೋರಾಟದಿಂದ ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ ಎಂದು ಸಮಾವೇಶದಲ್ಲಿ ಒಮ್ಮತದ ತೀರ್ಮಾನ ಮಾಡಲಾಯಿತು. ಮುಖಂಡರಾದ ಮಂಜು ಪಡವರಿ, ರೊನಾಲ್ಡ್ ರಾಜೇಶ್ ಕ್ವಾಡ್ರಸ್, ಅಮ್ಮಯ್ಯ ಪೂಜಾರಿ, ರಾಘವೇಂದ್ರ ಉಪ್ಪುಂದ, ರೋನಿ ನಜರತ್,





ಜಯಶ್ರೀ ಪಡುವರಿ, ಶೀಲಾವತಿ, ನಾಗರತ್ನ ನಾಡ, ರಾಜೀವ ಪಡುಕೋಣೆ ಉಪಸ್ಥಿತರಿದ್ದರು.

ವರದಿ: ರಾಜೀವ ಪಡುಕೋಣೆ





ವಿ.ಎನ್.ಲಕ್ಷ್ಮೀನಾರಾಯಣ

ಬಹುತೇಕ ನೆಟ್ಟಿಗರು ಜಾಲತಾಣಗಳಿಂದ ಪಡೆಯುವ ಸಂತೋಷ, ಸಂತೃಪ್ತಿಗಳು ಬಂಡವಾಳಶಾಹಿ ದೈತ್ಯ ಸಂಸ್ಥೆಗಳ ಲಾಭಕೋರತನವನ್ನು, 'ಬಿಟ್ಟಿ ದುಡಿಮೆಯ' ಮೂಲಕ ನೆಟ್ಟಿಗರ ಸಾಮಾಜಿಕ ಶ್ರಮವನ್ನು ಖಾಸಗಿ ಸಂಪತ್ತನ್ನಾಗಿ ಶೇಖರಿಸುವ ಬಂಡವಳಿಗರ ಅಮಾನುಷತೆ, ಅಮಾನವೀಯತೆಯನ್ನು ಇಲ್ಲವೆನಿಸುವುದಿಲ್ಲ. ಬಂಡವಾಳದ ಏಕೈಕ ಗುರಿ ಲಾಭ, ಹೆಚ್ಚು ಲಾಭ! ಹೊಸ ಹೊಸ ತಂತ್ರಜ್ಞಾನಗಳ ಆವಿಷ್ಕಾರ ಜನಸಾಮಾನ್ಯರಲ್ಲಿ ಕಡಿಮೆ ಶ್ರಮ, ಹೆಚ್ಚಿನ ಸುಖ-ನೆಮ್ಮದಿಗಳ ಆಸೆ ಹುಟ್ಟಿಸಿದರೆ, ಬಂಡವಳಿಗರಿಗೆ ಅವನ್ನು ತಮ್ಮ ತೆಕ್ಕೆಗೆ ಪಡೆದುಕೊಂಡು ಶ್ರಮಿಕರ ಬಿಟ್ಟಿ ದುಡಿಮೆಯನ್ನು ಸಂಪತ್ತನ್ನಾಗಿಸುವುದು ಹೇಗೆಂಬ ಹಂಚಿಕೆಯಾಗಿರುತ್ತದೆ. ಈ ಮಾಹಿತಿ-ಪ್ರಧಾನ ಡಿಜಿಟಲ್ ಯುಗದ ಬಂಡವಾಳದಲ್ಲಿ ಸಾಮಾಜಿಕ ಜಾಲತಾಣಗಳ ಹಿಂದಿರುವ ರಾಜಕೀಯವನ್ನು ಅವುಗಳು ಮುಂದೆ ಮಾಡುವ ತಾತ್ಕಾಲಿಕ ಸಂತೋಷವು ಮರೆಸದಂತೆ ನೋಡಿಕೊಳ್ಳುವ ಎಚ್ಚರ ಅತ್ಯಂತ ಮುಖ್ಯವಾದದ್ದು.

ಬಿಟ್ಟಿ ದುಡಿಮೆಯ ನೆಟ್ಟಿಗರು ಮತ್ತು ಸಾಮಾಜಿಕ ಜಾಲತಾಣಗಳು

ಜನಸಾಮಾನ್ಯರ ಅರಿವಿಗೆ ಸುಲಭವಾಗಿ ನಿಲುಕದ, ಸಂವಹನ ತಂತ್ರಜ್ಞಾನ, ಮಾಹಿತಿ ತಂತ್ರಜ್ಞಾನ, ಡಿಜಿಟಲ್ ತಂತ್ರಜ್ಞಾನ ಮತ್ತು ಚಿನ್ಹೆಗಳನ್ನು ಬಳಸುವ ಅಲ್ಗೊರಿದಮ್ ಎಂಬ ತಂತ್ರ ಭಾಷೆಯ ಸಂಕೀರ್ಣ ಕೂಸಾದ 'ಜಾಲತಾಣ'ವು ಅದರ ಹೆಸರೇ ಹೇಳುವಂತೆ ಮಾಹಿತಿ-ಸಂದೇಶ-ಚಿತ್ರ-ಸಂಗೀತ-ಆಟಗಳನ್ನು ಒದಗಿಸುವ ಪರಸ್ಪರ ಸಂಬಂಧಗಳಿಂದಾದ 'ತಾಣಗಳ ಜಾಲ'. ಮೇಲುನೋಟಕ್ಕೆ ಬಯಸಿದವರೆಲ್ಲರಿಗೂ ಬಯಸಿದ್ದನ್ನು ಬಿಟ್ಟಿಯಾಗಿ ಕೊಡುವಂತೆ ತೋರುವ ಈ ತಾಣಗಳ ಜಾಲದಲ್ಲಿ ವಾಸ್ತವವಾಗಿ ಏನು ನಡೆಯುತ್ತಿದೆಎಂಬುದರ ಬಗ್ಗೆ ತಲೆಕೆಡಿಸಿಕೊಂಡವರು ಕಡಿಮೆಯೇ. ಈ ಜಾಲತಾಣಗಳು ಬಿಟ್ಟಿ ಎನ್ನುವುದಾದರೆ, ಬೇಕೆನ್ನುವವರಿಗೆಲ್ಲಾ ಬಿಟ್ಟಿಯಾಗಿ ಏಕೆ ಸಿಗುತ್ತಿವೆ? ಹೇಗೆ ಸಿಗುತ್ತಿವೆ? ಈ ಜಾಲಗಳನ್ನು ನಿರ್ವಹಿಸಲು ತಗಲುವ ಖರ್ಚನ್ನು ಹೇಗೆ ನಿಭಾಯಿಸುತ್ತಾರೆ? ಅಥವಾ ಯಾರು ಕೊಡುತ್ತಿದ್ದಾರೆ? ಇವುಗಳಲ್ಲಿ ನಡೆಯುತ್ತಿರುವುದು ಯಾರಿಗೆ ಯಾರ ನಿರ್ದೇಶನವೂ ಇಲ್ಲದೆ ನೆಟ್ಟಿಗರು ತಮಗೆ ತಾವೇ ಮಾಡಿಕೊಂಡಿರುವ ಸಾಮಾಜಿಕ ಏರ್ಪಾಟಾಗಿದೆಯೆ? ಅಥವಾ ಖಂಡಾತರದಲ್ಲೆಲ್ಲೋ ಕುಳಿತಿರುವ, ಅಗೋಚರ ಜಾಲಿಗರ ಕೈಗೆ ಸಿಕ್ಕ ನೆಟ್ಟಿಗರು ಅನಿವಾರ್ಯವಾಗಿ ಆಡುತ್ತಿರುವ ಒಂದು ಮಾಯದ ಆಟವೆ? ಅಥವಾ ಅವರಿಗೇ ಗೊತ್ತಿಲ್ಲದಂತೆ ತಮ್ಮ ಖರ್ಚಿನಲ್ಲೇ ಆ ಜಾಲಿಗರಿಗಾಗಿ ಮಾಡುತ್ತಿರುವ ಬಿಟ್ಟಿ ದುಡಿಮೆಯೆ? ಕೆಲವರು ಇದು ಮನೋರಂಜನೆಯ ಆಕರ ಎನ್ನುತ್ತಾರೆ. ಇನ್ನು ಕೆಲವರು ಖರ್ಚಿಲ್ಲದ ಮಾಹಿತಿಯ ಭಂಡಾರ ಎನ್ನುತ್ತಾರೆ. ಮತ್ತೆ ಕೆಲವರಿಗೆ ಇದು ಯಾರ ನಿಯಂತ್ರಣಕ್ಕೂ ಸಿಗದೆ ಸ್ವಚ್ಛಂದವಾಗಿರುವ ಪ್ರಜಾತಾಂತ್ರಿಕ ಮಾಧ್ಯಮ. ಅಲ್ಲೊಬ್ಬರು, ಇಲ್ಲೊಬ್ಬರು ಇದು ಜನರ ಖಾಸಗಿತನಕ್ಕೆ ಲಗ್ಗೆ ಇಟ್ಟ ಆಧುನಿಕ ಗೂಢಚಾರಿಕೆಯ ತಂತ್ರಗಾರಿಕೆ ಎಂದು ಹೇಳುತ್ತಾರೆ. ಸಾಮಾಜಿಕ ಜಾಲತಾಣಗಳ ಒಡಲಿನಲ್ಲಿ ಇವೆಲ್ಲವೂ ಇರಬಹುದು, ಜೊತೆಗೆ ವರ್ಷವರ್ಷವೂ ಜಾಹಿರಾತುದಾರರರೊಂದಿಗಿನ ಮಾಹಿತಿ ರಾಶಿಯ ವ್ಯಾಪಾರದಲ್ಲಿ ಕೋಟ್ಯಾಂತರ ಡಾಲರ್ ಗಳಿಸುತ್ತಿರುವ ವ್ಯಾಪಾರೀ ಸಂಸ್ಥೆಗಳೂ ಹೌದು ಎನ್ನುವುದು ಆ ಸಂಸ್ಥೆಗಳೇ ಪ್ರಕಟಿಸುವ ಷೇರು ಬೆಲೆ ಮತ್ತು ವಾರ್ಷಿಕ ಲೆಕ್ಕಪತ್ರಗಳಿಂದ ತಿಳಿದುಬರುತ್ತದೆ. ಈ ಮಾಹಿತಿಯನ್ನು ಈ ಜಾಲತಾಣಗಳಿಗೆ ಒದಗಿಸುತ್ತಿರುವವರು ಯಾರು? ನೆಟ್ಟಿಗರು ತಮ್ಮ ಸ್ವಂತ ಹಣ, ಸಮಯ, ಉಪಕರಣಗಳನ್ನು ವ್ಯಯಮಾಡಿ ಜಾಲತಾಣಗಳನ್ನು ತಮ್ಮದೇ ಆದ ಸ್ವಂತ ಕಾರಣ-ಉದ್ದೇಶಗಳಿಗಾಗಿ ಬಳಸುತ್ತಾರೆ ಎಂಬುದು ಸ್ಪಷ್ಟವಾಗೇ ಇದೆ. ಹಾಗೆಯೇ ಅವರು ಹಾಗೆ ಜಾಲತಾಣಗಳನ್ನು ಬಳಸುವಾಗ ಬೇಕಾದಷ್ಟು ಸ್ವವಿರಗಳನ್ನು, ಅವರಿಗೆ ಸಂಬಂಧಿಸಿದ ಇತರ ಮಾಹಿತಿಗಳನ್ನು ನೇರವಾಗಿ, ಪರೋಕ್ಷವಾಗಿ ಈ ಜಾಲತಾಣಗಳಿಗೆ ಒದಗಿಸುತ್ತಾರೆ ಎಂಬುದೂ ನಿಜವೇ. ನೆಟ್ಟಿಗರು ಸಾಮಾಜಿಕ ಜಾಲತಾಣ ಸಂಸ್ಥೆಗಳ ಕೂಲಿಗಳಾಗಿ ಬಿಟ್ಟಿ ದುಡಿಮೆಯನ್ನು ಒದಗಿಸುತ್ತಿದ್ದಾರೆ ಎಂಬ ವಾದವಿದೆ. ಆದರೆ, ನೆಟ್ಟಿಗರೇನೂ ಕೊಟ್ಟಮಾಹಿತಿಗಾಗಿ ಸಾಮಾಜಿಕ ಜಾಲತಾಣ ಸಂಸ್ಥೆಗಳಿಂದ ಕೂಲಿ ಅಥವಾ ವೇತನವನ್ನೇನೂ ಪಡೆಯುವುದಿಲ್ಲ. ಅಂದ ಮೇಲೆ ಅವರು ಜಾಲತಾಣಗಳ ದುಡಿಮೆಗಾರರು ಹೇಗಾದಾರು? ನೆಟ್ಟಿಗರನ್ನು ದುಡಿಮೆಗಾರರು ಎಂದು ಪರಿಗಣಿಸಿದರೆ ತಾನೆ, ಅವರು ಬಿಟ್ಟಿ ದುಡಿಮೆಗಾರರಾಗುವ ಪ್ರಶ್ನೆ?

ಕಾರ್ಲ್‌ಮಾರ್ಕ್ಸ್ ಪ್ರಕಟಿಸಿದ ಬರಹಗಳಲ್ಲಿ ಬಹು ಮುಖ್ಯವಾದ ಎರಡು ನಿರ್ವಚನಗಳು ಇವೆ. ಅವುಗಳಲ್ಲಿ ಒಂದು ಶ್ರಮ. ಜೀವನಾಗತ್ಯ ವಸ್ತುಗಳ ಸೃಷ್ಟಿಗಾಗಿ ಶ್ರಮಿಕರು ಮಾಡುವ ಎಲ್ಲ ಕ್ರಿಯೆಗಳೂ ಶ್ರಮವೇ. ಈ ಸೃಷ್ಟಿಯಲ್ಲಿ ದೇಹ ಮತ್ತು ಮನಸ್ಸು (ಅಂದರೆ ಆಲೋಚನೆ, ಕಲ್ಪನೆ, ಪ್ರತಿಭೆ, ಕೌಶಲ, ತಂತ್ರ ಇತ್ಯಾದಿ) ಎರಡೂ ಸೇರಿರಬಹುದು. ಶ್ರಮಿಕರ ಶ್ರಮದ ಉತ್ಪನ್ನವು ದೈಹಿಕಶ್ರಮ ಪ್ರಧಾನವಾಗಿ ಹುಟ್ಟಿದ 'ವಸ್ತು' ಇರಬಹುದು. ಉದಾಹರಣೆಗೆ ಒಂದು ಕೋಟು ಅಥವಾ ಒಂದು ಜೊತೆ ಚಪ್ಪಲಿ. ಹಾಗೆಯೇ ಮಾನಸಿಕಶ್ರಮ ಪ್ರಧಾನವಾಗಿ ಸೃಷ್ಟಿಯಾದ 'ಸೇವೆ' ಇರಬಹುದು. ಉದಾಹರಣೆಗೆ, ತಂತ್ರಜ್ಞಾನ ಅಥವಾ ವಾಸ್ತುಶಿಲ್ಪ. ಆಧುನಿಕ ಕಾಲದ ಉದಾಹರಣೆಗಳನ್ನು ತೆಗೆದುಕೊಳ್ಳುವುದಾದರೆ, ಕಂಪ್ಯೂಟರ್ ಒಂದು ವಸ್ತು. ಅಲ್ಗೊರಿದಮ್ ಭಾಷೆಯಲ್ಲಿ ರಚಿಸಿದ ಸಾಫ್ಟ್‌ವೇರ್ ಒಂದು ಸೇವೆ. ವ್ಯಾವಹಾರಿಕವಾಗಿ ಕೋಟನ್ನು ಅಥವಾ ಕಂಪ್ಯೂಟರನ್ನು ಭೌತಿಕವಾದುದೆಂದೂ, ತಂತ್ರಜ್ಞಾನ, ಯಾವುದೇ ಜ್ಞಾನ ಅಥವಾ ಸಾಫ್ಟ್‌ವೇರ್‌ಅನ್ನು ಅಭೌತಿಕವೆಂದೂ ಕರೆಯುವುದು ಹಿಂದಿನಿಂದಲೂ ವಾಡಿಕೆಯಾಗಿದೆ. ಮಡಕೆ ಎಂಬುದು ಜೇಡಿ, ನೀರು ಮತ್ತು ಬೆಂಕಿ ಎಂಬ ವಸ್ತುಗಳನ್ನು ದೇಹಶ್ರಮ ಮತ್ತು ಮೇಧಾಶ್ರಮದ ಮೂಲಕ ಸಂಯೋಜಿಸಿದ ಭೌತಿಕವಸ್ತು. ಮಾನವ ದೇಹದಲ್ಲಿ ಹುಟ್ಟುವ ಶ್ರಮಶಕ್ತಿಯೂ ಸೇರಿದಂತೆ ಶಕ್ತಿಯ ಎಲ್ಲ ರೂಪಗಳೂ ಅಗೋಚರವೇ ಹೊರತು ಅಭೌತಿಕವಲ್ಲ. ('ಮಡಕೆಯ ಮಾಡುವರೆ ಮಣ್ಣೇ ಮೊದಲು..' ಎಂಬ ಬಸವಣ್ಣನವರ ವಚನವನ್ನು ಇಲ್ಲಿ ನೆನಪಿಸಿಕೊಳ್ಳಬಹುದು'). 'ದೈಹಿಕಶ್ರಮದಿಂದ ಹುಟ್ಟಿದ್ದು ಭೌತಿಕ, ಬೌದ್ಧಿಕಶ್ರಮದಿಂದ ಹುಟ್ಟಿದ್ದು ಅಭೌತಿಕ' ಎನ್ನುವ ವಿಭಾಗದ ಹಿಂದೆ ಭಾವನಾವಾದೀ ತರ್ಕದ ಪ್ರಭಾವ ಇದೆ. ಅಂದರೆ, ವಸ್ತುವಿನಿಂದ ಬೇರೆಯಾಗಿ ಅಭೌತಿಕವಾಗಿರುವುದು ಯಾವುದೂ ಇಲ್ಲ. ಮತ್ತು ಇವು ಶ್ರಮಸಂಬಂಧಜಾಲದಲ್ಲಿ ಸೃಷ್ಟಿಯಾಗುವುದರಿಂದ ಯಾವಾಗಲೂ ಸಾಮಾಜಿಕವೇ.

ಮಾರ್ಕ್ಸ್ ಮಾಡಿದ ಎರಡನೆಯ ಮುಖ್ಯ ನಿರ್ವಚನ, ಮೌಲ್ಯ. ಪ್ರಾಕೃತಿಕ ವಸ್ತುಗಳಿಗೆ ಮೌಲ್ಯವಿಲ್ಲ. ಮಾನವ ಶ್ರಮವನ್ನು ಅವಕ್ಕೆ ಸೇರಿಸಿದಾಗ ಮೌಲ್ಯ ಪ್ರಾಪ್ತಿಯಾಗುತ್ತದೆ. ಮೌಲ್ಯದಲ್ಲಿ ಎರಡು ವಿಧ. ಉಪಯೋಗಮೌಲ್ಯ ಮತ್ತು ವಿನಿಮಯ ಮೌಲ್ಯ. ಬಂಡವಳಿಗರು ಶ್ರಮಿಕರ ಶ್ರಮಶಕ್ತಿಯನ್ನು ಖರೀದಿಸಿ ಅವರಿಂದ ಪಡೆದ ಶ್ರಮದ ಒಂದು ಭಾಗಕ್ಕೆ ಮಾತ್ರ ವೇತನ ಕೊಟ್ಟು ವೇತನ ಕೊಡದ ಶ್ರಮದ ಹೆಚ್ಚುವರಿ ಫಲವನ್ನು (ಮಿಗುತಾಯ ಮೌಲ್ಯವನ್ನು) ಅವರೇ ಇಟ್ಟುಕೊಳ್ಳುತ್ತಾರೆ. ಅಂದರೆ ಶ್ರಮಿಕರಿಂದ ಪಡೆದ ಬಿಟ್ಟಿ ದುಡಿಮೆಯೇ ಮತ್ತಷ್ಟು ಬಿಟ್ಟಿದುಡಿಮೆಗೆ ಬಂಡವಾಳವಾಗಿ ಶ್ರಮಿಕರ ಮೇಲಿನ ಶೋಷಣೆಯು ಮುಂದುವರೆಯುತ್ತದೆ. ಈ ವಿಶ್ವದ ಸಂಪತ್ತೆಲ್ಲವೂ ಶ್ರಮಿಕರ ಪಾವತಿ ಮಾಡದ ಬಿಟ್ಟಿ ದುಡಿಮೆಯ ಫಲವಾದ ಮಿಗುತಾಯ ಮೌಲ್ಯದ ಸಂಚಯವೇ. ವ್ಯಾಪಾರದ ಲಾಭ, ಭೂಮಿಯ ಬಾಡಿಗೆ ಮತ್ತು ಹಣದ ವ್ಯಾಪಾರದ ಬಡ್ಡಿಗಳು ಈ ಮಿಗುತೆ ಮೌಲ್ಯದ ವಿವಿಧ ರೂಪಗಳು.

ಈ ನಿರ್ವಚನಗಳನ್ನು ಹೇಗಿವೆಯೋ ಹಾಗೆ ಇವತ್ತಿನ ಸನ್ನಿವೇಶಕ್ಕೆ ಅನ್ವಯಿಸಿದರೆ, ನೆಟ್ಟಿಗರು ಜಾಲಿಗರಿಗೆ ಯಾವ ಬಿಟ್ಟಿ ದುಡಿಮೆಯನ್ನೂ ಕೊಡುತ್ತಿಲ್ಲ ಮತ್ತು ಅವರ ಶೋಷಣೆ ನಡೆಯುತ್ತಿಲ್ಲ ಎಂದು ಸ್ಪಷ್ಟವಾಗುತ್ತದೆ ಎಂಬುದು ಕೆಲವು ಚಿಂತಕರ ವಾದ. ಏಕೆಂದರೆ, ಅವರ ಪ್ರಕಾರ ಬಂಡವಳಿಗರು ಶ್ರಮಿಕರನ್ನು ಕೂಲಿ/ವೇತನ ಕೊಟ್ಟು ಉತ್ಪಾದನೆಯಲ್ಲಿ ತೊಡಗಿಸಿ ಅವರಿಂದ ಅಗತ್ಯ ಶ್ರಮದ ಜೊತೆಗೆ ಹೆಚ್ಚುವರಿ ಶ್ರಮವನ್ನು ಪಡೆದುಕೊಂಡರೆ ಮಾತ್ರ ಬಿಟ್ಟಿ ದುಡಿಮೆ ಇದೆ ಎಂದು ಹೇಳಬಹುದು.

ಮತ್ತೆ ಕೆಲವರು, ಮಾರ್ಕ್ಸ್ ನಿರ್ವಚಿಸುವ ಶ್ರಮ, ಮೌಲ್ಯ, ಬಿಟ್ಟಿದುಡಿಮೆ ಮತ್ತು ಮಿಗುತಾಯ ಮೌಲ್ಯಗಳ ಆಂತರ್ಯವನ್ನು ವಿಸ್ತರಿಸಿದರೆ ಮಾತ್ರ ಈ ಡಿಜಿಟಲ್ ಯುಗದ ಬಂಡವಾಳವಾದದ ಹೊಸ ವರಸೆಗಳು ಅರ್ಥವಾಗುತ್ತವೆ ಎಂದು ವಿವರಿಸುತ್ತಾರೆ.


ಈ ವಾದ-ವಿವಾದಗಳಲ್ಲಿನ ಸತ್ಯಾಸತ್ಯತೆಯನ್ನು ಅರ್ಥಮಾಡಿಕೊಳ್ಳುವುದಕ್ಕಾಗಿ ಜಾಗತೀಕರಣ ಪ್ರಾರಂಭವಾದ ಹೊಸದರಲ್ಲಿ, ಕಂಪ್ಯೂಟರ್, ಸ್ಮಾರ್ಟ್‌ಫೋನ್, ಜಾಲತಾಣಗಳು ಮತ್ತು ಸಾಮಾಜಿಕ ಜಾಲತಾಣಗಳು ಜನಸಾಮಾನ್ಯರನ್ನು ಆವರಿಸುವ ಮೊದಲು, ಕೆಲವು ಸಂದರ್ಭಗಳಲ್ಲಿ ಈಗಲೂ, ಬಂಡವಾಳಶಾಹಿ ವ್ಯಾಪಾರಿ-ಉದ್ಯಮಿಗಳು ಜನರಿಂದ ಮಾಹಿತಿ ಸಂಗ್ರಹಿಸಲು ಬಳಸುತ್ತಿದ್ದ ಕಲವು ವಿಧಾನಗಳನ್ನು ಪರಿಶೀಲಿಸಬಹುದು.

ಹಿಂದೆ-1. ಒಂದು ಉತ್ಪನ್ನದ ಮಾರಾಟಕ್ಕೆ ಸಂಬಂಧಿಸಿದಂತೆ ಬಳಕೆದಾರರ ಸಮೀಕ್ಷೆ ಮಾಡಬೇಕೆಂದರೆ, ಸಿಬ್ಬಂದಿಯನ್ನು ನೇಮಿಸಿಕೊಂಡು, ಮನೆ ಮನೆಗೆ ಹೋಗಿ ಸ್ಯಾಂಪಲ್‌ಗಳನ್ನು ಕೊಟ್ಟು, ಅವರ ಅಭಿಪ್ರಾಯಗಳನ್ನು ಪಡೆಯುವ ನೆಪದಲ್ಲಿ ಮನೆ ಮುಖ್ಯಸ್ಥನ ಸ್ವವಿವರ, ಮನೆ ಜನರ ವಿವರಗಳು, ಕುಟುಂಬದ ಆದಾಯ, ಶಿಕ್ಷಣ ಮಟ್ಟ, ಅಭಿರುಚಿ, ಇತ್ಯಾದಿ ವಿವರಗಳನ್ನು ಖುದ್ದಾಗಿ ಪಡೆಯಬೇಕಾಗಿತ್ತು. ಅದಕ್ಕೆ ತಗಲುತ್ತಿದ್ದ ವೆಚ್ಚ, ಸಮಯ ಮತ್ತು ಸಿಬ್ಬಂದಿಯ ತರಬೇತಿ ವೆಚ್ಚಗಳನ್ನು ಉದ್ಯಮಿಗಳೋ ಅವರ ಏಜೆಂಟರೋ ಭರಿಸಬೇಕಾಗಿತ್ತು. ಈ ಡಿಜಿಟಲ್ ಯುಗದಲ್ಲಿ ಮಾಲ್‌ಗಳಲ್ಲಿ, ಜಾತ್ರೆ-ಉತ್ಸವ-ಮೇಳಗಳು ನಡೆಯುವ ಸ್ಥಳಗಳಲ್ಲಿ ಕೇವಲ ಒಂದು ಪೆಟ್ಟಿಗೆ ಇಟ್ಟು ಬೇಕಾದ ವಿವರಗಳನ್ನು ಪೆಟ್ಟಿಗೆಯಲ್ಲಿ ಹಾಕಿದರೆ ಬಹುಮಾನವಿದೆ ಎಂದು ಪ್ರಕಟಿಸಿದರೆ ಸಾಕು, ಸಮೀಕ್ಷೆಯು ಬಳಕೆದಾರರ ಖರ್ಚಿನಲ್ಲೇ ನಡೆದುಬಿಡುತ್ತದೆ. ಇದೇ ವಿಧಾನವನ್ನು ಸಮೀಕ್ಷೆ ನಡೆಸಬೇಕಾದ ನಗರದ ಬೇರೆ ಬೇರೆ ಭಾಗಗಳಲ್ಲಿರಿಸಿ, ಬೆರಳೆಣಿಕೆಯ ಸಿಬ್ಬಂದಿಯೊಂದಿಗೆ ಬೇಕಾದ ಫಲಿತಾಶಗಳನ್ನು ಪಡೆದುಕೊಳ್ಳುವುದು ಈಗ ಸಾಧ್ಯವಾಗಿದೆ. ಇದನ್ನು ಮಾರ್ಕ್ಸ್ ಹೇಳುವ ಮಾಮೂಲಿ ಅರ್ಥದಲ್ಲಿ ಜನಸಾಮಾನ್ಯರ 'ಬಿಟ್ಟಿ ದುಡಿಮೆ' ಎನ್ನಬಹುದೆ? ಇಲ್ಲಿ ಬಳಕೆದಾರರ ಶೋಷಣೆ ನಡೆದಿದೆಯೆ?

ಈಗ-2. ಸ್ಪರ್ಧೆಯ ನೆಪದಲ್ಲಿ ದೊಡ್ಡ ಬಹುಮಾನದ ಆಸೆ ತೋರಿಸಿ ಸ್ಪರ್ಧಿಗಳ ಸ್ವಂತ ಖರ್ಚಿನಲ್ಲೇ ಹಾಡು, ನೃತ್ಯ ಮುಂತಾದ ಕಾರ್ಯಕ್ರಮಗಳನ್ನು ಅಗತ್ಯ ವೆಚ್ಚಗಳೊಂದಿಗೆ ಏರ್ಪಡಿಸಿ ಸ್ಪರ್ಧೆಯಲ್ಲಿ 'ಗೆದ್ದ' ವ್ಯಕ್ತಿ-ತಂಡದ ಕಾರ್ಯಕ್ರಮವಲ್ಲದೆ, ಆಯ್ದ ಕಾರ್ಯಕ್ರಮಗಳನ್ನೂ ತಿಂಗಳಾನುಗಟ್ಟಲೆ ಪ್ರಸಾರ ಸಾಮಗ್ರಿಯಾಗಿ ಬಳಸಿಕೊಳ್ಳುವ ವಿಧಾನ ಟಿವಿ ಕಂಪೆನಿಗಳಲ್ಲಿ ಈ ದಿನಗಳಲ್ಲಿ ಸಾಮಾನ್ಯವಾಗಿದೆ. ವ್ಯಕ್ತಿ ಅಥವಾ ತಂಡಗಳಿಗೆ ಎಲ್ಲ ಸಮಾಧಾನಕರ/ಸಾಂಕೇತಿಕ ಪುರಸ್ಕಾರಗಳನ್ನು ಕೊಟ್ಟಮೇಲೂ ಈ ವಿಧಾನದಲ್ಲಿ ಅಡಕವಾಗಿರುವ 'ಬಿಟ್ಟಿ ದುಡಿಮೆ'ಯ ಅಂಶವನ್ನು ಶೋಷಣೆ ಎನ್ನಲಾಗದೆ? ಹೆಚ್ಚು ಜನರು ವೀಕ್ಷಿಸಿದಷ್ಟೂ ಹೆಚ್ಚಿನ ಜಾಹಿರಾತುಗಳನ್ನು ಪಡೆಯುವ ಮೂಲಕ ಟಿವಿ ಕಂಪೆನಿಗಳು ಗಳಿಸುವ ಹಣವು ಪರೋಕ್ಷವಾಗಿ ಜನರಿಂದ ಉಪಾಯವಾಗಿ ಪಡೆಯುವ ಹೆಚ್ಚುವರಿ ಶ್ರಮದ ಮೌಲ್ಯವೇ ಅಲ್ಲವೆ?

3. ಬ್ಯಾಂಕಿನ ಸಿಬ್ಬಂದಿ ಒಂದು ಕಡೆ ಕುಳಿತು ಮಾಡುತ್ತಿದ್ದ ಕೆಲಸದ ಹೊರೆಯನ್ನು ವಿಕೇಂದ್ರೀಕರಿಸಿ, ಅವರಿಗೆ ಕೊಡುತ್ತಿದ್ದ ವೇತನ-ಭತ್ಯೆಗಳನ್ನು ಉಳಿಸಿ, ಡಿಜಿಟಲೀಕರಣದ ಹೆಸರಿನಲ್ಲಿ ಖಾತೆದಾರರೇ ತಮ್ಮ ಸ್ವಂತ ಖರ್ಚಿನಲ್ಲಿ ಏಟಿಎಮ್ ಗಳಿಗೆ ಹೋಗಿ ಅಥವಾ ಮನೆಯಲ್ಲೇ ಕುಳಿತು ತಮ್ಮ ಸ್ವಂತ ಖರ್ಚಿನಲ್ಲಿ ನಿರ್ವಹಿಸುವ ಕಂಪ್ಯೂಟರ್, ಸ್ಮಾರ್ಟ್‌ಫೋನ್‌ಗಳ ಮೂಲಕ ಖಾತೆದಾರರ ಕೈಲೆ ಮಾಡಿಸುವ 'ಸೇವೆ' ಯಾರ ಸೇವೆ? ಮೇಲುನೋಟಕ್ಕೆ ಖಾತೆದಾರರಿಗೆ ಒದಗಿಸಿದ ವಿಶೇಷ ಸೌಲಭ್ಯದಂತೆ ಕಾಣುವ ಈ 'ಸೇವೆ'ಯಲ್ಲಿ ಅಡಕವಾಗಿರುವುದು ಬ್ಯಾಂಕಿನ ಉದ್ಯೋಗಿಗಳಾಗಿ ಸಂಬಳ ಪಡೆಯದ ಜನರ 'ಬಿಟ್ಟಿ ದುಡಿಮೆ'ಯೇ ಅಲ್ಲವೆ? ಈ ಬಿಟ್ಟಿ ದುಡಿಮೆಯಿಂದ ಬ್ಯಾಂಕುಗಳಿಗೆ ಉಳಿತಾಯವಾಗುವ ಹಣವು ಮಾರ್ಕ್ಸ್ ಹೇಳುವ ಮಿಗುತಾಯ ಮೌಲ್ಯದ ಮತ್ತೊಂದು ರೂಪವಲ್ಲವೆ? ಹಾಗೆ ಉಳಿದ ಹಣ ಉನ್ನತ ಅಧಿಕಾರಿಗಳ ಹೆಚ್ಚಿನ ಸಂಬಳಕ್ಕೆ, ಬ್ಯಾಂಕಿನ 'ಆಧುನೀಕರಣಕ್ಕೆ' ಅಂದರೆ ಇತರ ವ್ಯಾಪಾರಿಗಳಿಗೆ, ಹೆಚ್ಚುವರಿ ಯಂತ್ರೋಪಕರಣಗಳಿಗಾಗಿ ಖರ್ಚುಮಾಡಬಹುದೇ ಹೊರತು ಖಾತೆದಾರರ ಠೇವಣಿಗಳಿಗೆ ಹೆಚ್ಚಿನ ಬಡ್ಡಿಯನ್ನು ಕೊಡುವುದಕ್ಕೆ ಬಳಕೆಯಾಗುವುದಿಲ್ಲ. ಹಾಗೆ ನೋಡಿದರೆ, ಬಡ್ಡಿಯನ್ನೂ ಇಳಿಸಿ, 'ಆಧುನೀಕರಣದ' ವೆಚ್ಚಗಳನ್ನೂ ಬ್ಯಾಂಕಿನ ನಿರ್ವಹಣಾ ವೆಚ್ಚಗಳಿಗೆಂದು ಖಾತೆದಾರರಿಂದಲೇ ಪಡೆಯಬಹುದು. ಇಂಥ ಎಲ್ಲ ಉಳಿತಾಯವನ್ನೂ, 'ಖಾತೆದಾರ-ಶ್ರಮಿಕರು' ಹುಟ್ಟಿಸುವ ಮಿಗುತೆ ಮೌಲ್ಯವನ್ನು ಕ್ರೋಢೀಕರಿಸಿ ಬ್ಯಾಂಕಿನ ವಾರ್ಷಿಕ ಲಾಭ ಹೆಚ್ಚಿತೆಂದು ತೋರಿಸಬಹುದು. ಇಲ್ಲಿರುವ ಶೋಷಣಾ ವಿಧಾನ ಕಣ್ಣಿಗೆ ಕಾಣಿಸುತ್ತದೆಯೆ? ವರ್ಗೀಕರಿಸಲು,

ಪುಟ 14 ಕ್ಕೆ





ಮತಾಂಧನೊಬ್ಬನನ್ನು ಪೂಜನೀಯಗೊಳಿಸುವ ಈ ಬಗೆ

ಪ್ರಕಾಶ ಕಾರಟ್



ಮಹಾರಾಷ್ಟ್ರ ವಿಧಾನಸಭಾ ಚುನಾವಣೆಯ ಬಿಜೆಪಿ ಚುನಾವಣಾ ಪ್ರಣಾಳಿಕೆ ಹಿಂದುತ್ವ ಪರಿಕಲ್ಪನೆಯ ಪಿತನಾದ ವಿನಾಯಕ ದಾಮೋದರ ಸಾವರ್ಕರ್‌ಗೆ 'ಭಾರತ ರತ್ನ'ದ ಬಿರುದು ಕೊಡಬೇಕೆಂಬ ಪ್ರಸ್ತಾವವನ್ನು ಮುಂದಿಟ್ಟಿದೆ. ಇದು ಹಿಂದುತ್ವ ತತ್ವಕ್ಕೆ ಯುಕ್ತತೆಯನ್ನು ಕೊಡಿಸಲು ಮತ್ತು ಸಾವರ್ಕರ್‌ರಂತಹ ಪಕ್ಕಾ ಕೋಮುವಾದಿ ವ್ಯಕ್ತಿಗಳಿಂದ ಪೂಜನೀಯ ಮೂರ್ತಿಗಳನ್ನು ಸೃಷ್ಟಿಸಲು ಬಿಜೆಪಿ-ಆರೆಸ್ಸೆಸ್ ನಡೆಸಿರುವ ಕಾರ್ಯತಂತ್ರದ ಒಂದು ಭಾಗವಾಗಿದೆ. ಅದನ್ನು ಮಾಡಲು ಸಾವರ್ಕರ್ ಒಬ್ಬ ಮಹಾನ್ ಸ್ವಾತಂತ್ರ್ಯ ಹೋರಾಟಗಾರ ಮತ್ತು ಅಪ್ರತಿಮ ರಾಷ್ಟ್ರವಾದಿ ಎಂಬ ಪುರಾಣ ಸೃಷ್ಟಿಯಲ್ಲಿ ಆರೆಸ್ಸೆಸ್ ಮತ್ತು ಬಿಜೆಪಿ ಮಗ್ನವಾಗಿವೆ.

ಈ ಪುರಾಣ ಸೃಷ್ಟಿಯ ನಿಜಸ್ವರೂಪವನ್ನು ಮತ್ತು ಇದಕ್ಕೆ ಸಂಬಂಧಪಟ್ಟಂತೆ ಹಿಂದುತ್ವ ಪಡೆಗಳ ಹುನ್ನಾರಗಳನ್ನು ಬಯಲಿಗೆಳೆಯುವುದು ಅಗತ್ಯವಾಗಿದೆ.

ಸಾವರ್ಕರ್ ಸ್ವಾತಂತ್ರ್ಯಕ್ಕಾಗಿ ಹೋರಾಡುವ ಒಬ್ಬ ಕ್ರಾಂತಿಕಾರಿಯೆಂದೇ ಬದುಕು ಆರಂಭಿಸಿದವರು. ಆದರೆ ಅವರ ಬದುಕಿನ ಈ ಘಟ್ಟ ಅವರನ್ನು ಎರಡು ಬಾರಿ ಜೀವಾವಧಿ ಗಡೀಪಾರು ಶಿಕ್ಷೆಗೆ ಗುರಿಪಡಿಸಿ 1911ರಲ್ಲಿ ಅಂಡಮಾನ್ ಸೆಲ್ಯುಲರ್ ಜೈಲಿಗೆ ಕಳಿಸಿದಾಗ ಕೊನೆಗೊಂಡಿತು. ಮೊದಲ ವರ್ಷದಲ್ಲೇ(1911) ಅವರು ಬ್ರಿಟಿಶ್ ಅಧಿಕಾರಿಗಳಿಗೆ ಕ್ಷಮಾದಾನದ ಒಂದು ಅರ್ಜಿಯನ್ನು ಕಳಿಸಿದರು. ಮತ್ತೆ 1913, 1917 ಮತ್ತು 1920ರಲ್ಲೂ ಅವರು ಅದನ್ನೇ ಮಾಡಿದರು. ಈ ಅರ್ಜಿಗಳಲ್ಲಿ ಅವರು ಬ್ರಿಟಿಶ್ ಸರಕಾರದ ವಿರುದ್ಧ ರಾಜಕೀಯ ಚಟುವಟಿಕೆಗಳನ್ನು ನಿಲ್ಲಿಸುವ ಆಶ್ವಾಸನೆ ನೀಡಿದರು; ಬ್ರಿಟಿಶ್ ಸರಕಾರಕ್ಕಾಗಿ "ಅದು ಬಯಸುವ ಯಾವುದೇ ಸ್ಥಾನದಿಂದ" ಕೆಲಸ ಮಾಡುವುದಾಗಿಯೂ (1913ರ ಅರ್ಜಿಯಲ್ಲಿ) ಹೇಳಿದರು.

ನೈತಿಕ ಹೇಡಿತನದ ಈ ಪ್ರದರ್ಶನ ಅಂಡಮಾನ್ ಜೈಲಿನಲ್ಲಿ ಇರಿಸಿದ್ದ ಇತರ ನೂರಾರು ಸ್ವಾತಂತ್ರ್ಯ ಹೋರಾಟಗಾರರ ತ್ಯಾಗಗಳಿಗೆ ತದ್ವಿರುದ್ಧವಾಗಿತ್ತು. ಇಂತಹ ಹೋರಾಟಗಾರರಲ್ಲಿ ಮುಂದೆ ಕಮ್ಯುನಿಸ್ಟರಾದ ಗಣೇಶ್ ಘೋಷ್, ಸತೀಶ್ ಪರ್ಕಾಶಿ, ಹರೇಕೃಷ್ಣ ಕೋನಾರ್ ಮತ್ತು ಸುಬೋಧ್ ರಾಯ್ ಸೇರಿದ್ದಾರೆ.

1923ರಲ್ಲಿ ಜೈಲಿನಿಂದ ಹೊರಬಂದ ಮೇಲೆ, ಸಾವರ್ಕರ್ ತಮ್ಮ ಆಶ್ವಾಸನೆಯಂತೆಯೇ ನಡೆದುಕೊಂಡರು, ಬ್ರಿಟಿಶ್ ಆಳರಸರ ವಿರುದ್ಧ ಯಾವುದೇ ಚಟುವಟಿಕೆಯಲ್ಲಿ ಭಾಗವಹಿಸಲಿಲ್ಲ. ಬದಲಿಗೆ, ಅವರು ಮುಸ್ಲಿಮರ ವಿರುದ್ಧ ತನ್ನ ಪ್ರಯತ್ನಗಳನ್ನು ಕೇಂದ್ರೀಕರಿಸಲು ಮತ್ತು ಹಿಂದೂ-ಮುಸ್ಲಿಂ ಐಕ್ಯತೆಯನ್ನು ತಡೆಯುವುದಕ್ಕಾಗಿ ಹಿಂದೂ ಮಹಾಸಭಾದ ನೇತೃತ್ವವನ್ನು ವಹಿಸಿಕೊಂಡರು. ಸಾವರ್ಕರ್ ತನ್ನ ಕಿರುಪುಸ್ತಕ "ಹಿಂದುತ್ವ"ವನ್ನು 1923ರಲ್ಲಿ ಪ್ರಕಟಿಸಿದರು. ಇದರಲ್ಲಿ ಎರಡು-ರಾಷ್ಟ್ರಗಳ ಸಿದ್ಧಾಂತವನ್ನು ಮುಂದಿಟ್ಟವರಲ್ಲಿ ಅವರು ಮೊದಲಿಗರಾದರು. ಹಿಂದೂಗಳು ಎಂದರೆ ಭಾರತದ ಪ್ರದೇಶದೊಳಗೆ 'ಪಿತೃಭೂಮಿ' ಮತ್ತು 'ಪುಣ್ಯಭೂಮಿ' ಎರಡನ್ನೂ ಹೊಂದಿರುವವರು ಎಂದು ಈ ಪುಸ್ತಕದಲ್ಲಿ ಅವರು ನಿರೂಪಿಸಿದರು. ಭಾರತದ ಹೊರಗೆ ಬೇರುಗಳನ್ನು ಹೊಂದಿರುವ ಧರ್ಮಗಳನ್ನು ಅನುಸರಿಸುವವರನ್ನು ಹಿಂದೂ ರಾಷ್ಟ್ರದ ಸದಸ್ಯರೆಂದು ಹೇಳಲು ಸಾಧ್ಯವಿಲ್ಲ. ಈ ಮತಾಂಧ ಕಣ್ಣೋಟವೇ ಹಿಂದುತ್ವದಲ್ಲಿ ಅಡಗಿದೆ. ಇದನ್ನೇ ನಂತರ ಆರೆಸ್ಸೆಸ್ ತನ್ನ ಎರಡನೇ ಮುಖ್ಯಸ್ಥರಾದ ಗೋಲ್ವಾಲ್ಕರ್ ಅಡಿಯಲ್ಲಿ ಅಂಗೀಕರಿಸಿತು.

ಹೀಗೆ, ವಾಸ್ತವವಾಗಿ ಬ್ರಿಟಿಶರಿಗೆ ಶರಣಾಗತರಾಗಿ ತನ್ನ ಉಳಿದ ಜೀವನವನ್ನು ಹಿಂದೂ-ಮುಸ್ಲಿಂ ವೈಷಮ್ಯವನ್ನು ಪ್ರಚೋದಿಸುವಲ್ಲಿ ಕಳೆದ ಸಾವರ್ಕರ್‌ರನ್ನು ಒಬ್ಬ ಮಹಾನ್ ಸ್ವಾತಂತ್ರ್ಯ ಹೋರಾಟಗಾರ ಎಂದು ಬಿಂಬಿಸುವುದು, ಏನಿಲ್ಲೆಂದರೂ, ಸತ್ಯಕ್ಕೆ ಬಗೆಯುವ ಒಂದು ಅಪಚಾರ ಎಂದಾದರೂ ಹೇಳಬೇಕಾಗುತ್ತದೆ.

ಹಿಂದೂ ಮಹಾಸಭಾದ ಮುಖ್ಯಸ್ಥರಾಗಿ ಸಾವರ್ಕರ್ ವಹಿಸಿದ ಪಾತ್ರವಂತೂ ಇನ್ನಷ್ಟು ಅನಿಷ್ಟಕಾರಿ. ಅವರ ಮುಸ್ಲಿಂ-ವಿರೋಧಿ ವಿಷ ಗಾಂಧೀಜಿಯ ವರೆಗೂ ವಿಸ್ತರಣೆಗೊಂಡಿತ್ತು. ಹಿಂದೂ-ಮುಸ್ಲಿಂ ಸಾಮರಸ್ಯದ ಗಾಂಧೀಜಿಯ ಪ್ರಯತ್ನಗಳಿಗೆ, ತನ್ನ ಬದುಕಿನ ಕೊನೆಯ ದಿನಗಳಲ್ಲಿ ಕೋಮುವಾದಿ ಹಿಂಸಾಚಾರದ ಅಲೆಯನ್ನು ತಡೆಯಲು ಅವರು ಪಟ್ಟ ಉನ್ನತ ಶ್ರಮಕ್ಕೆ ಸಾವರ್ಕರ್ ಕಡುವಿರೋಧಿಯಾಗಿದ್ದರು. ಜನವರಿ 30. 1948ರಂದು ನಾಥುರಾಮ್ ಗೋಡ್ಸೆ ಗಾಂಧೀಜಿಯ ಹತ್ಯೆ ಮಾಡಿದಾಗ, ಪೋಲೀಸರು ಒಂದು ಗುಂಪಿನ ಪಿತೂರಿಯನ್ನು ಪತ್ತೆ ಹಚ್ಚಿದರು. ಈ ಗುಂಪಿನಲ್ಲಿ ವಿ.ಡಿ. ಸಾವರ್ಕರ್, ಮಾಧವ ಆಪ್ಟೆ, ವಿ.ಆರ್.ಕರ್ಕರೆ ಮತ್ತಿತರರು ಇದ್ದರು. ಇತರರೊಂದಿಗೆ ಸಾವರ್ಕರ್‌ರನ್ನೂ ಗಾಂಧೀಜಿಯ ಹತ್ಯೆ ಆರೋಪದ ಮೇಲೆ ವಿಚಾರಣೆಗೆ ಗುರಿಪಡಿಸಲಾಗಿತ್ತು. ಮಾಫಿ ಸಾಕ್ಷಿ ಅವರ ಪಾತ್ರದ ಬಗ್ಗೆ ನೀಡಿದ್ದ ಸಾಕ್ಷ್ಯವನ್ನು ಸ್ವತಂತ್ರವಾಗಿ ರುಜುವಾತು ಪಡಿಸಲು ಸಾಧ್ಯವಾಗಲಿಲ್ಲ ಎಂಬ ಕಾರಣದಿಂದಾಗಿಯಷ್ಟೇ ವಿಚಾರಣಾ ನ್ಯಾಯಾಧೀಶರು ತಮ್ಮ ತೀರ್ಪಿನಲ್ಲಿ ಸಾವರ್ಕರ್‌ರನ್ನು ಖುಲಾಸೆ ಮಾಡಿದರು.

1966ರಲ್ಲಿ ಗಾಂಧೀಜಿಯ ಹತ್ಯೆಯ ಪಿತೂರಿಯ ತನಿಖೆ ನಡೆಸಲು ನ್ಯಾಯಮೂರ್ತಿ ಜೀವನ್‌ಲಾಲ್ ಕಪೂರ್ ಅಡಿಯಲ್ಲಿ ಒಂದು ತನಿಖಾ ಆಯೋಗವನ್ನು ರಚಿಸಲಾಯಿತು. ಗಾಂಧೀಜಿಯನ್ನು ಹತ್ಯೆಗೈಯುವ ಯೋಜನೆ ಕೆಲವು ವ್ಯಕ್ತಿಗಳಿಗೆ ಗೊತ್ತಿತ್ತು ಎಂಬ ವರದಿಗಳು ಮತ್ತು ದಾವೆಗಳ ಹಿನ್ನೆಲೆಯಲ್ಲಿ ಇದು ಬಂತು. ನ್ಯಾಯಮೂರ್ತಿ ಕಪೂರ್ 1948ರಲ್ಲಿ ವಿಚಾರಣಾ ನ್ಯಾಯಾಲಯ ಸಾವರ್ಕರ್ ಪಾತ್ರವನ್ನು ಕುರಿತಂತೆ ಕೇಳಿಸಿಕೊಂಡದ್ದಕ್ಕಿಂತ ಹೆಚ್ಚಿನ ಸಾಕ್ಷ್ಯವನ್ನು ಕೇಳಿಸಿಕೊಂಡರು. ಅದರ ಆಧಾರದಲ್ಲಿ ಅವರು "ಇವೆಲ್ಲಾ ಸಂಗತಿಗಳು ಒಟ್ಟಾಗಿ ಸಾವರ್ಕರ್ ಮತ್ತು ಅವರ ಗುಂಪು ಹತ್ಯೆಯ ಪಿತೂರಿ ನಡೆಸಿತು ಎಂದಲ್ಲದೆ ಬೇರಾವ ಸಿದ್ಧಾಂತವನ್ನೂ ಉಳಿಸುವುದಿಲ್ಲ" ಎಂಬ ತೀರ್ಮಾನಕ್ಕೆ ಬಂದರು.

ಇಂತಹ ಒಬ್ಬ ವ್ಯಕ್ತಿಗೆ ಬಿಜೆಪಿ ಸರಕಾರ ದೇಶದ ಅತ್ಯುನ್ನತ ಬಿರುದನ್ನು ಪ್ರದಾನ ಮಾಡಬಯಸುತ್ತದೆ. ಮೋದಿ ಸರಕಾರ ಅಧಿಕೃತವಾಗಿ ಮಹಾತ್ಮ ಗಾಂಧಿಯ 150ನೇ ಜನ್ಮ ವಾರ್ಷಿಕವನ್ನು ಆಚರಿಸುತ್ತಿರುವ ಸಮಯದಲ್ಲೇ ಬಿಜೆಪಿ ಈ ಪ್ರಯತ್ನ ನಡೆಸುತ್ತಿರುವುದು ಅರ್ಥಪೂರ್ಣವೇ ಆಗಿದೆ. ಸಂಕೇತ ಸ್ಪಷ್ಟವಾಗಿದೆ- ವಿ.ಡಿ.ಸಾವರ್ಕರ್‌ರವರನ್ನು ಗಾಂಧೀಜಿಗೆ ಸಮನಾದ ಸ್ಥಾನದಲ್ಲಿ ಇಡಲಾಗುತ್ತಿದೆ.

ಸಂಘ ಕೂಟ ಸಾವರ್ಕರ್‌ರಂತಹ ಮತಾಂಧರನ್ನು ವೈಭವೀಕರಿಸಲು ಆಕ್ರಾಮಕ ರೀತಿಯಲ್ಲಿ ಪ್ರಯತ್ನಿಸುತ್ತಿರುವಾಗ ಕಾಂಗ್ರೆಸ್ ಮುಖಂಡತ್ವ ಈ ದಾಳಿಗೆ ಎದುರಾಗಿ ಕುಸಿದು ಕುಳಿತಿದೆ. ಮನಮೋಹನ್ ಸಿಂಗ್ ಸಾಕಷ್ಟು ದುರ್ಬಲವಾಗಿಯೇ "ನಾವು ಸಾವರ್ಕರ್‌ಜೀ ವಿರುದ್ಧವಾಗಿ ಇಲ್ಲ, ಹಿಂದುತ್ವ ತತ್ವಸಿದ್ಧಾಂತದ ಪರವಾಗಿ ಇಲ್ಲವಷ್ಟೇ" ಎಂದು ಹೇಳಿದರು. 'ಭಾರತ ರತ್ನ' ಬಿರುದು ಕೊಡಲು ಸರಕಾರ ರಚಿಸುವ ಸಮಿತಿ ನಿರ್ಧರಿಸಬೇಕಾಗಿದೆ ಎನ್ನುತ್ತ ಅವರು 'ಭಾರತ ರತ್ನ' ಪ್ರಸ್ತಾವದ ಬಗ್ಗೆ ಟಿಪ್ಪಣಿ ಮಾಡದೆ ತಪ್ಪಿಸಿಕೊಂಡರು. ಕಾಂಗ್ರೆಸ್‌ನ ಅಧಿಕೃತ ವಕ್ತಾರ ಅಭಿಷೇಕ್ ಸಿಂಗ್ವಿ ಇನ್ನೂ ಒಂದು ಹೆಜ್ಜೆ ಮುಂದೆ ಹೋದರು. ಅವರು ಸಾವರ್ಕರ್ "ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ" ಮತ್ತು "ಜೈಲಿಗೆ ಹೋದ" ಒಬ್ಬ ಸಾಧಕ ಎಂದು ಕರೆದರು. ಒಬ್ಬ ಕೋಮುವಾದಿ ತತ್ವಸಿದ್ಧಾಂತಿಯ ಬಗ್ಗೆ ಇಂತಹ ಒಂದು ಹಿಂಜರಿಕೆಯ ನಿಲುವು ಇನ್ನಷ್ಟು ಜಾತ್ಯತೀತ-ರಾಷ್ಟ್ರವಾದಿ ಅವಕಾಶವನ್ನು ಆಕ್ರಮಿಸಿಕೊಳ್ಳಲು ಹಿಂದುತ್ವ ಪಡೆಗಳಿಗೆ ಮತ್ತಷ್ಟು ಧೈರ್ಯ ತುಂಬತ್ತದಷ್ಟೇ

ಸಾವರ್ಕರ್‌ರನ್ನು "ಭಾರತ ರತ್ನ"ದಿಂದ ಗೌರವಿಸುವುದು ಗಾಂಧೀಜಿ ಮತ್ತು ಸ್ವಾತಂತ್ರ್ಯ ಹೋರಾಟಗಾರರ ಸ್ಮರಣೆಗೆ ನಿಷ್ಕಾರಣವಾಗಿ ಮಾಡುವ ಅವಮಾನವಾಗುತ್ತದೆ.

> ಆರಂಭದಲ್ಲಿ ಸ್ವಾತಂತ್ರ್ಯಕ್ಕಾಗಿ ಹೋರಾಡುವ ಒಬ್ಬ ಕ್ರಾಂತಿಕಾರಿಯಾಗಿದ್ದರೂ, ಅಂಡಮಾನ್ ಜೈಲಿಗೆ ಕಳಿಸಿದ ನಂತರ ಬ್ರಿಟಿಶರಿಗೆ ಶರಣಾಗತರಾಗಿ ತನ್ನ ಉಳಿದ ಜೀವನವನ್ನು ಹಿಂದೂ-ಮುಸ್ಲಿಂ ವೈಷಮ್ಯವನ್ನು ಪ್ರಚೋದಿಸುವಲ್ಲಿ ಕಳೆದ ಸಾವರ್ಕರ್‌ರನ್ನು ಒಬ್ಬ ಮಹಾನ್ ಸ್ವಾತಂತ್ರ್ಯ ಹೋರಾಟಗಾರ ಎಂದು ಬಿಂಬಿಸುವುದು, ಸತ್ಯಕ್ಕೆ ಬಗೆಯುವ ಅಪಚಾರ ಎಂದೇ ಹೇಳಬೇಕಾಗುತ್ತದೆ. ಮೋದಿ ಸರಕಾರ ಅಧಿಕೃತವಾಗಿ ಮಹಾತ್ಮ ಗಾಂಧಿಯ 150ನೇ ಜನ್ಮ ವಾರ್ಷಿಕವನ್ನು ಆಚರಿಸುತ್ತಿರುವ ಸಮಯದಲ್ಲೇ ಬಿಜೆಪಿ ಸರಕಾರ ದೇಶದ ಅತ್ಯುನ್ನತ ಬಿರುದನ್ನು ಸಾವರ್ಕರ್‌ಗೆ ಪ್ರದಾನ ಮಾಡ ಬಯಸುತ್ತಿರುವುದು ಅರ್ಥಪೂರ್ಣವೇ ಆಗಿದೆ. ಸಂಕೇತ ಸ್ಪಷ್ಟವಾಗಿದೆ -ಸಾವರ್ಕರ್ ರನ್ನು ಗಾಂಧೀಜಿಗೆ ಸಮನಾದ ಸ್ಥಾನದಲ್ಲಿ ಇಡಲಾಗುತ್ತಿದೆ.



ವ್ಯಂಗ್ಯಚಿತ್ರ: ಕೀರ್ತೀಶ್, ಬಿಬಿಸಿ ಹಿಂದಿ ನ್ಯೂಸ್



ವ್ಯಂಗ್ಯಚಿತ್ರ: ಮಂಜುಲ್, ಮಿಡ್ ಡೇ

‘ಅಸ್ಪೃಶ್ಯತೆ ಮತ್ತು ಜಾತಿ ರಹಿತ ಸಮಾಜ ನಿರ್ಮಾಣ’ ಡಿ.ಎಚ್.ಎಸ್ ರಾಜ್ಯ ಅಧ್ಯಯನ ಶಿಬಿರದ ಪಣ

**ಗೌಡುಗೆರೆ ಮಾಯುಶ್ರೀ
ನಾಗರಾಜ ನಂಜುಂಡಯ್ಯ**



ದಲಿತ ಹಕ್ಕುಗಳ ಸಮಿತಿ ಆಶ್ರಯದಲ್ಲಿ "ಅಸ್ಪೃಶ್ಯತಾ ಆಚರಣೆಗಳು ಹಾಗೂ ಜಾತಿ ತಾರತಮ್ಯ"' ನಿರ್ಮೂಲನೆ ಕುರಿತಂತೆ ರಾಜ್ಯದ ದಲಿತ ಸಮುದಾಯದಲ್ಲಿ ಜಾಗೃತಿ ಉಂಟು ಮಾಡುವ ನಿಟ್ಟಿನಲ್ಲಿ 3 ದಿನಗಳ ಕಾಲ, ಅಕ್ಟೋಬರ್ 18, 19 ಮತ್ತು 20 ರಂದು, ರಾಮನಗರ ಜಿಲ್ಲೆಯ ವ್ಯಾಪ್ತಿಯಲ್ಲಿರುವ ಸಾಂಸ್ಕೃತಿಕ ತಾಣವೆಂದೆ ಪ್ರಸಿದ್ದವಾದ "ಜಾನಪದ ಲೋಕ" ದಲ್ಲಿ" ನಡೆದ ರಾಜ್ಯ ಮಟ್ಟದ ಅಧ್ಯಯನ ಶಿಬಿರ " ವನ್ನು ತುಂಬಾ ಅರ್ಥ ಪೂರ್ಣ ವಾಗಿ ನಡೆಸಲಾಯಿತು.

"ಅಸ್ಪೃಶ್ಯತೆ ಮತ್ತು ಜಾತಿ ರಹಿತ ಸಮಾಜ ನಿರ್ಮಾಣ" ಮಾಡುವುದು ನಮ್ಮ ಮೂಲ ಉದ್ದೇಶ ವೆಂಬ ಪ್ರತಿಜ್ಞೆ ಯೊಂದಿಗೆ ಶಿಬಿರಾರ್ಥಿಗಳು ವಿಶ್ವಾಸಾರ್ಹತೆ ಯಿಂದ ಮೂರು ದಿನಗಳ ಕಾಲ ಚರ್ಚಿಸಿ, ತಮ್ಮ ತಮ್ಮ ಪ್ರದೇಶಗಳಲ್ಲಿ ಅಸ್ಪೃಶ್ಯತಾ ಆಚರಣೆಗಳ ನಿರ್ಮೂಲನಾ ಅಭಿಯಾನವನ್ನು ಮುಂದುವರಿಸಲು ಬದ್ದತೆಯಿಂದ ಪಣತೊಡಿಸುವಲ್ಲಿ, ಅಧ್ಯಯನ ಶಿಬಿರ ಸಾಕ್ಷಿಯಾಯಿತು ಎನ್ನಲಾಗಿದೆ.

ಒಟ್ಟು ಶಿಬಿರದಲ್ಲಿ 32 ಮಹಿಳೆಯರು ಒಳಗೊಂಡಂತೆ, ಸುಮಾರು 174 ಮಂದಿ ಶಿಬಿರಾರ್ಥಿಗಳು ಪಾಲ್ಗೊಂಡಿದ್ದರು. ಈ ಹಿಂದೆ ಡಿ.ಎಚ್.ಎಸ್. ವತಿಯಿಂದ, ತುಮಕೂರು ಜಿಲ್ಲೆಯ, ಕೊರಟಗೆರೆ, ಕೋಲಾರ ಜಿಲ್ಲೆಯ ಮಾಲೂರು, ಹಾಗೂ ಬಳ್ಳಾರಿ ಜಿಲ್ಲೆಯ ಹೊಸಪೇಟೆ ಗಳಲ್ಲಿ ಇಂಥದ್ದೆ ಶಿಬಿರಗಳನ್ನು ಏರ್ಪಡಿಸಲಾಗಿತ್ತು. ಶಿಬಿರದಿಂದ ಶಿಬಿರಕ್ಕೆ ನಮ್ಮ ಡಿ.ಎಚ್.ಎಸ್ ಕಾರ್ಯಕರ್ತರ ಪಡೆ ವೃದ್ದಿಸುತ್ತಿರುವುದನ್ನು ನಾವಿಲ್ಲಿ ಗುರುತಿಸಿದ್ದೇವೆ. ನಮ್ಮ ಡಿ.ಎಚ್. ಎಸ್. ಇದೀಗ 14 ಜಿಲ್ಲೆಗಳಿಗೆ ವಿಸ್ತರಣೆ ಗೊಂಡು, ಸುಮಾರು 45 ತಾಲೂಕಿನಲ್ಲಿ ನಮ್ಮ ಸಮಿತಿಗಳು ಕಾರ್ಯಪ್ರವೃತ್ತವಾಗಿವೆ. ನಮ್ಮ ದಿನ ನಿತ್ಯದ ಕೆಲಸ ಮತ್ತು ಮದ್ಯ ಪ್ರವೇಶ ಸಕ್ರಿಯಗೊಳಿಸಲು ಎಲ್ಲಾ ಪ್ರಯತ್ನಗಳು ನಡೆಯುತ್ತಿವೆ. ಕೆಳ ಮಟ್ಟದಲ್ಲಿ ಅಂದರೆ, ಗ್ರಾಮಗಳ ಮಟ್ಟಕ್ಕೆ ನಮ್ಮ ಕೆಲಸವನ್ನು ಕೊಂಡೊಯ್ಯುವ ನಿಟ್ಟಿನಲ್ಲಿ ಕಾರ್ಯಕರ್ತರ ಪಡೆಯನ್ನು ಕಟ್ಟುವ ಕೆಲಸ ನಡೆಸಿದ್ದೇವೆ. ಈ ನಿಟ್ಟಿನಲ್ಲಿ ಕೆಲಸ ಮಾಡಲು ಮತ್ತಷ್ಟು ಸೈದ್ದಾಂತಿಕ ಸ್ಪಷ್ಟತೆಯನ್ನು ಈ ಶಿಬಿರ ನೀಡಿದೆ ಎಂದು ಭಾಗವಹಿಸಿದ್ದ ಶಿಬಿರಾರ್ಥಿಗಳು ತಮ್ಮ ಅಭಿಪ್ರಾಯ ಗಳನ್ನು ವ್ಯಕ್ತಪಡಿಸಿದ್ದು, ಶಿಬಿರದ ಮೂಲ ಉದ್ದೇಶಗಳ ಸಾರ್ಥಕತೆ ಇದಾಗಿದೆ ಎಂದು ಭಾವಿಸಿದ್ದೇವೆ.

ಈ ಶಿಬಿರಕ್ಕೆ ಪೂರ್ವಭಾವಿಯಾಗಿ, ರಾಮನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ " ಸಂವಿಧಾನದ ಮೂಲ ಆಶಯಗಳು ಮತ್ತು ಮೀಸಲಾತಿ ಮುಂದಿರುವ ಸವಾಲುಗಳು "ವಿಷಯ ಕುರಿತು "ರಾಜ್ಯ ಮಟ್ಟದ ವಿಚಾರ ಸಂಕಿರಣವನ್ನು ಆಯೋಜಿಸಲಾಗಿತ್ತು. (ಇದರ ವಿವರಣೆಯನ್ನು ಪ್ರತ್ಯೇಕವಾಗಿ ನೀಡಲಾಗಿದೆ).

ಈ ಕೆಳಗೆ ಶಿಬಿರದ ಒಳಗೆ ನಡೆದ ಉಪನ್ಯಾಸಗಳು ಹಾಗೂ ಮುಂದಿನ ಕಾರ್ಯಯೋಜನೆಗಳ ಕುರಿತಂತೆ ನಡೆದ ಚರ್ಚೆಗಳನ್ನು ಸಂಕ್ಷಿಪ್ತವಾಗಿ ವರದಿ ಮಾಡಲಾಗಿದೆ.

ಪಾಠ 1. ಭಾರತ ದೇಶದಲ್ಲಿ ಜಾತಿ ಪದ್ದತಿಯ ಉಗಮ, ಬೆಳವಣಿಗೆ ಹಾಗೂ ವಿನಾಶ ಕುರಿತಂತೆ, ಸಾಮಾಜಿಕ ಚಿಂತಕರಾದ ಶ್ರೀ. ಜಿ.ಎನ್. ನಾಗರಾಜ ರವರು, ಉಪನ್ಯಾಸ ನೀಡಿದರು.

ಶತ ಶತಮಾನಗಳಿಂದ, ಆಳವಾಗಿ ಬೇರು ಬಿಟ್ಟಿರುವ ಜಾತಿ ವ್ಯವಸ್ಥೆ ಯನ್ನು ನಾಶ ಪಡಿಸಲು ಬಸವಾದಿ ಶರಣರು, ವಚನಕಾರರು ತಮ್ಮ ಕೃತಿ ಮತ್ತು ತಾವು ನಡೆಸಿದ ಹೋರಾಟಗಳ ಮೂಲಕ ಪ್ರಯತ್ನ ಪಟ್ಟಾಗ್ಯೂ, ಇಂದಿಗೂ ಈ ವ್ಯವಸ್ಥೆ ವಿನಾಶಗೊಳ್ಳದೆ ಇರುವುದು ವಿಷಾದವೆಂದು ತಮ್ಮ ಉಪನ್ಯಾಸ ನ್ನು ಆರಂಭಿಸಿದ ಅವರು, ಇದಕ್ಕೆ ಕಾರಣಗಳನ್ನು ತುಂಬ ಸರಳವಾಗಿ ಶಿಬಿರಾರ್ಥಿಗಳ ಮನ ಮಟ್ಟುವಂತೆ ಪ್ರಸ್ತುತ ಪಡಿಸಿದರು.

ಅಸ್ಪೃಶ್ಯತೆ ಬೆಳೆದು ಬಂದ, ಇತಿಹಾಸ ಪೂರ್ವ ಸಂಗತಿಗಳನ್ನು ಎಳೆ ಎಳೆಯಾಗಿ ಮನವರಿಕೆ ಮಾಡಿಕೊಟ್ಟರು. ‘ಮಾನವ ಜಾತಿ ತಾನೊಂದೇ ವಲಂ’ ಎಂದ ಪಂಪ ಕವಿ, ’ಕುಲ ಕುಲವೆಂದು ಹೊಡೆದಾಡದಿರಿ, ನಿಮ್ಮ ಕುಲದ ನೆಲೆ ಏನಾದರೂ ಬಲ್ಲಿರಾ’? ಎಂದು ಪ್ರಶ್ನಿಸಿದ ಕನಕದಾಸರು, ’ನಡೆವುದೊಂದೇ ಭೂಮಿ, ಕುಡಿವುದೊಂದೆ ನೀರು’ ಎಂದ ಸರ್ವಜ್ಞ, ಮಾದಾರ ಚನ್ನಯ್ಯ, ಡೋಹಾರ ಕಕ್ಕಯ್ಯ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಸಾಹಿತಿ ಕುವೆಂಪು ರವರುಗಳು ಕೂಡಾ, ಆಯಾ ಕಾಲಘಟ್ಟದಲ್ಲಿ ಈ ಜಾತಿ ಪದ್ದತಿಯ ವಿನಾಶ ಮಾಡುವ ನಿಟ್ಟಿನಲ್ಲಿ ತಮ್ಮದೇ ಆದ ರೀತಿಯಲ್ಲಿ ಕೊಡುಗೆಗಳನ್ನು ಅಭಿವ್ಯಕ್ತ ಗೊಳಿಸುತ್ತಾ, ಜನಜಾಗೃತಿ ಮೂಡಿಸುವ ಕೆಲಸದಲ್ಲಿ ತೊಡಗಿಸಿ ಕೊಂಡಿರುವುದನ್ನು ಇತಿಹಾಸದ ಪುಟಗಳು ನಮ್ಮನ್ನು ನೆನೆಪಿಸುತ್ತವೆ. ಹಾಗೆಯೇ, ಸಾಮಾಜಿಕ ಅನಿಷ್ಟ ವಾಗಿರುವ ಅಸ್ಪೃಶ್ಯತಾ ಆಚರಣೆಗಳನ್ನು ತೊಡೆದುಹಾಕಲು ಜ್ಯೋತಿ ಭಾ ಪೊಲೆ, ಸಾವಿತ್ರಿ ಬಾಯಿ ಪೊಲೆ, ನಾರಾಯಣ ಗುರು,, ಪೆರಿಯಾರ್ ರಾಮಸ್ವಾಮಿ ಯಂತಹ, ಸಮಾಜ ಸುಧಾರಕರು, ಹಾಗೂ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ರವರು, ಸ್ವತಃ ಈ ಅಮಾನವೀಯ ಅನಿಷ್ಟ ಪದ್ದತಿಗೆ ತುತ್ತಾಗಿದ್ದವರು. ಇವರೆಲ್ಲರೂ ನಡೆಸಿದ ಚರಿತ್ರಾರ್ಹ ಹೋರಾಟಗಳನ್ನು ನಾವೆಲ್ಲರೂ ಈ ಸಂದರ್ಭದಲ್ಲಿ ಮನದಟ್ಟು ಮಾಡಿಕೊಂಡಗ ಮಾತ್ರ, ನಮ್ಮ ದೇಶದಲ್ಲಿ ಇನ್ನೂ ತಾಂಡವ ಸ್ವರೂಪ ದಲ್ಲಿ ನಾಟ್ಯವಾಡುತ್ತಿರುವ ಈ ಜಾತಿ ಪದ್ದತಿಯ ಕರಾಳ ರೂಪಕ ಗಳನ್ನು ಅರಿತುಕೊಳ್ಳಲು ಸಾಧ್ಯವೆಂದರು.

ಭಾರತ ದೇಶದ ಹಾಗೂ ನಮ್ಮ ಕರ್ನಾಟಕ ರಾಜ್ಯದ ಸಾಮಾಜಿಕ–ಆರ್ಥಿಕ ಸಂರಚನೆಯ ಕುರಿತಂತೆ ತಮ್ಮ ಉಪನ್ಯಾಸ ದಲ್ಲಿ ಪ್ರಸ್ತುತ ಪಡಿಸುತ್ತಾ, ಭಾರತಕ್ಕೆ ವಲಸೆ ಬಂದು ಭೂಒಡೆತನ ಹೊಂದಿದ ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯರು ಸಮೃದ್ಧ ವಾದ ನೀರಾವರಿ ಸೌಲಭ್ಯ ವಿರುವ ನೆಲವನ್ನೇ ಆಯ್ದುಕೊಂಡು ಕೃಷಿ ಮತ್ತು ಪಶು ಸಂಗೋಪನೆ ಕೈಗೊಂಡರು. ಆ ಸಂದರ್ಭದಲ್ಲೇ, ರಾಜರು, ಚಕ್ರವರ್ತಿ ಗಳು,ಸಾಮಾಂತರು, ಸಾಮ್ರಾಟರು ಕೂಡ ಸೃಷ್ಟಿಯಾಗಿದ್ದು, ಕಾಲಕ್ರಮೇಣ ಪುರೋಹಿತರು, ಶಾನುಭೋಗರು, ಕರಣಿಕರು ಹಾಗೂ ಪಟೇಲರು ಬೆಳೆದು ಬಂದರು. ಈ ಎಲ್ಲಾ ಜನರ ಕ್ಷೇಮಾಭಿವೃದ್ಧಿ ಮತ್ತು ಆಸ್ತಿ ಪಾಸ್ತಿ ಗಳನ್ನು ಸಂರಕ್ಷಿಸಲು, ಶ್ರಮ ಪಟ್ಟು ದುಡಿಯುತ್ತಿದ್ದ ಆದಿವಾಸಿ ಬುಡಕಟ್ಟು ಜನ ಸಮುದಾಯವನ್ನು ತಮ್ಮ ಸೇವೆ ಮಾಡುವ, ಗುಲಾಮರನ್ನಾಗಿ ಮಾಡಿಕೊಂಡರು, (ಇದೇ ಸಮಯದಲ್ಲಿ ಅಮೆರಿಕಾ ಮತ್ತು ಯುರೋಪಿಯನ್ ದೇಶಗಳಲ್ಲಿ, ಆಫ್ರಿಕನ್ ಕಪ್ಪು ಜನರನ್ನು ಒತ್ತಾಯಪೂರ್ವಕವಾಗಿ ಅಪಹರಿಸಿಕೊಂಡು ಬಂದು, ಗುಲಾಮರನ್ನಾಗಿ ಮಾಡಿಕೊಳ್ಳಲಾಗಿತ್ತು.)

ಹೀಗೆ, ಗುಲಾಮರನ್ನಾಗಿ ಮಾಡಿಕೊಂಡು ಭೂಮಿಯ ಮೇಲಿನ ಒಡೆತನವನ್ನು ತಮ್ಮ ವಶದಲ್ಲಿ ಭದ್ರವಾಗಿ ಇಟ್ಟುಕೊಂಡು, ಪರಮಾಧಿಕಾರ ಸ್ಥಾಪಿಸಿಕೊಂಡರು. ಬಿಲ್ವಿದ್ಯೆ, ಶಸ್ತ್ರಾಸ್ತ್ರ ಪ್ರಾವೀಣ್ಯತೆ, ಕುಲಾಧಿಪತ್ಯೆ, ಮತ್ತು ರಾಜ್ಯಾಡಳಿತವನ್ನು ಮೇಲ್ಜಾತಿಯ ವರ್ಗ ಸಂಪೂರ್ಣವಾಗಿ ತಮ್ಮ ವಶಕ್ಕೆ ಪಡೆದು, ಅಸ್ಪೃಶ್ಯರು, ಬುಡಕಟ್ಟುಗಳ ಜನ ಸಮುದಾಯಗಳಿಗೆ ಭೂಮಿಯ ಒಡೆತನದ ಹಕ್ಕನ್ನು ವಂಚಿಸಲಾಯಿತು. ತಮ್ಮ ಹೊಟ್ಟೆ ಪಾಡಿಗಾಗಿ ಅಸ್ಪೃಶ್ಯರು ಹೀನ ಕಸುಬು ಗಳನ್ನು ಆಶ್ರಯಿಸಬೇಕಾಯಿತು. ಇಂತಹ, ಹೀನ ಕಸುಬು ಗಳನ್ನು ಗುರುತಿಸಿ ಅವರನ್ನು ಮತ್ತಷ್ಟು ಕೀಳಾಗಿ ಬಳಸಿಕೊಂಡಿದ್ದಲ್ಲದೆ, ಇವರಿಗೆ, ಭೂಮಿ, ನೀರು, ಮತ್ತು ವಾಸ, ಯೋಗ್ಯತೆ ಸಿಗದಂತೆ ನೋಡಿಕೊಂಡ ಪರಿಣಾಮದಿಂದಾಗಿ ಇಂದಿಗೂ, ಅಸ್ಪೃಶ್ಯರು ಹೀನ ಕಸುಬುಗಳೊಂದಿಗೆ ಜೀತದಾರರಾಗಿಯೂ ಉಳಿಯುವಂತಾಯಿತು ಎಂದು ವಿಶ್ಲೇಷಣೆ ನೀಡಿದರು.

ಜನಸಂಖ್ಯೆ ಹೆಚ್ಚಿದಂತೆಲ್ಲ ವೇದ, ಉಪನಿಷತು ಗಳು,ಉಪನಯನಗಳು, ಯಜ್ಞ ಯಾಗಾದಿಗಳು, ಪಂಚಾಂಗ ಮತ್ತು ಜ್ಯೋತಿಷ್ಯ ಗಳು ಸೃರಗೊಳ್ಳುತ್ತಾ, ಆಚಾರ ಅನಾಚಾರ್ಯಗಳು ರೂಢಿಗತ ಗೊಂಡವು,. ಅಸ್ಪೃಶ್ಯರನ್ನು ಮತ್ತು ಶೂದ್ರರನ್ನು ಅತ್ಯಂತ ನಿಕೃಷ್ಟವಾಗಿ ಕಾಣುವ ಪರಂಪರೆ ಆರಂಭವಾಯಿತು. ಇಂತಹ ಆಚರಣೆಗಳಿಂದಾಗಿಯೇ, ಜಾತಿ ಅಸ್ಪೃಶ್ಯತೆಯ ಬೇರುಗಳು ಗಟ್ಟಿಯಾಗುವಂತಾಯಿತು. ಬದುಕಿಗೆ ಒಂದು ನೆಲೆಯನ್ನು ಕಂಡುಕೊಳ್ಳಲು ಅಸ್ಪೃಶ್ಯರಿಗೆ ಅವಕಾಶವನ್ನು ಬೇಕೆಂತಲೇ ವಂಚಿಸಲಾಯಿತು. ಹೀಗೆ ಗುಲಾಮ ಪದ್ಧತಿ, ಮುಂದುವರಿದು ಜಮೀನ್ದಾರಿ ಪದ್ದತಿ ಆಳವಾದ ಬೇರುಗಳಾದವು. ಇದರಿಂದಾಗಿ, ಅಸ್ಪೃಶ್ಯರಿಗೆ ಭೂಮಿಯ ಒಡೆತನ ಧಕ್ಕಲೇ ಇಲ್ಲ. ಇದೇ ಈ ದೇಶದ ಜಾತಿ ಪದ್ದತಿಯ ಕರಾಳ ರೂಪಕತೆ. ಸ್ವಾತಂತ್ರ್ಯ ಬಂದು 72 ವರುಷ ಗಳಾದರು ಇಂದಿಗೂ ಜೀವಂತವಾಗಿ ಉಳಿಯಲು ಕಾರಣ ವೆಂದರು.

ಇದನ್ನು ಮನಗಂಡೇ ಬಾಬಾ ಸಾಹೇಬ್ ಅಂಬೇಡ್ಕರ್ ರವರು, ಭೂಮಿ ರಾಷ್ಟ್ರೀಕರಣಗೊಳ್ಳಬೇಕು ಹಾಗೂ ಸಹಕಾರ ಪದ್ದತಿ ಬೇಸಾಯ ಮಾಡುವ ಬಗ್ಗೆ ಸಂವಿಧಾನದ ಸಭೆಯಲ್ಲಿ ಮಂಡಿಸಿದರು. ಆದರೆ, ಸಂವಿಧಾನ ಸಭೆ ಒಪ್ಪಲಿಲ್ಲ. ಸಂವಿಧಾನದ ಅನುಚ್ಛೇದ 15 ರಲ್ಲಿ ಅಸ್ಪೃಶ್ಯತೆ ನಿಜಷೇಧವಾಗಿದೆ. ಆದರೆ ಅನುಷ್ಟಾನಕ್ಕೆ ಮಾತ್ರ ಬಂದಿಲ್ಲ.

ಹೀಗೆ ಜಾತಿ ಉಗಮವಾಗಿ, ಬೆಳೆದು ಆಳವಾದ ಬೇರುಗಳಾದುದ್ದನ್ನು ವಿಶ್ಲೇಷಣೆ ಮಾಡಿದ, ಜಿಎನ್ ರವರು, ಅದರ ನಿರ್ಮೂಲನೆ ಮಾಡಲು, ಆಡಳಿತ ನಡೆಸುವವರಲ್ಲಿ ರಾಜಕೀಯ ಇಚ್ಛಾಶಕ್ತಿ ಇರಬೇಕು, ಜಾತಿ ವಿನಾಶ ಕ್ಕಾಗಿ ನಡೆಯುವ ಹೋರಾಟಗಳೊಂದಿಗೆ, ಆರ್ಥಿಕ ಶೋಷಣೆಯ ವಿರುದ್ದ ನಡೆಯುವ ಹೋರಟಗಳು ಸಮಗ್ರೀಕರಣಗೊಳ್ಳಬೇಕು. ಎರಡು ಹೋರಾಟಗಳು, ನಮ್ಮ ಎರಡು ಕಾಲುಗಳ ರೀತಿಯಲ್ಲಿಯೇ ಜೊತೆ ಜೊತೆಗೆ ಹೆಜ್ಜೆ ಇಡ ಬೇಕಾಗಿದೆ ಎಂದು ತಮ್ಮ ಉಪನ್ಯಾಸ ವನ್ನು ಮುಕ್ತಾಯ ಗೊಳಿಸಿದರು.

ಪಾಠ 2 :– ಪ್ರಸ್ತುತ ರಾಜಕೀಯ ಪರಿಸ್ಥಿತಿ, ಮತ್ತು ಡಾ.ಬಿ.ಆರ್.ಅಂಬೇಡ್ಕರ್ ರವರ ವೈಚಾರಿಕಾ ಚಿಂತನೆಗಳ ಮರು ಚೇತರಿಕೆ ಮತ್ತು ಸಂವಿಧಾನ ಆಶಯಗಳ ಮೇಲೆ ದಾಳಿ, ಖಾಸಗೀ ಕ್ಷೇತ್ರದಲ್ಲಿ ಮೀಸಲಾತಿ, ಎಸ್.ಸಿ.ಎಸ್.ಪಿ ಯೋಜನೆಗಳ ದುರ್ಬಳಕೆ..ಮತ್ತು ಡಿ.ಎಸ್.ಎಂ.ಎಂ ನ ನಿಲುವುಗಳು. ಕುರಿತಂತೆ :– ಡಿ.ಎಸ್.ಎಂ.ಎಂ. ನ ರಾಷ್ಟ್ರೀಯ ಸದಸ್ಯರಾದ, ಬಿ.ವಿ.ರಾಘವಲು ಉಪನ್ಯಾಸ ನೀಡಿದರು.

ಪ್ರಸ್ತುತ ಕೇಂದ್ರ ದಲ್ಲಿರುವ ಸರ್ಕಾರ ಸಂವಿಧಾನದ ಎಲ್ಲಾ ಮೂಲಾಶಯಗಳಾದ, ಸ್ವಾವಲಂಬಿ ಆರ್ಥಿಕತೆ, ಸಮಾನತೆ, ಒಕ್ಕೂಟ ಪ್ರಭುತ್ವ, ಜಾತ್ಯಾತೀತ–ಪ್ರಜಾಸತ್ತಾತ್ಮಕ–ಗಣತಂತ್ರ ಮತ್ತು ಒಟ್ಟಾರೆಯಾಗಿ ಅಂಬೇಡ್ಕರ್ ರವರ ಪರಿಕಲ್ಪನೆ’ ಯ ಸಾಮಾಜಿಕ ನ್ಯಾಯ ದ ಮೇಲೆ ದಾಳಿ ನಡೆಸುತ್ತಿದೆ ಎಂದರು. ಅಭಿವ್ಯಕ್ತಿ ಸ್ವಾತಂತ್ರ್ಯ ಈ ಸರ್ಕಾರದ ಅಡಿಯಲ್ಲಿ ಹರಣವಾಗುತ್ತಿದೆ. ಚಾರಿತ್ರಿಕವಾಗಿ ಅಸ್ಪೃಶ್ಯತಾ ಆಚರಣೆ ಮತ್ತು ಜಾತಿ ತಾರತಮ್ಯ ಕ್ಕೆ ತುತ್ತಾದ ದಲಿತರಿಗೆ ಮೀಸಲಾತಿಯನ್ನು ಅಂಬೇಡ್ಕರ್ ರವರು ಸಂವಿಧಾನದಲ್ಲಿ ಅಳವಡಿಸಿದರು.ಆದರೆ, ಪ್ರಸ್ತುತ ಸರ್ಕಾರ ಜಾತಿ ಆಧಾರದ ಮೇಲೆ ಮೀಸಲಾತಿ ಬೇಡ, ಆರ್ಥಿಕತೆಯ ಆಧಾರದಲ್ಲಿ ಮೀಸಲಾತಿ ಇರಲೆಂದು, ಈಗಾಗಲೇ, ಆರ್ಥಿಕ ವಾಗಿ ಹಿಂದುಳಿದ ಮೇಲ್ಜಾತಿಯ ಹಾಗೂ ಪ್ರಾಬಲ್ಯ ಹೊಂದಿರುವ ಸಮುದಾಯಕ್ಕು,ಮೀಸಲಾತಿ ಒದಗಿಸಲಾಗಿದೆ. ಇದು ಪ್ರಸ್ತುತ ವಿರುವ ಜಾತಿ ಆಧಾರದ ಮೀಸಲಾತಿಯನ್ನು ಕಿತ್ತು ಹಾಕುವ ಹುನ್ನಾರವಾಗಿದೆ.

ಈ ನಿಟ್ಟಿನಲ್ಲಿ ಕರ್ನಾಟಕ ಮತ್ತು ಇನ್ನಿತರೆ ರಾಜ್ಯಗಳಲ್ಲಿ ಇರುವ ದಲಿತ ಸಂಘಟನೆಗಳು ಖಾಸಗೀ ಕ್ಷೇತ್ರದಲ್ಲಿ ಮೀಸಲಾತಿ ಅಗತ್ಯತೆ ಕುರಿತಂತೆ ನಡೆಸುತ್ತಿರುವ ಹೋರಾಟಗಳು ಮತ್ತು ಸಂವಿಧಾನದ ರಕ್ಷಣೆ ಮತ್ತು ಬಡ್ತಿ ಮೀಸಲಾತಿ ಹೋರಾಟಗಳು ಇಂತಹ ದಲಿತ ಪರ ವಿಚಾರಗಳ ಬಗ್ಗೆ ನಮಗೆ ಸಾಮ್ಯತೆ ಇದೆ. ನಾವು ಅದಕ್ಕೆ ಸಂಪೂರ್ಣ ಪರಸ್ಪರ ಬೆಂಬಲವನ್ನು ನೀಡುತೇವೆ ಎಂದರು.

ಮೀಸಲಾತಿ ಮೇಲೆ ದಲಿತೇತರ ಪ್ರಮುಖ ವಾಗಿ ಸಂಘ ಪರಿವಾರದ ಸಂಘಟನೆಗಳಿಂದ ದೊಡ್ಡ ದಾಳಿ ಆರಂಭವಾಗಿದೆ. ಇದೊಂದು ಪಿತೂರಿಯಾಗಿದೆ. ಇಂತಹ ದಾಳಿ ಗಳಿಗೆ ಆಡಳಿತ ರೂಡರಿಂದಲೇ ಪ್ರೋತ್ಸಾಹ ದೊರಕುತ್ತಿದೆ ಎಂದು ವಿಷಾದ ವ್ಯಕ್ತಪಡಿಸಿದರು. ನವ ಉದಾರವಾದ ನೀತಿಗಳ ಪರಿಣಾಮದಿಂದಾಗಿ ಸರ್ಕಾರದ ಉದ್ಯೋಗ ಗಳು ನಾಶವಾಗುತ್ತಿವೆ. ಸಾರ್ವಜನಿಕ ಉದ್ಯಮಗಳನ್ನು ಖಾಸಗಿಕರಣ ಗೊಳಿಸಲಾಗುತ್ತಿದೆ. ಇದರಿಂದಾಗಿ ಮೀಸಲಾತಿ ಮರೀಚಿಕೆ ಯಾಗುತ್ತಿದೆ. ಮತ್ತೊಂದು ಕಡೆ, ಗುತ್ತಿಗೆ, ಹೊರಗುತ್ತಿಗೆ ಹಾಗೂ ಗೌರವಧನ ದಂತಹ ಪದ್ದತಿ ಹೇರಳವಾಗುತ್ತಿದೆ. ಇಲ್ಲಿ ಮೀಸಲಾತಿ ಸೌಲಭ್ಯ ಸಿಗದಂತೆ ವ್ಯವಸ್ಥಿತ ಹುನ್ನಾರ ನಡೆಯುತ್ತಿದೆ. ಇದರಿಂದ, ಮುಂದಿನ ದಿನಗಳು ದಲಿತ ಸಮುದಾಯಕ್ಕೆ ಗಂಭೀರವಾದ ಅಪಾಯದ ಮುನ್ಸೂಚನೆ ಎದುರಾಗುವ ಸಂಭವವಿದೆ ಎಂಬ ಎಚ್ಚರಿಕೆಯ ಮಾತನ್ನು ಹೇಳಿದರು. ಮೀಸಲಾತಿಯನ್ನು ಖಾಸಗೀ ಕ್ಷೇತ್ರಕ್ಕೂ ವಿಸ್ತರಿಸ ಬೇಕೆಂಬ ಹೋರಾಟ ಇಂದು ತುರ್ತಾಗಿ ಸಂಘಟಿಸಬೇಕು. ಅಂತಹ ಹೋರಾಟದಲ್ಲಿ ದಲಿತರು ಮತ್ತು ದಲಿತೇರರು, ಪ್ರಮುಖವಾಗಿ ಕಾರ್ಮಿಕ ಸಂಘಟನೆಗಳು ಸಹಾ, ಈ ಹೋರಾಟವನ್ನು ಕೈಗೆತ್ತುಕೊಳ್ಳಬೇಕೆಂದರು.

2014 ರಲ್ಲಿ ಅಧಿಕಾರಕ್ಕೆ ಬಂದ, ಬಿಜೆಪಿ ಸರಕಾರ, ಯೋಜನಾ ಆಯೋಗವನ್ನು ರದ್ದು ಗೊಳಿಸಿ, ನೀತಿ ಆಯೋಗವನ್ನು ಹೊಸದಾಗಿ ಜಾರಿಗೆ ತಂದಿತು, ಇದರ ಪರಿಣಾಮದಿಂದಾಗಿ, ಪರಿಶಿಷ್ಟ ಜಾತಿ ಮತ್ತು

ಪುಟ 10 ಕ್ಕೆ





ರಾಜ್ಯಾದ್ಯಂತ ಕೃಷಿ ಕೂಲಿಕಾರರ ಪ್ರತಿಭಟನಾ ಪ್ರದರ್ಶನ

ಕೃಷಿ ಕೂಲಿಕಾರರಿಗೆ ಹೆಚ್ಚುತ್ತಿರುವ ಅವರ ದಾರಿದ್ರ್ಯ, ನಿರುದ್ಯೋಗ, ಆದಾಯ ಕುಸಿತ, ವಸತಿ ಹೀನತೆ, ಅನಧಿಕೃತ ಸಾಗುವಳಿ ಭೂಮಿಗೆ ಪಟ್ಟಾ ಸಿಗದಿರುವುದು ಮುಂತಾದ ಬದುಕಿನ ಸಮಸ್ಯೆಗಳಿಗೆ ಮೂಲ ಕಾರಣವೇನು? ಸರ್ಕಾರದ ನೀತಿಗಳಿಗೂ ನಮ್ಮ ಬದುಕಿಗೂ ಏನಾದರೂ ಸಂಬಂಧವಿದೆಯೋ ಎಂಬುದನ್ನು ಮನದಟ್ಟು ಮಾಡಲು ಪ್ರಚಾರಾಂದೋಲನ ನಡೆಸಿ ಅಕ್ಟೋಬರ್ 23 ರಂದು ತಾಲ್ಲೂಕು / ಜಿಲ್ಲಾಡಳಿತ ಕಛೇರಿಗಳ ಎದುರು ಪ್ರತಿಭಟನಾ ಪ್ರದರ್ಶನ ಮಾಡಲು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘವು ಕರೆ ನೀಡಿತ್ತು. ಈಗ ಸಿಕ್ಕಿರುವ ಮಾಹಿತಿಗಳ ಪ್ರಕಾರ ಈ ಕರೆಯನ್ನು ಅಲ್ಲಲ್ಲಿ ಜಾರಿ ಮಾಡಲಾಗಿದೆ

ಮಂಡ್ಯ ಜಿಲ್ಲೆ

ದಿನಾಂಕ–22–10–2019 ರಂದು ಬೆಸಗರಹಳ್ಳಿಯಿಂದ ಮಂಡ್ಯ ಜಿಲ್ಲಾ ಕೇಂದ್ರದ ವರೆಗೆ ಕಾಲ್ನಡಿಗೆ ಜಾತಾ ಸಂಘಟಿಸಲಾಗಿತ್ತು. 25 ಕಿ.ಮೀ ದೂರವನ್ನು ಕ್ರಮಿಸಿದ ಅವರು ಒಂದು ರಾತ್ರಿ ವಿಶ್ರಾಂತಿ ಪಡೆದಿದ್ದರು. ಕಂದಾಯ ಭೂಮಿಯಲ್ಲಿ ಅನೇಕ ವರ್ಷಗಳಿಂದ ವಾಸ ಇರುವ ನಿವಾಸಿಗಳಿಗೆ ಹಕ್ಕು ಪತ್ರ ನೀಡ ಬೇಕೆಂಬುದು ಅವರ ಬೇಡಿಕೆಯಾಗಿತ್ತು.

ಮರುದಿನ 23 ರಂದು ಅವರು ಮಂಡ್ಯ ತಲುಪುತ್ತಿದ್ದಂತೆ ವಿವಿಧ ತಾಲ್ಲೂಕುಗಳಿಂದ ಸುಮಾರು 700 ಮಂದಿ ಕೃಷಿ ಕೂಲಿಕಾರರು ತಂಡ ತಂಡವಾಗಿ ಬಂದು ಸೇರಿ ಕೊಂಡರು. ಬೃಹತ್ ಮೆರವಣಿಗೆ ಜಿಲ್ಲಾ ಪಂಚಾಯತ್ ಆಫೀಸ್ ಗೆ ತೆರಳಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಆಗಮಿಸುವ ವರೆಗೂ ಪ್ರತಿಭಟನೆ ನಡೆಯಿತು. ಸಿಇಓ ಭರವಸೆ ಕೊಟ್ಟು ಹೊರಟಾಗ ಬೇಡಿಕೆಗಳನ್ನು ಈಗಲೇ ಈಡೇರಿಸ ಬೇಕೆಂದು ಪಟ್ಟು ಹಿಡಿಯಲಾಯಿತು. ವಿವಿಧ ಗ್ರಾಮಗಳ ಒಟ್ಟು 12 ಬೇಡಿಕೆಗಳ ಮನವಿ ಪತ್ರ ವನ್ನು ಸಲ್ಲಿಸಲಾಗಿತ್ತು. ಕೊನೆಗೆ ಸಿಇಓ ರವರು ಬರುವ 13 ರಂದು ಹಿರಿಯ ಅಧಿಕಾರಿಗಳ ಜಿಲ್ಲಾ ಮಟ್ಟದ ಸಭೆ ಕರೆದು ಚರ್ಚಿಸಲು ಸಮ್ಮತಿಸಿದರು.

ಕೊಪ್ಪಳ ಮತ್ತು ಗಂಗಾವತಿ

ಪ್ರಾಂತ ಕೃಷಿ ಕೂಲಿಕಾರರ ಸಂಘ ದ ಕರೆಯ ಮೇರೆಗೆ ಅಕ್ಟೋಬರ್ 23 ರಂದು ಕೊಪ್ಪಳ ಮತ್ತು ಗಂಗಾವತಿ ಯಲ್ಲಿ ಪ್ರತಿಭಟನಾ ಪ್ರದರ್ಶನ ನಡೆಸಲಾಯಿತು. ಕೊಪ್ಪಳ ದಲ್ಲಿ ಮೆರವಣಿಗೆಯಲ್ಲಿ ಆಗಮಿಸಿದ ಕೂಲಿಕಾರರು ಅಶೋಕ ವೃತ್ತದಲ್ಲಿ ಪ್ರತಿಭಟನೆ ನಡೆಸಿದರು. ಅನಂತರ ತಹಶಿಲ್ದಾರರ ಕಛೇರಿಗೆ ತೆರಳಿ ಮನವಿ ಸಲ್ಲಿಸಿ ವಿವಿಧ ಬೇಡಿಕೆಗಳ ಬಗ್ಗೆ ಚರ್ಚಿಸಿದರು. ಕಾಮ್ರೆಡ್ ಸುಂಕಪ್ಪ ಗದಗ ಪ್ರತಿಭಟನೆ ನೇತ್ರತ್ವ ವಹಿಸಿದ್ದರು.

ಗಂಗಾವತಿ ಯಲ್ಲಿ ಅಂದು ಕೃಷಿ ಕೂಲಿಕಾರರು ನಗರದಲ್ಲಿ ಮೆರವಣಿಗೆ ಮಾಡಿ ಶ್ರೀ ಕೃಷ್ಣ ದೇವರಾಯ ವೃತ್ತದಲ್ಲಿ ಧರಣಿ ನಡೆಸಿದರು. ಅನಂತರ ಬೇಡಿಕೆಗಳ ಪತ್ರವನ್ನು ತಹಶಿಲ್ದಾರರಿಗೆ ಸಲ್ಲಿಸಲಾಯಿತು. ಮುಖಂಡರಾದ ಎಂ.ಬಸವರಾಜ, ಕೆ.ಹುಸೇನಪ್ಪ, ಗಂಗಾಧರಯ್ಯ ಸ್ವಾಮಿ, ಅಮೀನಮ್ಮ, ಬಸಮ್ಮ ಮಡಿವಾಳ ಮೊದಲಾದವರು ಪ್ರತಿಭಟನೆಯ ನೇತ್ರತ್ವವಹಿಸಿದರು.

ಚಿಂಚೋಳಿ

ಕಲಬುರಗಿ ಜಿಲ್ಲೆ ಚಿಂಚೋಳಿಯಲ್ಲಿ ನಡೆಸಲಾದ ಮೆರವಣಿಗೆಯಲ್ಲಿ ವಿವಿಧ ಗ್ರಾಮಗಳ ನೂರಾರು ಕೂಲಿಕಾರರು ಭಾಗವಹಿಸಿದ್ದರು, ಭೀಮಶೆಟ್ಟಿ ಯಂಪ್ಪಳಿ. ಮಲ್ಲಮ್ಮ ಕೋಡ್ಲಿ, ಜಗದೇವಿ ಚಂದನಕೇರಾ, ತುಳಜಪ್ಪ ಹಿರೇಬೀರನಹಳ್ಳಿ, ಪ್ರದೀಪ್, ಬಂಡಾಯ ಸ್ವಾಮಿ, ಖಾಜಾಮಿಯಾ, ಚಂದ್ರಮ್ಮ, ಜೈ ಶಂಕರ್ ಮೊದಲಾದವರು ನೇತೃತ್ವ ವಹಿಸಿದ್ದರು. ನಿತ್ಯಾನಂದ ಸ್ವಾಮಿ ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದರು. ಅನಂತರ ಬೇಡಿಕೆಗಳ ಪತ್ರ ವನ್ನು ತಹಶಿಲ್ದಾರರಿಗೆ ನೀಡಲಾಯಿತು. ಅವರು ಚರ್ಚೆ ಮಾಡಲು ಜಂಟಿ ಸಭೆ ಕರೆಯುವುದಾಗಿ ಹೇಳಿದರು

ಮುಂಡಗೋಡ್

ಉತ್ತರ ಕನ್ನಡ ಜಿಲ್ಲಾ ಮುಂಡಗೋಡ್ ತಾಲ್ಲೂಕು ಕೇಂದ್ರದಲ್ಲಿ ವಿವಿಧ ಗ್ರಾಮಗಳ ನೂರಕ್ಕೂ ಹೆಚ್ಚು ಕೂಲಿಕಾರರು ಮೆರವಣಿಗೆ ಹೊರಡಿಸಿ, ಸರ್ಕಾರದ ವಿರುದ್ಧ ಘೋಷಣೆ ಕೂಗಿ ತಹಶಿಲ್ದಾರರಿಗೆ ಮನವಿ ಸಲ್ಲಿಸಿದರು. ಸಂಘದ ತಾಲ್ಲೂಕು ಅಧ್ಯಕ್ಷರಾದ ಭೀಮಣ್ಣ ಭೋವಿ ಪ್ರತಿಭಟನೆಯ ನೇತ್ರತ್ವ ವಹಿಸಿದ್ದರು.









ಡಿ.ಎಚ್.ಎಸ್ ರಾಜ್ಯ ಅಧ್ಯಯನ....

ಪುಟ 8 ರಿಂದ

ಪರಿಶಿ ಪಂಗಡಕ್ಕೆ ಮೀಸಲಾಗಿಟ್ಟಿದ ವಿಶೇಷ ಘಟಕ ಯೋಜನೆಗಳಾದ, ಎಸ್.ಸಿ.ಎಸ್.ಪಿ ಮತ್ತು ಟಿ.ಎಸ್.ಪಿ ಉಪ ಯೋಜನೆಗಳನ್ನು ಸಹಾ, ರದ್ದು ಮಾಡಿದೆ. ಅದನ್ನು ಪುನಃ ವಾಪಸ್ ತರಬೇಕೆಂದು ನಮ್ಮ ಡಿಎಸ್‌ಎಮ್‌ಎಮ್ ಆಗ್ರಹವಾಗಿದೆ. ಮಾತ್ರವಲ್ಲದೇ, ಈ ಹಿಂದೆ ಇದ್ದ ಮಾರ್ಗದರ್ಶನದಂತೆ, ಅವರ ಜನ ಸಂಖ್ಯೆ ಗೆ ಅನುಗುಣವಾಗಿ ಬಜೆಟ್ ನಲ್ಲಿ ಹಣವನ್ನು ಹಂಚಬೇಕು. ಹಾಗೆ, ಒದಗಿಸಿದ ಹಣವನ್ನು ದಲಿತರ ಅಭಿವೃದ್ಧಿಗೆ ಮಾತ್ರ ಬಳಸ ಬೇಕು. ಆ ಹಣವನ್ನು ಬೇರೆ ಕಾಮಾಗಾರಿಗಳಿಗೆ ವ್ಯಯ ಮಾಡಬಾರದು ಎಂದರು. ಈ ಹಣವು ದುರ್ಬಳಕೆ ಆಗದಂತೆ ತಡೆಯಲು ಆಂದ್ರ ಮತ್ತು ಕರ್ನಾಟಕದಲ್ಲಿ ಇರುವಂತೆ, ಕಾಯಿದೆಯನ್ನು ಅನುಷ್ಠಾನಕ್ಕೆ ತರಬೇಕು ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು. ಏಕೆಂದರೆ, ಈ ಹಣವನ್ನು ದಲಿತರ ಅಭಿವೃದ್ಧಿ ಗಾಗಿ ವಿನಿಯೋಗ ಮಾಡದೆ, ಎಷ್ಟೋ ಸಂದರ್ಭದಲ್ಲಿ, ಸೇತುವೆ , ಅಣೆಕಟ್ಟು ಪ್ಲೈ ಓವರ್, ಸುರಂಗ ಮಾರ್ಗ, ಪಾರ್ಕುಗಳು, ಹೂವು ತೋಟಗಳ ಅಭಿವೃದ್ಧಿಗೆ ಬಳಸಿಕೊಂಡ ಉದಾಹರಣೆಗಳನ್ನು ರಾಘವಲು ನೀಡಿದರು. ಕ್ಷುಲ್ಲಕ ಕಾರಣಕ್ಕಾಗಿ ಸಾಮಾಜಿಕ ಬಹಿಷ್ಕಾರ, ಮೀಸಲಾತಿ ಉಲಂಘನೆ, ದೌರ್ಜನ್ಯ ತಡೆ ಕಾಯಿದೆಯ ದುರ್ಬಳಕೆ ಮಾಡುವ ಪ್ರವೃತ್ತಿ ಹೆಚ್ಚಾಗುತ್ತಿದೆ.

ಉನ್ನತ ಶಿಕ್ಷಣ ವನ್ನು, ಖಾಸಗಿಕರಣಗೊಳಿಸುವ ಮೂಲಕ ದಲಿತರಿಗೆ ಮತ್ತು ಇನ್ನಿತರೆ ಬಡವರಿಗೆ ಶಿಕ್ಷಣ ವಂಚಿಸುವ ಪಿತೂರಿ ನಡೆಯುತ್ತಿದೆ. ಸರ್ಕಾರಿ ಶಾಲೆಯಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಗೊಳ್ಳುತ್ತಿದೆ ಎಂಬ ನೆಪವೊಡ್ಡಿ ಬಡವರ ಮಕ್ಕಳಿಗೆ ಶೈಕ್ಷಣಿಕ ಸವಲತ್ತು ಎಟುಕದಂತೆ ಮಾಡಲಾಗುತ್ತಿದೆ. ಈ ನಿಟ್ಟಿನಲ್ಲಿ ಸರ್ಕಾರಿ ಶಾಲಾ ಕಾಲೇಜುಗಳನ್ನು ಮುಚ್ಚಲಾಗುತ್ತಿದೆ. ಹಾಸ್ಟೆಲ್ ಸೌಲಭ್ಯ, ವಿದ್ಯಾರ್ಥಿ ವೇತನ ಮುಂತಾದ ವಿಚಾರಗಳಲ್ಲಿ ತಾರತಮ್ಯ ಎಸಗಲಾಗುತ್ತಿದೆ. ಈ ಎಲ್ಲಾ ಸಂಗತಿಗಳ ಹಿಂದೆ ಬಿಜೆಪಿ ಸರ್ಕಾರದ ದಲಿತ ವಿರೋಧಿ ನಿಲುವು ಎದ್ದು ಕಾಣುತ್ತಿದೆ ಈ ಬಗ್ಗೆ ಗಂಭೀರ ವಾಗಿ ಆಲೋಚಿಸಬೇಕಾಗಿದೆ ಎಂದರು. ಸಾರ್ವಜನಿಕ ಕಲ್ಯಾಣ ಅಥವಾ ಸೇವೆ ಎಂಬುದು ಇದೀಗ ಕಣ್ಮರೆಯಾಗಿ ಲಾಭ ನಷ್ಟದ ಲೆಕ್ಕಾಚಾರವೇ ಹೆಚ್ಚಾಗಿದೆ. ಇದರಿಂದಾಗಿ, ಎಲ್ಲವನ್ನೂ ಖಾಸಗೀ ಒಡೆತನಕ್ಕೆ ಮತ್ತು ಬಹುರಾಷ್ಟ್ರೀಯ ಕಂಪನಿಗಳ ತೆಕ್ಕೆಗೆ ಮಾರಾಟ ಮಾಡಲಾಗುತ್ತಿದೆ. ಇದರಲ್ಲಿ, ಶಿಕ್ಷಣ, ಆರೋಗ್ಯ, ಸಾರಿಗೆ, ವಿದ್ಯುತ್, ರೈಲ್ವೇ, ವಿಮಾನಯಾನ, ಬ್ಯಾಂಕುಗಳು, ವಿಮಾ ಸಂಸ್ಥೆಗಳು ಮಾತ್ರವಲ್ಲದೆ, ದೂರವಾಣಿ ಮತ್ತು ದೂರದರ್ಶನ ಗಳು ಹೊರತಾಗಿಲ್ಲ. ಹೀಗೆ ಸರ್ಕಾರಿ ಸ್ವಾಮ್ಯದ ಎಲ್ಲಾ ಸೇವೆಗಳು, ಉದ್ಯಮ ಗಳು ಎಷ್ಟೇ ದಕ್ಷತೆಯಿಂದ ಕಾರ್ಯನಿರ್ವಹಿಸುತ್ತಿದ್ದರು ಸಹಾ, ನವ ಉದಾರಿಕರಣ ನೀತಿಯ ಭಾಗವಾಗಿ ಎಲ್ಲವನ್ನೂ ಖಾಸಗಿಕರಣ ಮಾಡುತ್ತಿರುವುದನ್ನು ಗಮನಿಸಿದರೆ, ಪ್ರಭುತ್ವವು ತನ್ನ ಅಸಮರ್ಥ ತೆಯಿಂದ ಸೋಲನ್ನು ಒಪ್ಪಿಕೊಂಡಂತಾಗಿದೆ ಎಂದು ಟೀಕಿಸಿದರು. ಸರ್ಕಾರದ ಉದ್ಯೋಗ ಗಳು ಇಲ್ಲವೆಂದಾಗ, ಮೀಸಲಾತಿ ಎಂಬುದಕ್ಕೆ ಅರ್ಥವೇ ಇರುವುದಿಲ್ಲ. ಆದ್ದರಿಂದ ದಲಿತ ಸಮುದಾಯ ಎಚ್ಚೆತ್ತು ಕೊಳ್ಳಲು ಇದು ಸೂಕ್ತ ಸಮಯವೆಂದು ರಾಘವಲು ರವರು ಅಭಿಪ್ರಾಯ ಪಟ್ಟರು.

ದಲಿತರ ಮೇಲಿನ ದೌರ್ಜನ್ಯ ದಬ್ಬಾಳಿಕೆಯ ಬಗ್ಗೆ ಪ್ರಸ್ತಾಪಿಸಿದ ರಾಘವಲು ರವರು, ಬಯಲು ಬಹಿರ್ದೆಸೆ ನೆಪದಿಂದ ಇಬ್ಬರು ದಲಿತ ಮಕ್ಕಳನ್ನು ಲಿಂಚಿಂಗ್ ಮೂಲಕ ಕೊಂದ ಪ್ರಕರಣ ಒಂದೆಡೆಯಾದರೆ, ಮಧ್ಯ ಪ್ರದೇಶದಲ್ಲಿ ಬಿಜೆಪಿ ಯ ಮಂತ್ರಿ ಯೊಬ್ಬ ಸಾರ್ವಜನಿಕ ವಾಗಿ ಗೋಡೆಗೆ ಮೂತ್ರ ವಿಸರ್ಜನೆ ಮಾಡಿದ ಪ್ರಕರಣವನ್ನು ಮರೆ ಮಾಚಿದ ಕೃತ್ಯಗಳು ಪಕ್ಷಪಾತದಿಂದ ಕೂಡಿದ್ದು, ಬಿಜೆಪಿಯ ಇಂತಹ ಬಯಲು ಸ್ವಚ್ಛ ತೆಯ ಬೂಟಾಟಿಕೆಯ ನೀತಿ ಸಾಮಾನ್ಯ ಜನರಿಗೆ ಅರ್ಥ ವಾಗುತ್ತಿದೆ. ಎಸ್.ಸಿ/ ಎಸ್.ಟಿ ದೌರ್ಜನ್ಯ ತಡೆ ಕಾಯಿದೆಯನ್ನು ದುರ್ಬಲ ಗೊಳಿಸಿದ ಸುಪ್ರಿಂ ಕೋರ್ಟ್ ನ ತೀರ್ಪಿನ ಹಿಂದೆ, ಸಂಘ ಪರಿವಾರದ ಕಾಣದ ಕೈಗಳು ಕೆಲಸ ಮಾಡಿರುವ ಬಗ್ಗೆ ಗುಮಾನಿ ವ್ಯಕ್ತ ಪಡಿಸಿದರು. ಇದರ ವಿರುದ್ಧ ರಾಷ್ಟ್ರ ಮಟ್ಟದಲ್ಲಿ ಮತ್ತು ಇಡೀ ದೇಶದಾದ್ಯಂತ ನಡೆದ ಉಗ್ರ ಸ್ವರೂಪದ ಪ್ರತಿ ಭಟನೆಗೆ ಬೆಚ್ಚಿ ಬಿದ್ದ ಕೇಂದ್ರ ಸರ್ಕಾರ ಪುನಃ, ಹಿಂದಿನಂತೆ ಊರ್ಜಿತಗೊಳಿಸಿತು. ಇಲ್ಲದಿದ್ದಲ್ಲಿ ದಲಿತ ಚಳುವಳಿಗೆ ಬಾರಿ ಹಿನ್ನಡೆ ಉಂಟಾಗುತ್ತಿತ್ತು ಎಂದರು.

ಸಂವಿಧಾನದ ಹಕ್ಕುಗಳನ್ನು ಮೊಟಕುಗೊಳಿಸಲು ಸದಾ, ತುದಿಗಾಲಲ್ಲಿ ನಿಂತಿರುವ ಆಳುವ ಬಿಜೆಪಿ ಸರ್ಕಾರ ವಿಶ್ವ ವಿದ್ಯಾ ನಿಲಯ ಗಳಲ್ಲಿಯೂ ಅಧಿಕಾರಿಗಳಿಗೆ ಮೀಸಲಾತಿ ಸೌಲಭ್ಯಕ್ಕೆ ಕತ್ತರಿ ಹಾಕುತ್ತಾ ರೋಸ್ಟರ್ ನಿಯಮಗಳನ್ನು ಉಲಂಘಿಸುತ್ತಿದ್ದಾರೆ.

ಶ್ರೀಮಂತ ರು ಸರ್ಕಾರದ ಭೂಮಿಯನ್ನು ಒತ್ತರಿಸಿಕೊಂಡು ಕಬಳಿಸುತ್ತಿದ್ದಾರೆ. ಅವರ ಕೈಗಾರಿಕೆ, ರಿಯಲ್ ಎಸ್ಟೇಟ್ ಭೂಮಿಯನ್ನು ಸಕ್ರಮಗೊಳಿಸುತ್ತಾರೆ. ಆದರೆ, ದಲಿತರು ಬದುಕಲು ತಮ್ಮ ವಾಸಕ್ಕಾಗಿಯೋ ಅಥವಾ ಕೃಷಿಗಾಗಿಯೋ ಸರ್ಕಾರದ ಭೂಮುಯನ್ನು ಆಶ್ರಯಿಸಿದ್ದರೆ, ಅದು ಅರಣ್ಯ ಭೂಮಿಯೆಂದು ಒಕ್ಕಲೆಬ್ಬಿಸಿತ್ತಾರೆ ಎಂದು ಸರ್ಕಾರದ ಶ್ರೀಮಂತ ಮತ್ತು ಕಾರ್ಪೊರೇಟ್ ವರ್ಗ ಪರ ನೀತಿಯನ್ನು ವಿವರಿಸಿದರು.

ದಲಿತರ ಮೇಲೆ ದೌರ್ಜನ್ಯ ನಡೆದರೆ, ಸ್ವಲ್ಪ ಪರಿಹಾರ ಕೊಟ್ಟು ಕೈ ತೊಳೆದುಕೊಳ್ಳುತ್ತಾರೆ. ಆದರೆ, ಅಪರಾಧಿಗಳಿಗೆ ಶಿಕ್ಷೆಯ ಪ್ರಮಾಣ ಮಾತ್ರ ಶೂನ್ಯ ಎನ್ನಬಹುದು. ದಲಿತರಿಗೆ ಭೂಮಿ ಹಂಚಿಕೆ, ಹಕ್ಕು ಪತ್ರ, ಪಟ್ಟಾ ವಿತರಣೆ ಮುಂತಾದ ಸವಲತ್ತುಗಳನ್ನು ದೊರಕಿಸಿಕೊಡುವಲ್ಲಿ ಅನ್ಯಾಯ ಹೆಚ್ಚಾಗಿರುತ್ತದೆ. ದಲಿತರ ಆರ್ಥಿಕ ಮತ್ತು ಸಾಮಾಜಿಕ ಪರಿಸ್ಥಿತಿ ಇಷ್ಟೊಂದು ಕೆಟ್ಟದಾಗಿರುವಾಗ, ದಲಿತ ಸಂಘಟನೆಗಳು ಮತ್ತು ಅದರ ನಾಯಕರು ತಮ್ಮ ತಮ್ಮ ಸಣ್ಣ ಪುಟ್ಟ ತಗಾದೆಯನ್ನು ಬದಿಗೊತ್ತಿ ವಿಶಾಲವಾದ ವೇದಿಕೆಯ ಅಡಿಯಲ್ಲಿ ಒಂದಾಗಿ ಐಕ್ಯತೆಯಿಂದ ಹೋರಾಡ ಬೇಕಾದ ಸಮಯ ವಿದಾಗಿದೆ ಎಂದು ತಿಳಿಸುತ್ತಾ, ಆ ನಿಟ್ಟಿನಲ್ಲಿ ನಿಮ್ಮ ಶಿಬಿರ ಸಾರ್ಥಕ ತೆಯ ಹೆಜ್ಜೆ ಗುರುತಾಗಲಿ ಎಂದು ಆಶಿಸುತ್ತಾ, ಶಿಬಿರದಲ್ಲಿ ಗಣನೀಯ ಸಂಖ್ಯೆಯಲ್ಲಿ ಭಾಗವಹಿಸಿದ್ದ ಮಹಿಳಾ ಶಿಬಿರಾರ್ಥಿಗಳನ್ನು ಅಭಿನಂದಿಸುತ್ತಾ, ನಿಮ್ಮ ಮೇಲೆ ನಡೆಯುವ ದೌರ್ಜನ್ಯ ಗಳ ವಿರುದ್ಧ ಹೋರಾಡಲು ಮುನ್ನುಗ್ಗಿರಿ ಎಂದರು. ಶಿಬಿರವನ್ನು ಆಯೋಜನೆ ಮಾಡಿರುವ ಡಿ.ಎಚ್.ಎಸ್ ನ ಎಲ್ಲಾ ಕಾರ್ಯಕರ್ತರಿಗೆ ವಿಶೇಷವಾಗಿ ಅಭಿನಂದಿಸುತ್ತಾ ತಮ್ಮ ಉಪನ್ಯಾಸವನ್ನು ಮುಗಿಸಿದರು. ತಮ್ಮ ಮಾತೃಭಾಷೆ ತೆಲುಗಿನಲ್ಲಿ ರಾಘವಲು ರವರು ಮಂಡಿಸಿದ ಉಪನ್ಯಾಸ ವನ್ನು, ಸಾಮಾಜಿಕ ಚಿಂತಕರಾದ, ಯು.ಬಸವರಾಜು ರವರು ಉತ್ತಮವಾಗಿ ಶಿಬಿರಾರ್ಥಿಗಳ ಮನ ಮುಟ್ಟುವಂತೆ ಕನ್ನಡದಲ್ಲಿ ಭಾಷಾಂತರಿಸಿದರು.

ಪಾಠ 3 :– ದಲಿತರ ವಿಮೋಚನೆಗೆ ರಾಜಕೀಯ ದಾರಿ ಯಾವುದು ? ಎಂಬ ವಿಷಯದ ಮೇಲೆ, ಸಾಮಾಜಿಕ ಚಿಂತಕರಾದ ಯು.ಬಸವರಾಜು ರವರು ಉಪನ್ಯಾಸ ನೀಡಿದರು.

ದೇಶೀಯ ಬಂಡವಾಳಶಾಹಿ ಗಳು ಮತ್ತು ಭೂ ಮಾಲೀಕರು ಸಖ್ಯತೆಯೊಂದಿಗೆ, ಏಕಸ್ವಾಮ್ಯಗುತ್ತೇದಾರಿ ಬಹುರಾಷ್ಟ್ರೀಯ ಬಂಡವಾಳಶಾಹಿ ಒಡೆಯರು, ಭಾರತದಲ್ಲಿ ಜಾತಿ ವ್ಯವಸ್ಥೆಯನ್ನು ಜೋಪಾನವಾಗಿ ಕಾಪಾಡಿಕೊಂಡು ಮುನ್ನ ನಡೆಸುತ್ತಿದ್ದಾರೆ ಎಂದು ಯು. ಬಸವರಾಜು ರವರು ತಮ್ಮ ಉಪನ್ಯಾಸದಲ್ಲಿ ಅಭಿಪ್ರಾಯ ವ್ಯಕ್ತಪಡಿಸಿದರು. ಮನುಪ್ರೇರಿತ ಅಸ್ಪೃಶ್ಯತೆ ಮತ್ತು ಜಾತಿ ಪದ್ಧತಿ, ವರ್ಣ ಭೇದ ನೀತಿಗಳು, ಇಂದಿಗೂ ಜೀವಂತವಾಗಿ ಆವರಣೆಯಲ್ಲಿ ಇವೆ. ಇದರೊಂದಿಗೆ, ಬಂಡವಾಳಶಾಹಿ ನೀತಿಯ ಭಾಗವಾಗಿ ಮನುಷ್ಯ ಮನುಷ್ಯ ರ ನಡುವಿನ ಶೋಷಣೆ ಹೆಚ್ಚಾಗಿರುವುದನ್ನು ತಿಳಿಸಿದರು. ಜಾತಿ ವ್ಯವಸ್ಥೆ ಯ ವಿನಾಶದಿಂದ ಮಾತ್ರ ದಲಿತರಿಗೆ ವಿಮೋಚನೆ ಸಾಧ್ಯವೆಂದರು. ಅದಕ್ಕಾಗಿ, ಮನು ವಾದ ವಿನಾಶ ಗೊಳ್ಳ ಬೇಕು. ಅಂತರ ಜಾತಿಯ ವಿವಾಹಗಳು ಹೆಚ್ಚಾಗಿ ನಡೆಯಲು ಪ್ರೋಯ ನೀಡಿಕೆಂದರು. ಇದರಿಂದಾಗಿ, ಜಾತಿ ವ್ಯವಸ್ಥೆ ಸ್ವಲ್ಪ ಮಟ್ಟಿಗೆ ಸಡಿಲಗೊಳ್ಳುತ್ತದೆ. ಪಾಳೆಗಾರಿಕೆಯ ಪಳೆಯುಳಿಕೆ ಗಳೇ, ಈ ಜಾತಿ ವ್ಯವಸ್ಥೆ ಯ ಮೂಲವೆಂದು ವ್ಯಾಖ್ಯಾನಿಸಿದರು. ದಲಿತರಿಗೆ ಆರ್ಥಿಕ ವಾಗಿ ವಂಚಿಸಲ್ಪಡಿಸಲಾಗಿದೆ. ಅಸ್ಪೃಶ್ಯತೆ ಯಿಂದಾಗಿ ಇವರ ಬದುಕು ಪರಾವಲಂಬಿಯಾಗಿದೆ. ಬಹುಸಂಖ್ಯಾತ ದಲಿತರಿಗೆ ಭೂಮಿಯ ಒಡೆತನವಿಲ್ಲ. ಸ್ವಾವಲಂಬಿ ಬದುಕು ಕಷ್ಟವಾಗಿದೆ. ಆದ್ದರಿಂದ, ಇಬರ ಕುಟುಂಬ ಗಳಿಗೆ, ತಲಾ ಐದು ಎಕರೆ ಫಲವತ್ತಾದ ಜಮೀನನ್ನು ನೀಡಬೇಕು ಎಂದರು.

ಅನಾದಿ ಕಾಲದಿಂದಲೂ ನದಿ ದಂಡೆಗಳ ಸಂಪನ್ಮೂಲ ಪ್ರದೇಶದಲ್ಲಿ ಬೀಡುಬಿಟ್ಟು ಪ್ರಾಣಿಗಳ ಬೇಟೆಯಾಡುತ್ತಾ, ಪಶು ಪಾಲನೆ ಮೂಲಕ ತಮ್ಮ ಆಹಾರ ಭದ್ರತೆ ಯನ್ನು ಕಾಯ್ದುಕೊಂಡು ಆ ನಂತರ ಬಲಹೀನ ಬುಡಕಟ್ಟು ಆದಿವಾಸಿ ಜನರ ಮೇಲೆ ಯುದ್ಧಗಳನ್ನು ಸಾರಿ ಸೋತವರನ್ನು ತಮ್ಮ ಗುಲಾಮರನ್ನಾಗಿಸಿ ಕೊಂಡು, ಅವರ ಮೂಲಕ ಸೇವೆಯನ್ನು ಪಡೆದು, ಈ ಜಾತಿ ವ್ಯವಸ್ಥೆ ಗೆ ಬುನಾದಿ ಹಾಕಿದರೆಂದು ವಿವರಿಸಿದರು.

ಬಂಡವಾಳಶಾಹಿ ಭೂ ಮಾಲಿಕರ ವಿರುದ್ಧ ಹೋರಾಡುತ್ತಿರುವ ಪ್ರಜಾಸತ್ತಾತ್ಮಕ ಚಳುವಳಿ ಗಳ ಜೊತೆ ಸೇರಿ, ದಲಿತರು ಹೋರಾಟ ಮಾಡಬೇಕು ಎಂದರು. ಇದಕ್ಕಾಗಿ ದೊಡ್ಡ ಆಂದೋಲನ ಆಗ ಬೇಕು, ಅದರ ಮೂಲಕ ಮುಖ್ಯ ವಾಹಿನಿಗೆ ದಲಿತ ಚಳುವಳಿ ಸೇರಬೇಕು. ಆಗ ಮಾತ್ರ ದಲಿತರ ವಿಮೋಚನೆ ಸಾಧ್ಯವೆಂದರು.

ಪಾಠ 4 :– ಸಂವಿಧಾನ ಓದಬೇಕು ಮತ್ತು ಅದನ್ನು ಆಚರಣೆಗೆ ತರಬೇಕು :– ಉಪನ್ಯಾಸ ಕರು. ಉಚ್ಚನ್ಯಾಯಾಲಯದ ವಿಶ್ರಾಂತ ನ್ಯಾಯ ಮೂರ್ತಿಗಳಾದ, ಹೆಚ್.ಎನ್.ನಾಗಮೋಹನ ದಾಸ್ ರವ ರಿಂದ....

ಸ್ವಾತಂತ್ರ್ಯ ನಂತರದ 72 ವರ್ಷ ಗಳಲ್ಲಿ ಭಾರತ ದೇಶವು ಹಲವು ಕ್ಷೇತ್ರದಲ್ಲಿ ಸಾಕಷ್ಟು ಸಾಧನೆಗಳನ್ನು ಮಾಡಿದ್ದು ರಾಜಕೀಯ, ಸಾಮಾಜಿಕ, ಆರ್ಥಿಕ ಹಾಗೂ ಬಾಹ್ಯಾಕಾಶ, ವೈಜ್ಞಾನಿಕ ಕ್ಷೇತ್ರದಲ್ಲಿ ಯೂ ಬಹಳಷ್ಟು ಸಾಧನೆಗಳನ್ನು ಸಾಧಿಸಿದೆ ಎಂದರು. ಇದಕ್ಕಾಗಿ ಭಾರತೀಯ ರಾದ ನಾವು ಗಳು ಹೆಮ್ಮೆ ಪಡಬೇಕು ಎಂಬ ಅಭಿಪ್ರಾಯ ವನ್ನು ವ್ಯಕ್ತ ಪಡಿಸಿದರು. 1947 ರಲ್ಲಿ ಸ್ವಾತಂತ್ರ್ಯ ಪಡೆದ ನಾವು, 1950 ರಲ್ಲಿ ಸಂವಿಧಾನವನ್ನು ಒಪ್ಪಿಕೊಂಡು ದೇಶಕ್ಕೆ ಅರ್ಪಿಸಿಕೊಂಡು ಗಣ ತಂತ್ರ ರಾಷ್ಟ್ರ ಮಾಡಿದೆವು ಎಂದು ತುಂಬು ಅಭಿಮಾನದಿಂದ ಹೇಳಿಕೊಳ್ಳಲೇ ಬೇಕೆಂದರು. ಎಷ್ಟೋ ರಾಷ್ಟ್ರ ಗಳು ಸ್ವತಂತ್ರವಾಗಿ ದ್ದರು, ಗಣರಾಜ್ಯ ವಾಗಿಲ್ಲ ಎಂಬ ಸಂಗತಿಯನ್ನು ತಿಳಿಸಿದರು.

ಸಂವಿಧಾನದ ಆಶಯಗಳಂತೆ ನಿರ್ಮಾಣ ಗೊಂಡ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ, 'ಕಾರ್ಯಾಂಗ, ಶಾಸಕಾಂಗ ಮತ್ತು ನ್ಯಾಯಾಂಗ'ಗಳು ಕಾನೂನುಗಳ ರಚನೆ, ಅವುಗಳ ಜಾರಿ, ಉಲಂಘನೆಗೆ ಶಿಕ್ಷೆ ವಿಧಿಸುವ ಅಧಿಕಾರ ಒಳಗೊಂಡು, ಸ್ವೇಚ್ಛಾಚಾರ ಪ್ರದರ್ಶನ ವಾಗದಂತೆ ನಿಯಮಗಳ ಅನುಸಾರ ಕಾರ್ಯನಿರ್ವಹಿಸುವಂತಹ ವ್ಯವಸ್ಥೆ ನಿರ್ಮಾಣ ಗೊಂಡಿರುವುದು ನಮ್ಮ ಸಂವಿಧಾನ ಕ್ಕೆ ಘನತೆ ತಂದು ಕೊಡುವುದರ ಜೊತೆಗೆ, ಅದರ ನಿರ್ಮಾತೃ ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ರವರನ್ನು, ಜಗತ್ತಿನ ಎಲ್ಲಾ ರಾಷ್ಟ್ರಗಳು ಭಾರತದತ್ತಾ ತಿರುಗಿ ನೋಡುವಂತಹ ಸ್ಥಿತಿ ನಿರ್ಮಾಣ ವಾಯಿತೆಂಬ ಅಭಿಪ್ರಾಯ ಪಟ್ಟರು.

ವಸಹಾತು ಶಾಹಿ, ಸಾಮ್ರಾಜ್ಯ ಶಾಹಿ, ಪಾಳೆಗಾರಿಕೆ ಪದ್ಧತಿಯನ್ನು ರದ್ದು ಮಾಡಿ ನಮ್ಮದೇ ಆದ, ರಾಷ್ಟ್ರ ಗೀತೆ, ರಾಷ್ಟ್ರ ಧ್ವಜ, ರಾಷ್ಟ್ರಪ್ರಾಣಿ, ಪಕ್ಷಿ, ಗಡಿ ನಿರ್ಮಾಣ ಹಾಗೂ ನ್ಯಾಯದಾನ ವ್ಯವಸ್ಥೆ ಗೆ ಸರ್ವೋಚ್ಚ ನ್ಯಾಯಾಲಯ, ಉಚ್ಚ ನ್ಯಾಯಾಲಯ, ಜಿಲ್ಲಾ ಮತ್ತು ತಾಲೂಕಿನ ನ್ಯಾಯಾಲಯಗಳನ್ನು ಸ್ಥಾಪಿಸಿಕೊಂಡು, ಪ್ರಬುದ್ಧ ಕಾನೂನಿನ ಚೌಕಟ್ಟಿನಲ್ಲಿ ಸುವ್ಯವಸ್ಥಿತ ರೀತಿಯಲ್ಲಿ ಜನತೆಗೆ ಬದುಕಲು, ನೀರು, ರಸ್ತೆ, ಉದ್ಯೋಗ, ವಸತಿ ಶಿಕ್ಷಣ ಆರೋಗ್ಯ ಮತ್ತು ಮೂಲಭೂತ ಸೌಕರ್ಯಗಳನ್ನು ಸಮಾನಾಂತರವಾಗಿ ಹಂಚಿಕೊಂಡು ಬದುಕಲು ಅನುವು ಮಾಡಿ ಕೊಟ್ಟಿದೆ ಎಂದು ಹೆಮ್ಮೆಯಿಂದ ಸಂವಿಧಾನ ಕುರಿತಂತೆ ಉಪನ್ಯಾಸ ನೀಡಿದರು.

ನಮ್ಮ ದೇಶ ಬಹುತ್ವ ಭಾರತವೆಂದು ಹೆಮ್ಮೆ ಪಡಬೇಕು. ಇದರಲ್ಲಿ ಸುಮಾರು 4,635 ಜಾತಿ ಉಪ ಜಾತಿಗಳಿವೆ. ಎಲ್ಲರಿಗೂ, ಕಾನೂನಿನ ಸಮಾನ ರಕ್ಷಣೆಯಿದೆ. ತಾರತಮ್ಯಕ್ಕೆ ಇಲ್ಲಿ ಅವಕಾಶವಿಲ್ಲ. ಸಹನೆ ಸಹಿಷ್ಣುತೆ ಮೂಲಕ ದೇಶವನ್ನು ಮುನ್ನಡೆ ಸಲು ಎಲ್ಲ ಅವಕಾಶಗಳನ್ನು ಸಂವಿಧಾನ ನಮಗೆ ಒದಗಿಸಿದೆ. ಈ ಸಂವಿಧಾನದಲ್ಲಿ, ಬುದ್ಧ,, ಬಸವಣ್ಣ, ಗಾಂಧಿ ಮತ್ತು ಅಂಬೇಡ್ಕರ್ ರವರ ಚಿಂತನೆಗಳನ್ನು ಮಾದರಿಯಾಗಿ ಒಳಗೊಂಡಿದೆ.

ಭಯೋತ್ಪಾದಕತೆ, ಭ್ರಷ್ಟಾಚಾರ ಮತ್ತು ಸಾಂಸ್ಕೃತಿಕ ದಿವಾಳಿತನ ವನ್ನು ಮೆಟ್ಟಿ ನಿಂತು, ಜಾತ್ಯಾತೀತ–ಪ್ರಜಾಸತ್ತಾತ್ಮಕ ಮೌಲ್ಯ ಗಳಿಂದ ದೇಶವನ್ನು ಕಟ್ಟಬೇಕಿದೆ. ಇದರಿಂದಾಗಿ, ಸಮ ಸಮಾಜದ ನಿರ್ಮಾಣ ವಾಗಲು ಸಾಧ್ಯತೆ ಇದೆ. ಈ ಕಾರಣಗಳಿಂದಾಗಿ, ಓದು, ಗ್ರಹಿಕೆ ಮತ್ತು ಅನುಷ್ಠಾನದ ಮೂಲಕ ಸಂವಿಧಾನದವನ್ನು ಉಳಿಸಬೇಕಾಗಿದೆ. ಇದು ನಮ್ಮೆಲ್ಲರ ಹೊಣೆಗಾರಿಕೆ ಎಂದರು. ಸಂವಿಧಾನದ ಪ್ರತಿಗಳನ್ನು ಸುಟ್ಟು ಹಾಕುತ್ತಿರುವ ಪಟ್ಟಭದ್ರ ಹಿತಾಸಕ್ತಿಗಳನ್ನು ಮಾರ್ಮಿಕವಾಗಿ ಟೀಕಿಸಿದರು.

ಎಲ್ಲಾ ಕಾನೂನು ಗಳ ತಾಯಿಯಾಗಿರುವ ಹಾಗೂ ಮಹತ್ವದ ಗ್ರಂಥ ವಾಗಿರುವ ಭಾತರೀಯ ಸಂವಿಧಾನವನ್ನು ಈ ದೇಶದ ಜನ ಅಧ್ಯಯನ ಮಾಡಬೇಕು ಮತ್ತು ಅರ್ಥೈಸಿಕೊಂಡು, ಆಚರಣೆಗೆ ತರಬೇಕು. ಆಗ ಮಾತ್ರ ನಮ್ಮ ದೇಶ ಸುಭದ್ರ ದೇಶವಾಗುವಲ್ಲಿ ಯಾವ ಸಂಶಯವಿಲ್ಲ ಎಂದರು. ನಮ್ಮ ದೇಶದಲ್ಲಿ ತಾಂಡವ ನೃತ್ಯ ವಾಡಿದ್ದ ವಸಹಾತು ಶಾಹಿ ಮತ್ತು ಪಾಳೇಗಾರಿ ಮೌಲ್ಯ ಗಳನ್ನು ಅದರ ಶೋಷಣೆ ಮತ್ತು ದಮನಕಾರಿ ದಾಳಿಗಳನ್ನು, ದಬ್ಬಾಳಿಕೆಯನ್ನು ಅರ್ಥಮಾಡಿಕೊಂಡಾಗ ಮಾತ್ರ, ಪ್ರಜಾಪ್ರಭುತ್ವ ಅರ್ಥವಾಗುತ್ತದೆ. ದೇಶವೆಂದರೆ, ಇಂದು ಹೇಳುತ್ತಿರುವಂತೆ ಕೇವಲ ಭೂ ಪ್ರದೇಶ ವಲ್ಲ. ಆ ಪ್ರದೇಶದ ಜನರು, ಅವರ ಚರಿತ್ರೆ, ಭಾಷೆ, ಸಂಸ್ಕೃತಿ ಮತ್ತು ಅವರು ಅನುಸರಿಸಿದ ಮಾನವೀಯ ಮೌಲ್ಯಗಳನ್ನು ಅರ್ಥ ಮಾಡಿಕೊಳ್ಳಬೇಕು. ಪ್ರಾಚೀನ ಇತಿಹಾಸ, ಮಧ್ಯಕಾಲೀನ ಇತಿಹಾಸ, ಮತ್ತು ಆಧುನಿಕ ಇತಿಹಾಸವನ್ನು ಗ್ರಹಿಸಿಕೊಂಡಾಗ ಮಾತ್ರ ಚರಿತ್ರೆಯ ನೈಜ ಸ್ವರೂಪದ ಅರಿವಾಗುತ್ತದೆ ಎಂದು ಸರಳವಾಗಿ ಉಪನ್ಯಾಸ ಮಾಡಿದರು.

ಬಾಹ್ಯಾಕಾಶ, ತಂತ್ರಜ್ಞಾನ, ಸಂಶೋಧನೆ ಮುಂತಾದ ಕ್ಷೇತ್ರದಲ್ಲಿ ಅವಕಾಶ ದೊರೆಯಲು ಭಾರತೀಯ ಸಂವಿಧಾನ ದಲ್ಲಿ ದೊರಕಿಸಿ ಕೊಟ್ಟಿರುವ ಅವಕಾಶಗಳೇ ಮೂಲ ಕಾರಣವಾಗಿವೆ. ಉನ್ನತ ಹುದ್ದೆಗಳಾದ, ಐ.ಎ.ಎಸ್. ಐ.ಪಿ.ಎಸ್. ಮತ್ತು ಐ.ಎಫ್.ಎಸ್ ನಲ್ಲಿ ದಲಿತರು ಕಾರ್ಯನಿರ್ವಹಿಸಲು ಹಾಗೂ ದಲಿತ ಸಮುದಾಯದ ವ್ಯಕ್ತಿ ಗಳು ಈ ದೇಶದ ರಾಷ್ಟ್ರಪತಿಗಳು ಉಪ ರಾಷ್ಟ್ರಪತಿಗಳು, ಉಪ ಪ್ರಧಾನಿಗಳು ಮತ್ತು ಮಹಿಳಾ ಮುಖ್ಯ ಮಂತ್ರಿ ಗಳಾಗಿ ಕಾರ್ಯ ನಿರ್ವಹಿಸಲು ಸಾಧ್ಯ ವಾಗಿರುವುದು ನಮ್ಮ ಸಂವಿಧಾನ ದಿಂದ ಎಂದು ನಾವೆಲ್ಲರೂ ಹೆಮ್ಮೆ ಪಡಬೇಕೆಂದರು.

ಪ್ರಥಮ ರಾಷ್ಟ್ರ ಪತಿಗಳಾದ ಬಾಬು ರಾಜೇಂದ್ರ ಪ್ರಸಾದ್ ರ ಅಧ್ಯಕ್ಷತೆಯಲ್ಲಿ ರೂಪುಗಂಡ ಭಾರತೀಯ ಸಂವಿಧಾನ ರಚನಾ ಸಮಿತಿಯು 13 ಉಪ ಸಮಿತಿಗಳು ಒಳಗೊಂಡಿತ್ತು. ಇದರ ಕರಡು ರಚನಾ ಸಮಿತಿಯ ಅಧ್ಯಕ್ಷರಾದ ಬಾಬಾ ಸಾಹೇಬ್ ಅಂಬೇಡ್ಕರ್ ರವರ ಪರಿಶ್ರಮದಿಂದ 02 ವರ್ಷ 11 ತಿಂಗಳು 17 ದಿವಸಗಳಲ್ಲಿ ರಚಿತವಾದ ಭಾರತೀಯ ಸಂವಿಧಾನವು 1949 ರ ನವೆಂಬರ್ 26ರಂದು ದೇಶಕ್ಕೆ ಅರ್ಪಿತವಾಯಿತು ಎಂದು ಶ್ಲಾಘಿಸಿದರು.

ಇದೀಗ, 1991 ರ ನಂತರ ದೇಶದಲ್ಲಿ ಜಾರಿಗೆ ತಂದ ನವ ಉದಾರವಾದ ನೀತಿಗಳ ಪರಿಣಾಮವಾಗಿ ಎಲ್ಲಾ ಕ್ಷೇತ್ರಗಳನ್ನು ಖಾಸಗಿ ಕರಣ ಮಾಡಲಾಗತ್ತಿದೆ. ಇದರಿಂದಾಗಿ, ಸಂವಿಧಾನದ ಮೂಲ ಆಶಯಗಳಿಗೆ ಅಪಾಯ ಬಂದದೊಗುವ ಸಂಭವ ಕಾಣುತ್ತಿದೆ. ಪ್ರಜಾಪ್ರಭುತ್ವ ಅಪಾಯದ ಅಂಚಿನಲ್ಲಿದೆ. ಎಲ್ಲರಿಗೂ ಆರ್ಥಿಕ ಹಾಗೂ ಸಾಮಾಜಿಕ ಸಮಾನತೆ ಗಾಳಿ ಸುದ್ದಿ ಯಾಗಿದೆ. ಮೀಸಲಾತಿಯು ಶಾಸ್ವತ ಪರಿಹಾರವಲ್ಲ, ಬದಲಾಗಿ ಎಲ್ಲರಿಗೂ ಉದ್ಯೋಗ ಹಕ್ಕು ಮೂಲ ಭೂತ ಹಕ್ಕನಾಗಿ ಪರಿಗಣಿಸಬೇಕು. ಆ ನಿಟ್ಟಿನಲ್ಲಿ ಈ ಪ್ರಬುದ್ಧ ವಾದ ಸಂವಿಧಾನ ವನ್ನು ಉಳಿಸಬೇಕು ಹಾಗೂ ಇದರ ಆಶಯಗಳನ್ನು ಆಚರಣೆಗೆ ತರಬೇಕು ಇದೇ ನಮ್ಮ ಮುಂದಿರುವ ಆದ್ಯತೆ ಎಂದು ತಮ್ಮ ಉಪನ್ಯಾಸ ಮುಗಿಸುವ ಮುನ್ನಾ, ಡಿ.ಎಚ್.ಎಸ್. ಆಯೋಜಕರಿಗೆ ಧನ್ಯವಾದ ಸಲ್ಲಿಸಿದರು.

ಮೂರು ದಿನಗಳ ಅಧ್ಯಯನ ಶಿಬಿರದ ಸಮಾರೋಪ ಸಮಾರಂಭದಲ್ಲಿ,, ಸ್ವಾಗತ ಸಮಿತಿಯ ಗೌರವ ಅಧ್ಯಕ್ಷರಾದ ಡಿ.ಶಿವಶಂಕರ್, ಕಾರ್ಯಾಧ್ಯಕ್ಷರಾದ ಗೋಪಾಲಕೃಷ್ಣ ಹರಳಹಳ್ಳಿ, ಅಧ್ಯಕ್ಷರಾದ ಶ್ರೀ ಯುತ. ಮಹಾದೇವ ಮತ್ತು ಡಿ.ಎಸ್.ಎಂ.ಎಂ.ನ ನಾಗರಾಜ ನಂಜುಂಡಯ್ಯ, ಬಿ.ರಾಜಶೇಖರ ಮೂರ್ತಿ, ಎನ್.ರಾಜಣ್ಣ, ಹೆಚ್.ಜಿ ನಾಗಣ್ಣ, ವನಜಾ, ಶರಣಪ್ಪ, ನಂಜೇಗೌಡ, ಬಿ.ಸುರೇಶ್, ಇನ್ನಿತರರು ಭಾಗವಹಿಸಿದ್ದರು.ಒಟ್ಟರೆಯಾಗಿ ಶಿಬಿರ ಅರ್ಥಪೂರ್ಣವಾಗಿ, ಯಶಸ್ಸು ದಾಖಲಿಸಿತು. ಪ್ರಮುಖವಾಗಿ ಸ್ವಾಗತ ಸಮಿತಿಯ ಅಧ್ಯಕ್ಷರಾದ ಶ್ರೀ ಮಹಾದೇವರ ಜವಾಬ್ದಾರಿಯುತ ಕಾರ್ಯನಿರ್ವಹಣೆ ಎಲ್ಲರ ಶ್ಲಾಘನಗೆ ಪಾತ್ರವಾಯಿತು.

ಶ್ರದ್ಧಾಂಜಲಿ



ಕಾಂ. ಕೋದಂಡರಾಮ್

ಜನನ: 26.03.1935
ನಿಧನ: 19.10.2019

ಹಿರಿಯ ಕಾರ್ಮಿಕ ಮುಖಂಡ ಕೋದಂಡರಾಮ ನಿಧನ

ಹಿರಿಯ ಕಾರ್ಮಿಕ ಮುಂದಾಳು, ಗೋವಾ ವಿಮೋಚನಾ ಹೋರಾಟಗಾರರು, ಸ್ವಾತಂತ್ರ್ಯ ಹೋರಾಟಗಾರ ಸಿಐಟಿಯು ಮತ್ತು ಸಿಪಿಐ(ಎಂ) ಮುಖಂಡರಾಗಿದ್ದ ಕೋದಂಡರಾಮ್ ಅವರು ತಮ್ಮ 84ನೇ ವಯಸ್ಸಿನಲ್ಲಿ ಅಕ್ಟೋಬರ್ 19 ರಂದು ರಾತ್ರಿ 8 ಕ್ಕೆ ನಿಧನರಾದರು.

ಅವರು ಬೆಂಗಳೂರಿನ ಸಿಐಟಿಯು ರಾಜ್ಯ ಕಚೇರಿಯಾದ ಸೂರಿ ಭವನದಲ್ಲಿ ವಾಸವಾಗಿದ್ದರು. ಅವಿವಾಹಿತರಾಗಿದ್ದ ಅವರು ಚಿಕ್ಕ ವಯಸ್ಸಿನಲ್ಲೇ ತಮ್ಮನ್ನು ಪೂರ್ಣವಾಗಿ ಚಳುವಳಿಯಲ್ಲಿ ತೊಡಗಿಸಿಕೊಂಡಿದ್ದರು.

ಅವರು ತುಮಕೂರು ಜಿಲ್ಲೆಯ ತಿಪಟೂರು ತಾಲೂಕಿನಲ್ಲಿ ಪೌರಕಾರ್ಮಿಕರು, ಬೀಡಿಕಾರ್ಮಿಕರನ್ನು ಸಂಘಟಿಸುತ್ತ ತಮ್ಮ ಸಾರ್ವಜನಿಕ ಜೀವನವನ್ನು ಆರಂಭಿಸಿದರು.

ಸಿಐಟಿಯುನ ನಾಯಕರಾಗಿ ನಾಲ್ಕೈದು ದಶಕಗಳ ಕಾಲ ಕೆಲಸ ಮಾಡಿದ ಅನುಭವ ಹೊಂದಿದ್ದರು. ತಿಪಟೂರಿನಲ್ಲಿ ಸಮಕಾಲೀನರಾದ ವಕೀಲರಾದ ಬಿ.ಡಿ.ರಾಮಯ್ಯ, ನಿವೃತ್ತ ನ್ಯಾಯಾಧೀಶರಾದ ಮರಿಯಪ್ಪ, ಸ್ವಾತಂತ್ರ್ಯ ಹೋರಾಟಗಾರ ಮಹಮದ್ ದಸ್ತಗೀರ್, ಹಾಗಲವಾಡಿ ಚನ್ನಪ್ಪ, ಚನ್ನಬಸಣ್ಣ, ಎಸ್.ಆರ್. ಆರಾಧ್ಯ ಅವರ ಜೊತೆಗೂಡಿ ಹಲವಾರು ಪ್ರಮುಖ ಚಳವಳಿಗಳನ್ನು ಸಂಘಟಿಸಿದ್ದರು.

ತಮ್ಮ ಇಳಿವಯಸ್ಸಿನಲ್ಲಿಯೂ ಲವಲವಿಕೆಯಿಂದ ಆಶಾಭಾವನೆಯೊಂದಿಗೆ ಸಂಘಟನೆಗಳಲ್ಲಿ ತೊಡಗಿಸಿಕೊಂಡಿದ್ದ ಅವರು ಸಿಐಟಿಯುನ ರಾಜ್ಯ ಮುಖಂಡರಾಗಿ, ದೀರ್ಘಕಾಲ ಸಿಐಟಿಯು ರಾಜ್ಯ ಕಚೇರಿ ಕಾರ್ಯದರ್ಶಿಯಾಗಿ ದುಡಿದಿದ್ದರು. ತುಮಕೂರು ಜಿಲ್ಲಾ ಬೀಡಿ ಕಾರ್ಮಿಕರ ಸಂಘ, ತುಮಕೂರು ಜಿಲ್ಲಾ ಫುಟ್‌ಪಾತ್ ವ್ಯಾಪಾರಿಗಳ ಸಂಘದ ಸಂಸ್ಥಾಪಕ ಮುಖಂಡರಾಗಿ ಹಾಗೂ ಸಿಪಿಐ(ಎಂ) ಪಕ್ಷದ ಶಿಸ್ತುಬದ್ಧ ಕಾರ್ಯಕರ್ತರಾಗಿದ್ದರು.

ಅವರು ಚಳವಳಿಗಾಗಿ ತಮ್ಮ ವೈಯಕ್ತಿಕ ಬದುಕನ್ನು ತ್ಯಾಗ ಮಾಡಿ ಶೋಷಿತರ, ಕಾರ್ಮಿಕರ ಪರ ಕೆಲಸ ಮಾಡುತ್ತಿದ್ದರು.

ಅವರ ಅಂತ್ಯ ಸಂಸ್ಕಾರವು ಮರುದಿನ ಮಧ್ಯಾಹ್ನ 2 ಗಂಟೆ ಬೆಂಗಳೂರಿನ ವಿಲ್ಸನ್ ಗಾರ್ಡನ್ ವಿದ್ಯುತ್ ಚಿತಾಗಾರದಲ್ಲಿ ನೆರವೇರಿತು. ಅಂದು ಮಧ್ಯಾಹ್ನ 01 ಗಂಟೆಯವರೆಗೆ ಸಂಪಂಗಿರಾಮನಗರದ ಸಿಐಟಿಯು ರಾಜ್ಯ ಕಚೇರಿಯಲ್ಲಿ ಅವರ ಮೃತ ದೇಹವನ್ನು ಇರಿಸಿ ಆ ಸಂದರ್ಭದಲ್ಲಿ ಏರ್ಪಡಿಸಲಾಗಿದ್ದ ಶ್ರದ್ಧಾಂಜಲಿ ಸಭೆಯಲ್ಲಿ ನಿವೃತ್ತ ನ್ಯಾಯಧೀಶ ಮರಿಯಪ್ಪ, ನಿತ್ಯಾನಂದಸ್ವಾಮಿ, ಎಸ್. ವರಲಕ್ಷ್ಮಿ, ಜಿ.ಎನ್. ನಾಗರಾಜ್, ಕೆ.ಎನ್. ಉಮೇಶ್, ವೀರಸ್ವಾಮಿ, ಪ್ರತಾಪ್, ಶಾರದಾ ಮತ್ತು ತಿಪಟೂರಿನ ಅವರ ಒಡನಾಡಿಗಳು ಮಾತನಾಡಿ ನುಡಿ ನಮನ ಸಲ್ಲಿಸಿದರು. ಅಂತಿಮ ನಮನ ಸಲ್ಲಿಸಲು ಅವಕಾಶ ಕಲ್ಪಿಸಲಾಗಿತು.

ಅಕ್ರಮ ವಲಸಿಗರಿಗೆ ಜೈಲು ಕಟ್ಟೋ ಮೊದಲು ನೆರೆ ನಿರಾಶ್ರಿತರಿಗೆ ಬದುಕು ಕಟ್ಟಿಕೊಡಿ

ಸಿಐಟಿಯು ಧಾರವಾಡ ಜಿಲ್ಲಾ ಸಮ್ಮೇಳನ ದಲ್ಲಿ ರಾಜ್ಯ ಕಾರ್ಯದರ್ಶಿ ಕೆ. ಮಹಾಂತೇಶ ಆಗ್ರಹ



ಅಕ್ಟೋಬರ 20, 2019 ರಂದು ಸಿಐಟಿಯು ಧಾರವಾಡ ಜಿಲ್ಲಾ 4 ನೇ ಸಮ್ಮೇಳನವನ್ನು ಅಕ್ಕನ ಬಳಗ ಸಭಾಂಗಣದಲ್ಲಿ ಉದ್ಘಾಟಿಸಿ ಮಾತನಾಡಿದ ಸಿಐಟಿಯು ರಾಜ್ಯ ಕಾರ್ಯದರ್ಶಿ ಕೆ. ಮಹಾಂತೇಶ ರಾಜ್ಯದ ಬಿಜೆಪಿ ಸರಕಾರದ ಗೃಹ ಸಚಿವರು ಹಾಗೂ ಧಾರವಾಡ ಜಿಲ್ಲೆಯವರೆ ಆದ ಬಸವರಾಜ್ ಬೊಮ್ಮಾಯಿ ಅವರು ರಾಜ್ಯದಲ್ಲಿರುವ ಅಕ್ರಮ ವಿದೇಶಿ ವಲಸಿಗರಿಗಾಗಿ ಜೈಲುಗಳನ್ನು ಕಟ್ಟುವ ಬಗ್ಗೆ ಮಾತನಾಡುತ್ತಿದ್ದಾರೆ. ಆದರೆ ಕಳೆದ ಮೂರ್ನಾಕು ತಿಂಗಳಿಂದ ನೆರೆ ಹಾವಳಿಯಿಂದ ಧಾರವಾಡ ಜಿಲ್ಲೆ ಸೇರಿ ಇಡೀ ಉತ್ತರ ಕರ್ನಾಟಕದ ಲಕ್ಷಾಂತರ ಜನರ ಬದುಕು ಬೀದಿಗೆ ಬಿದ್ದಿದೆ. ಆದ್ದರಿಂದ ಅಕ್ರಮ ವಲಸಿಗರಿಗೆ ಹೊಸದಾಗಿ ಜೈಲ್‌ನ್ನು ಆ ಮೇಲೆ ಕಟ್ಟಿ, ಅದಕ್ಕಿಂತ ಮೊದಲು ಸಂತ್ರಸ್ತರಿಗೆ ನೆಮ್ಮದಿಯ ಬದುಕು ಕಟ್ಟಿಕೊಡಿ ಎಂದು ಆಗ್ರಹಪಡಿಸಿದರು. ಕೇಂದ್ರ ಹಾಗೂ ರಾಜ್ಯದಲ್ಲಿ ಅಧಿಕಾರದಲ್ಲಿರುವ ಬಿಜೆಪಿ ಸರ್ಕಾರ ಕಾರ್ಮಿಕ ವರ್ಗದ ಕನಿಷ್ಠ ವೇತನ, ಸಾಮಾಜಿಕ ಭದ್ರತೆ ಬಗ್ಗೆಯಾಗಲಿ ಅಥವಾ ರೈತಾಪಿ ಜನರ ಪ್ರಶ್ನೆಗಳಾದ ಬೆಂಬಲ ಬೆಲೆ, ಬೆಳೆ ನಷ್ಟ ಪರಿಹಾರ, ಸಾಲಮನ್ನಾ ಕುರಿತಾಗಿ ಯಾವುದೇ ಪರಿಹಾರ ನೀಡುತ್ತಿಲ್ಲ. ಬದಲಾಗಿ ಭಾವನಾತ್ಮಕ ಪ್ರಶ್ನೆಗಳನ್ನು ಮುಂದುಮಾಡಿ ಜನರನ್ನು ನೈಜ ಸಮಸ್ಯೆಗಳಿಂದ ಮಾಚುತ್ತಿದ್ದಾರೆ ಈ ಸಂಚನ್ನು ದುಡಿಯುವ ಜನರು ಅರ್ಥಮಾಡಿಕೊಂಡು ಕೇಂದ್ರ ಹಾಗೂ ರಾಜ್ಯ ಸರಕಾರಗಳ ಇಂತಹ ನೀತಿಗಳ ವಿರುದ್ಧ ಹೋರಾಟ ನಡೆಸಬೇಕಿದೆ ಎಂದು ಕರೆ ನೀಡಿದರು.

ಮುಖ್ಯ ಅತಿಥಿಗಳಾಗಿ ಹಿರಿಯ ವಕೀಲರು ಹಾಗೂ ಕರ್ನಾಟಕ ವಿದ್ಯಾವರ್ಧಕ ಸಂಘದ ಪ್ರಧಾನ ಕಾರ್ಯದರ್ಶಿ ಪ್ರಕಾಶ ಉಡಿಕೇರಿ ಮಾತನಾಡಿ ಭಾರತದ ಅರ್ಥವ್ಯವಸ್ಥೆ ತೀವ್ರ ಬಿಕ್ಕಟ್ಟಿಗೆ ಸಿಲುಕಿರುವ ಈ ಹೊತ್ತಿನಲ್ಲೂ ನಮ್ಮ ದೇಶದ ಪ್ರಧಾನಿಯವರು ಇಡೀ ಪ್ರಪಂಚವನ್ನೇ ನಿಯಂತ್ರಿಸುವ "ಜಗಪತಿ" ಯಾಗಲು ಹೊರಟಿದ್ದಾರೆ. ಕೇಂದ್ರ ಸರಕಾರದ ನೀತಿಗಳು ದುಡಿಯುವ ಜನರ ಬದುಕನ್ನು ದುಸ್ತರಕ್ಕೆ ತಳ್ಳುತ್ತಿವೆ ಆದ್ದರಿಂದ ಜನಪರ ನೀತಿಗಳಾಗಿ ಕಾರ್ಮಿಕ ವರ್ಗ ಹೋರಾಟ ನಡೆಸುವುದು ಹಿಂದೆಂದಿಗಿಂಲೂ ಈಗ ಅನಿವಾರ್ಯವಾಗಿದೆ ಎಂದರು.

ಸಮ್ಮೇಳನಕ್ಕೆ ಶುಭಕೋರಿ ಕನ್ನಡಪರ ಹೋರಾಟಗಾರ ಅಮೃತ ಇಜಾರಿ ಮಾತನಾಡಿ ಮಹಾದಾಯಿ ನೀರಿಗಾಗಿ ಉತ್ತರ ಕರ್ನಾಟಕದ ಜನರು ಹಲವು ವರ್ಷಗಳಿಂದ ಹೋರಾಟ ನಡೆಸುತ್ತಿದ್ದರೂ ಕೇಂದ್ರ ಸರಕಾರ ಸ್ಪಂದಿಸದಿರುವುದನ್ನು ಅವರು ಖಂಡಿಸಿದರು. ರೈತಮುಖಂಡರಾದ ಬಿ.ಎಸ್.ಸೊಪ್ಪಿನ್, ಸಿಐಟಿಯು ಮಾಜಿ ಮುಖಂಡರಾದ ಎಂ.ಬಿ.ಕಟ್ಟಿ, ಎಐಟಿಯುಸಿ ದೇವಾನಂದ ಜಗಾಪೂರ ಸಭೆಯಲ್ಲಿ ಮಾತನಾಡಿದರು. ಸಮ್ಮೇಳನದ ಅಧ್ಯಕ್ಷತೆಯನ್ನು ಬಿ.ಐ. ಈಳಿಗೇರಾ ವಹಿಸಿದ್ದರು. ಆರಂಭದಲ್ಲಿ ಜಿಲ್ಲಾ ಗೌರವಧ್ಯಕ್ಷರಾದ ಬಿ.ಎನ್. ಪೂಜಾರ್ ಧ್ವಜಾರೋಹಣ ನೆರವೇರಿಸಿದರು. ನಂತರ ಪ್ರಧಾನ ಕಾರ್ಯದರ್ಶಿ ಮಹೇಶ ಪತ್ತಾರ್ ಮಂಡಿಸಿದ ವರದಿ ಮೇಲೆ ವಿವಿಧ ವಿಭಾಗಗಳ ಕಾರ್ಮಿಕ ಪ್ರತಿನಿಧಿಗಳು ಮಾತನಾಡಿದರು. ಕೊನೆಯಲ್ಲಿ ಜಿಲ್ಲಾ ಸಹ ಕಾರ್ಯದರ್ಶಿ ಗುರುಸಿದ್ದಪ್ಪ ಅಂಬಿಗೇರಾ ವಂದಿಸಿದರು.

ಜಿಲ್ಲಾ ಸಮಿತಿಗೆ ನೂತನ ಪದಾಧಿಕಾರಿಗಳ ಆಯ್ಕೆ

ಗೌರವಾಧ್ಯಕ್ಷರಾಗಿ ಬಿ.ಎನ್.ಪೂಜಾರಿ, ಅಧ್ಯಕ್ಷರಾಗಿ ಬಿ.ಐ.ಈಳಿಗೇರ, ಪ್ರಧಾನ ಕಾರ್ಯದರ್ಶಿಯಾಗಿ ಮಹೇಶ ಪತ್ತಾರ, ಖಜಾಂಚಿಯಾಗಿ ಗುರುಸಿದ್ದಪ್ಪ ಅಂಬಿಗೇರ ಮತ್ತು ಉಪಾಧ್ಯಕ್ಷರುಗಳಾಗಿ ಬಸವಣ್ಣೆಪ್ಪ ನೀರಲಗಿ, ಬಸಮ್ಮ ಕಳಸದ, ಅಂಜನಾ ಬಡಿಗೇರ ಹಾಗೂ ಕಾರ್ಯದರ್ಶಿಗಳಾಗಿ ಲಲಿತಾ ಹಿರೇಮಠ, ಚನ್ನಮ್ಮ ಡೊಳ್ಳಿನ, ಕತಾಲಸಾಬ ಮುಲ್ಲಾ, ಮಂಜುನಾಥ ದೊಡ್ಡಮನಿ, ಮಹೇಶ ಹೊನಗೊಂಡ, ವಿರೇಶ ಗಡ್ಡದಮಠ ಆಯ್ಕೆಯಾಗಿದ್ದಾರೆ. 21 ಜನ ಕಾರ್ಯಕಾರಿ ಸಮಿತಿಗೆ ಆಯ್ಕೆಯಾಗಿದ್ದಾರೆ.

ಮಹದಾಯಿ ವಿವಾದ : ಪ್ರಧಾನಮಂತ್ರಿಗಳ ಮಧ್ಯಪ್ರವೇಶಕ್ಕೆ ಒತ್ತಾಯ

ಮಹದಾಯಿ ನ್ಯಾಯಾಧೀಕರಣ ಈಗಾಗಲೇ ಐತೀರ್ಪು ನೀಡಿದ್ದು ಇದರಿಂದ ಕರ್ನಾಟಕಕ್ಕೆ ಮಹದಾಯಿ ನೀರು ಹಂಚಿಕೆಯಲ್ಲಿ ದೊಡ್ಡ ಅನ್ಯಾಯವಾಗಿದೆ. ಆದರೂ ಕರ್ನಾಟಕಕ್ಕೆ ತೀರ್ಪಿನನ್ವಯ 13 ಟಿಎಂಸಿ ನೀರು ಹಂಚಿಕೆಯಾಗಿದ್ದು ಆ ನೀರನ್ನು ಮಲಪ್ರಭೆಗೆ ಹರಿಸಲು ಅನುವುವಾಗುವಂತೆ ಕೇಂದ್ರ ಸರಕಾರ ಕೂಡಲೇ ಅಧಿಸೂಚಣೆ ಹೊರಡಿಸಬೇಕಾಗಿತ್ತು. ಆದರೇ ಈ ವರೆಗೂ ಕೇಂದ್ರ ಸರಕಾರ ತನ್ನ ಜವಾಬ್ದಾರಿಯನ್ನು ನಿಭಾಯಿಸಲೇ ಇಲ್ಲ. ಹೆಚ್ಚುವರಿ ಕರ್ನಾಟಕದ ನೀರಿನ ಹಕ್ಕನ್ನು ಪಡೆಯಲು ಸರ್ವೋಚ್ಚ ನ್ಯಾಯಾಲಯಕ್ಕೆ ರಾಜ್ಯದಿಂದ ಮೇಲ್ಮನವಿ ಸಲ್ಲಿಸಲಾಗಿದ್ದು ರಾಜ್ಯ ಸರಕಾರ ನ್ಯಾಯಾಲಯದಲ್ಲಿ ಸಮರ್ಥವಾಗಿ ರಾಜ್ಯದ ನೀರಿನ ಹಕ್ಕನ್ನು ಪಡೆಯಲು ವಾದ ಮಂಡಿಸಬೇಕು.

ಈ ಹಿಂದೆಯೂ ಸಂಬಂದಿಸಿದ ರಾಜ್ಯಗಳ ಮುಖ್ಯಮಂತ್ರಿಗಳ ಸಭೆ ನಡೆಸಿ ಸೌಹಾರ್ದಿತವಾಗಿ ಸಮಸ್ಯೆ ಇತ್ಯರ್ಥಪಡಿಸಿಕೊಳ್ಳಲು ಪ್ರಯತ್ನಗಳು ನಡೆದಾಗ್ಯೂ ಗೋವಾ ರಾಜ್ಯ ತನ್ನ ಮೊಂಡತನವನ್ನು ಪ್ರದರ್ಶಿಸುತ್ತಲೆ ಬಂದಿದೆ. ಮತ್ತೇ ಈ ಪ್ರಯತ್ನವನ್ನು ಮತ್ತು ಕೇಂದ್ರ ಸಚಿವರ ಸಲಹೆಯನ್ನು ಧಿಕ್ಕರಿಸಿ ನಾವು ನ್ಯಾಯಾಲಯದ ಮೂಲಕವೇ ಸಮಸ್ಯೆ ಇತ್ಯರ್ಥಮಾಡಿಕೊಳ್ಳುತ್ತೇವೆಂದು ಕಡಾಖಂಡಿತವಾಗಿ ಗೋವಾ ಮುಖ್ಯಮಂತ್ರಿಗಳು ಹೇಳಿದ್ದಾರೆ. ಈ ಹಿಂದೆ ಸಂಬಂದಿಸಿದ ರಾಜ್ಯಗಳಲ್ಲಿ ಬೇರೆ ಬೇರೆ ಪಕ್ಷಗಳ ಅಧಿಕಾರವಿತ್ತು, ಆದರೇ ಈಗ ಕೇಂದ್ರದಲ್ಲಿ ಮತ್ತು ಗೋವಾ, ಮಹಾರಾಷ್ಟ್ರ, ಕರ್ನಾಟಕದಲ್ಲಿ ಒಂದೇ ಬಿಜೆಪಿ ಪಕ್ಷದ ಸರಕಾರವಿದ್ದಾಗ್ಯೂ ಸಮಸ್ಯೆ ಪರಿಹಾರಕ್ಕೆ ಒಮ್ಮತ ಮೂಡುತ್ತಿಲ್ಲ. ಈ ಹಿನ್ನಲೆಯಲ್ಲಿ ರಾಜ್ಯ ಸರಕಾರ ತಮ್ಮದೇ ಪಕ್ಷದ ಪ್ರಧಾನಮಂತ್ರಿಗಳಿಗೆ ಒಕ್ಕೂಟ ವ್ಯವಸ್ಥೆಯಲ್ಲಿ ಅಂತರರಾಜ್ಯ ವ್ಯಾಜ್ಯಗಳಿಗೆ ಪರಿಹಾರ ಕಂಡುಕೊಳ್ಳಲು ತಮ್ಮ ಸಾಂವಿಧಾನಿಕ ಅಧಿಕಾರವನ್ನು ಬಳಸಿಕೊಂಡು ಕೂಡಲೇ ಮಧ್ಯಸ್ಥಿಕೆ ವಹಿಸುವಂತೆ ಒತ್ತಾಯಿಸಬೇಕು ಇದೇ ಈ ಸಮಸ್ಯೆಗೆ ಪರಿಹಾರವಾಗಿದ್ದು ಆ ನಿಟ್ಟಿನಲ್ಲಿ ರಾಜ್ಯದ ಮುಖ್ಯಮಂತ್ರಿಗಳು ಗಂಭೀರ ಪ್ರಯತ್ನಗಳನ್ನು ಮಾಡಿ ತಾವು ಈ ಹಿಂದೆ 15 ದಿನಗಳಲ್ಲಿ ನೀರು ಹರಿಸುವೆ ಎಂದು ಹೇಳಿದ ಮಾತನ್ನು ಈಗಲಾದರೂ ಉಳಿಸಿಕೊಳ್ಳಬೇಕೆಂದು ಆಗ್ರಹಿಸುತ್ತದೆ.

ಮಹಾನಗರವನ್ನು ಧೂಳುಮುಕ್ತಗೊಳಿಸಿ ಜನರ ಆರೋಗ್ಯ ಕಾಪಾಡಲು ಒತ್ತಾಯ

ಹುಬ್ಬಳ್ಳಿ ಧಾರವಾಡ ಮಹಾನಗರ ಅಕ್ಷರಶಃ ಧೂಳಿನಿಂದ ಕೂಡಿದೆ. ಪಾದಚಾರಿಗಳು ವಾಹನ ಸವಾರರು ಮಹಾನಗರದಲ್ಲಿ ಸಂಚರಿಸಲು ಸಾಧ್ಯವಾಗದಷ್ಟು ದೂಳು ಆವರಿಸಿದೆ. ರಸ್ತೆಗಳು ಹದಗೆಟ್ಟು ಹೋಗಿವೆ. ರಸ್ತೆಯಲ್ಲಿ ಗುಂಡಿಗಳನ್ನು ಹುಡುಕುವ ಬದಲು ಗುಂಡಿಗಳಲ್ಲೆ ರಸ್ತೆ ಹುಡುಕುವ ಪರಿಸ್ಥಿತಿ ನಿರ್ಮಾಣವಾಗಿದೆ. ಕಳೆದ ಕೆಲ ತಿಂಗಳಿಂದ ಮಹಾನಗರ ಪಾಲಿಕೆ ಸರಬುರಾಜು ಮಾಡುವ ಕುಡಿಯುವ ನೀರು ಹಲವು ಕಡೆ ಕುಡಿಯಲು ಯೋಗ್ಯವಲ್ಲದ ಕಲುಷಿತ ನೀರು. ಮೊದಲೇ ಕಳೆದ ಮೂರುನಾಲ್ಕು ತಿಂಗಳಿಂದ ನಿರಂತರ ಮಳೆಯಿಂದ ಬದಲಾದ ವಾತಾವರಣದಿಂದ ಮಹಾನಗರದ ಜನತೆ ಜ್ವರ, ಕೆಮ್ಮು ಮುಂತಾದ ಕಾಯಲೆಗೆ ಒಳಗಾಗುತ್ತಿದ್ದಾರೆ. ಈ ಧೂಳದಿಂದಾಗಿ ಶ್ವಾಸಕೋಶ, ಅಲರ್ಜಿ ಮುಂತಾದ ಕಾಯಲೆಗಳಿಗೆ ತುತ್ತಾಗುತ್ತಿದ್ದಾರೆ. ಅವೈಜ್ಞಾನಿಕ ಜನಸ್ನೇಹಿ ಅಲ್ಲದ ಬಿಆರ್‌ಟಿಎಸ್ ಸಾರಿಗೆ ವ್ಯವಸ್ಥೆಯಿಂದಾಗಿ ಟ್ರಾಫಿಕ್ ಅಸ್ತವೆಸ್ತಗೊಂಡಿದೆ. ಪಾದಚಾರಿಗಳಂತು ಜೀವವನ್ನು ಕೈಯಲ್ಲಿದ್ದು ರಸ್ತೆಗಳನ್ನು ದಾಟಬೇಕಾಗಿದೆ. ದಿನಾಲು ಲಕ್ಷಾಂತರ ಜನ ಸಂಚರಿಸುವ ಹುಬ್ಬಳ್ಳಿಯ ಕೇಂದ್ರ ಚನ್ನಮ್ಮ ವೃತ್ತದಲ್ಲಿಯೇ ಈ ಎಲ್ಲಾ ಪರಸ್ಥಿತಿ ಇದೆ. ಈ ಹಿನ್ನಲೆಯಲ್ಲಿ ಮಹಾನಗರ ಪಾಲಿಕೆ, ಸರಕಾರ ಕೂಡಲೇ ಮಹಾನಗರವನ್ನು ಧೂಳ ಮುಕ್ತ ಮತ್ತು ಸಂಚಾರಯೋಗ್ಯ ರಸ್ತೆಗಳನ್ನು ನಿರ್ಮಿಸಲು ಮುಂದಾಗಬೇಕು ಆ ಮುಖಾಂತರ ಜನರ ಆರೋಗ್ಯವನ್ನು ಕಾಪಾಡಬೇಕೆಂದು ಆಗ್ರಹಿಸುತ್ತದೆ.



ಅಪರಾಧ ಅಂಕಿ–ಅಂಶಗಳ ಬಿಡುಗಡೆ – ಒಂದೂವರೆ ವರ್ಷದ ನಂತರ, ಅದೂ ಪೂರ್ಣವಲ್ಲ!

ಕೊನೆಗೂ 2017ರ ಅಪರಾಧಗಳ ಅಂಕಿ–ಅಂಶಗಳನ್ನು ರಾಷ್ಟ್ರೀಯ ಅಪರಾಧಗಳ ದಾಖಲೆ ಕಚೇರಿ (ಎನ್‌ಸಿ ಆರ್‌ಬಿ) ಅಕ್ಟೋಬರ್ 21ರಂದು ಬಿಡುಗಡೆ ಮಾಡಿದೆ. ಇದು ಕಳೆದ ವರ್ಷವೇ ಪ್ರಕಟವಾಗಬೇಕಿತ್ತು. ಆದರೆ ನಿರುದ್ಯೋಗದ ಅಂಕಿ–ಅಂಶಗಳಂತೆ ಈ ಅಂಕಿ–ಅಂಶಗಳೂ ಅಚ್ಛೇ ದಿನ್‌ವಾಲಾಗಳಿಗೆ ಮುಜುಗರ ಉಂಟು ಮಾಡುತ್ತದೆಯೆಂಬ ಭಯದಿಂದ ಅದನ್ನು ಬಿಡುಗಡೆ ಮಾಡಿರಲಿಲ್ಲ ಎನ್ನಲಾಗಿದೆ. ಈಗ ಪ್ರಕಟವಾಗಿರುವ ಅಂಕಿ–ಅಂಶಗಳೂ ಒಂದೆಡೆಯಲ್ಲಿ 'ಅಚ್ಛೇ ದಿನ್'ಗಳ ಮೇಲೆ ಬೆಳಕು ಬೀರಿದರೆ, ಮತ್ತಷ್ಟು ಕರಾಳ ಅಂಶಗಳನ್ನು ಈಗಲೂ ಮುಚ್ಚಿಡಲಾಗಿದೆ ಎಂದು ವಿಶ್ಲೇಷಕರು ಹೇಳುತ್ತಿದ್ದಾರೆ.

ಮಹಿಳೆಯರು, ದಲಿತರು, ಆದಿವಾಸಿಗಳ ಮೇಲಿನ ಅತ್ಯಾಚಾರಗಳು ಹೆಚ್ಚಿವೆ:

ಮಹಿಳೆಯರ ವಿರುದ್ಧ ಅಪರಾಧಗಳ ಸಂಖ್ಯೆ 2017ರಲ್ಲಿ ಮತ್ತಷ್ಟು ಏರಿದೆ. 2013ರಲ್ಲಿ, ಅಂದರೆ ಅಚ್ಛೇ ದಿನ್ ಆರಂಭವಾಗುವ ಮೊದಲು 3.09 ಲಕ್ಷ ಇದ್ದದ್ದು 2017ರಲ್ಲಿ 3.6 ಲಕ್ಷಕ್ಕೆ ಏರಿದೆ. ಅಂದರೆ 16%ದಷ್ಟು.

ಇದರಲ್ಲಿ 'ರಾಮರಾಜ್ಯ' ತರಬೇಕೆಂದಿರುವವರ ಆಳ್ವಿಕೆಯಲ್ಲಿರುವ ಉತ್ತರಪ್ರದೇಶ ಮೊದಲ ಸ್ಥಾನದಲ್ಲಿದೆ. 15.6% ದಷ್ಟು ಅಪರಾಧಗಳು ಅಲ್ಲಿ ನಡೆದಿವೆ. ನಂತರದ ಸ್ಥಾನಗಳು ಅನುಕ್ರಮವಾಗಿ ಮಹಾರಾಷ್ಟ್ರ(8.9%) , ಮಧ್ಯಪ್ರದೇಶ(8.$ ಮತ್ತು ರಾಜಸ್ಥಾನ(7.2%) .ಇವೂ ಆಗ 'ಅಚ್ಛೇ ದಿನ್'ವಾಲಾಗಳ ಆಡಳಿತದಲ್ಲಿ ಇದ್ದುದು ಕೇವಲ ಆಕಸ್ಮಿಕವಾಗಿರಬಹುದು.

2013ಲ್ಲಿ ಪ್ರತಿ ಒಂದು ಲಕ್ಷ ಮಹಿಳೆಯರಲ್ಲಿ 52 ಮಹಿಳೆಯರ ಮೇಲೆ ಅಪರಾಧಗಳು ನಡೆದಿದ್ದರೆ, 2017ರಲ್ಲಿ ಇದು 58ಕ್ಕೆ ಏರಿದೆ. ಇದರಲ್ಲಿ ಮಾತ್ರ ಮೊದಲ ಸ್ಥಾನದಲ್ಲಿರುವುದು ಅಸ್ಸಾಂ, ನಂತರ ದಿಲ್ಲಿ.

ದಲಿತರ ಮೇಲಿನ ಅತ್ಯಾಚಾರಗಳ ಸಂಖ್ಯೆಯಲ್ಲಿಯೂ 2013ಕ್ಕೆ ಹೋಲಿಸಿದರೆ 10% ಹೆಚ್ಚಳವಾಗಿದೆ, 2017ರಲ್ಲಿ 43203 ಕೇಸುಗಳು ದಾಖಲಾಗಿವೆ. ನಿಜ 2014ಕ್ಕೆ ಹೋಲಿಸಿದರೆ ಇಳಿ ಮುಖಗೊಂಡಿದೆ. 2014ರ ಲೋಕಸಭಾ ಚಉನಾವಣೆಗಳ ಹಿನ್ನೆಲೆಯಲ್ಲಿ ಮತ್ತು ನಂತರ ದಲಿತರ ಮೇಲಿನ ಅತ್ಯಾಚಾರಗಳಲ್ಲಿ ತೀವ್ರ ಏರಿಕೆಯಾಗಿತ್ತು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. 2015ರಿಂದ ಮತ್ತೆ ನಿರಂತರ ಏರಿಕೆ ಆಗಿದೆ.

ಪರಿಶಿಷ್ಟ ಬುಡಕಟ್ಟುಗಳ ಮೇಲಿನ ಅತ್ಯಾಚಾರಗಳದ್ದೂ ಇದೇ ಕತೆ. 2013 ಮತ್ತು 2014ರ ನಡುವೆ ತೀವ್ರ ಏರಿಕೆಯಾಗಿತ್ತು. 2015ರಲ್ಲಿ ಗಮನಾರ್ಹವಗಿ ಇಳಿಯಿತು. ಆದರೆ ನಂತರ ಸತತವಾಗಿ ಏರುತ್ತಿದ್ದು, ಈಗ 2013 ರ ಮಟ್ಟವನ್ನು ದಾಟಿದೆ. 2013ರಲ್ಲಿ 6793 ಕೇಸುಗಳು ದಾಖಲಾಗಿದ್ದರೆ, 2017ರಲ್ಲಿ ಇದು 7125ಕ್ಕೆ ಏರಿದೆ.

ಇವೆಲ್ಲವೂ ಕೇವಲ ದಾಖಲಾದ ಅತ್ಯಾಚಾರಗಳ ಕೇಸುಗಳ ಸಂಖ್ಯೆಯಷ್ಟೇ, ಬಹಳಷ್ಟು ಕೇಸುಗಳು ದಾಖಲಾಗುವದಿಲ್ಲ, ಅಥವ ದಾಖಲು ಮಾಡಿಕೊಳ್ಳುವುದಿಲ್ಲ ಎಂಬುದು ಯಾರಿಗೂ ತಿಳಿಯದ ಸಂಗತಿಯೇನಲ್ಲ.


ಲಿಂಚಿಂಗ್, ರೈತರ ಆತ್ಮಹತ್ಯೆಗಳ ಅಂಕಿ–ಅಂಶಗಳಿಲ್ಲ!:

ಅಚ್ಛೇ ದಿನ್‌ಗಳಲ್ಲಿ ವ್ಯಾಪಕಗೊಂಡ ಲಿಂಚಿಂಗ್ ಅಂದರೆ ಜನಜಂಗುಳಿ ಮನಬಂದಂತೆ ಬಡಿಯುವ, ಸಾಯಿಸುವ ಘಟನೆಗಳು, ಧಾರ್ಮಿಕ ಕಾರಣಗಳಿಗಾಗಿ ಹತ್ಯೆಗಳು, ಖಾಪ್ ಪಂಚಾಯತುಗಳಿಂದಾಗಿ ನಡೆಯುವ ಹತ್ಯೆಗಳು ಇವೆಲ್ಲದರ ಅಂಕಿ–ಅಂಶಗಳನ್ನು ಸಂಗ್ರಹಿಸಲಾಗಿದೆ, ಮತ್ತು ಸಂಪೂರ್ಣವಾಗಿ ವಿಶ್ಲೇಷಿಸಲಾಗಿದೆ, ಆದರೆ ಏಕೆ ಪ್ರಕಟಿಸಿಲ್ಲ ಎಂಬುದು ಉನ್ನತ ಅಧಿಕಾರಿಗಳಿಗಷ್ಟೇ ಗೊತ್ತು ಎಂದು ಎನ್‌ಸಿಆರ್‌ಬಿಯ ಒಬ್ಬ ಅಧಿಕಾರಿ ಹೇಳಿರುವುದಾಗಿ ವರದಿಯಾಗಿದೆ.

ಆದರೆ ಇನ್ನೊಂದೆಡೆಯಲ್ಲಿ ಈ ಬಾರಿ ಹೊಸದಾಗಿ 'ಜಿಹಾದಿ ಭಯೋತ್ಪಾದನೆ' ಎಂಬ ವಿಧವನ್ನು ಸೇರಿಸಲಾಗಿದೆ. ಭಯೋತ್ಪಾದನೆಗೆ ಧರ್ಮವಿಲ್ಲ ಎಂದು ಆಳುವ ಪಕ್ಷದ ಮುಖಂಡರೂ ಆಗಾಗ ಹೇಳುತ್ತಿದ್ದರೂ ಹಿಂದುತ್ವ ಪಡೆಗಳ ಪದಕೋಶದಲ್ಲಿ ಮಾತ್ರ ಇರುವ ಈ ಪದ ಸರಕಾರದ ಅಧಿಕೃತ ದಾಖಲೆಗಳಲ್ಲಿ ಹೇಗೆ ಬಂತು ಎಂದು ವಿಶೇಷಜ್ಞರು ಪ್ರಶ್ನಿಸಿದ್ದಾರೆ. ಇದು ಉತ್ತಮ ಆಡಳಿತಕ್ಕೆ ಬೇಕಾಗಿರುವ ಪ್ರಮಾಣಿತ ಅಂಕಿ–ಅಂಶಗಳ ಸಂಗ್ರಹವೂ ರಾಜಕೀಯಕರಣಗೊಂಡಿರುವುದರ, ಮತ್ತು ಈ ಸಂಸ್ಥೆಯೂ ಪಂಜರದ ಪಕ್ಷಿಯಾಗುತ್ತಿರುವುದರ ಲಕ್ಷಣ ಎಂದು ಅವರು ಆತಂಕ ವ್ಯಕ್ತಪಡಿಸುತ್ತಿದ್ದಾರೆ.

ಖೋಟಾ ನೋಟುಗಳ ಪ್ರಮಾಣ ಇಳಿದಿಲ್ಲ, ದುಪ್ಪಟ್ಟಾಗಿದೆ!


ಇದು ಈ ಬಾರಿಯ ಅಪರಾಧಗಳ ಅಂಕಿ–ಅಂಶಗಳಲ್ಲಿ ವಿಶೇಷವಾಗಿ ಗಮನ ಸೆಳೆದಿರುವ ಸಂಗತಿ. ನೋಟುರದ್ದತಿಗೆ ದಿನಕ್ಕೊಂದು ಕಾರಣಗಳನ್ನು ಕೊಡಲಾಗುತ್ತಿತ್ತು. ಆದರೆ ಅದರಲ್ಲಿ ಒಂದು ಪ್ರಮುಖ ಮತ್ತು ಹಲವರಿಗೆ ನಂಬಲರ್ಹವೆನಿಸಿದ ಕಾರಣ– ಖೋಟಾ ನೋಟುಗಳ ಹಾವಳಿಯನ್ನು ಇದು ತಡೆಗಟ್ಟುತ್ತದೆ ಎಂಬುದು. ವಾಸ್ತವವಾಗಿ ಇದು ಒಂದೇ ಕಲ್ಲಿನಲ್ಲಿ ಎರಡು ಹಕ್ಕಿಗಳನ್ನು ಉರುಳಿಸುತ್ತದೆ ಎಂದು ಹೇಳಲಾಗಿತ್ತು. ಭಯೋತ್ಪಾದನಾ ಚಟುವಟಿಕೆಗಳಿಗೆ ಹಣ ಪೂರೈಕೆ ಖೋಟಾ ನೋಟುಗಳ ಮೂಲಕ ಆಗುತ್ತಿರುವುದರಿಂದ ನೋಟುರದ್ದತಿ ಒಂದೇ ಏಟಿಗೆ ಭಯೋತ್ಪಾದನೆಯ ಮತ್ತು ಖೋಟಾ ನೋಟಿನ ಗೋಣು ಮುರಿಯುತ್ತದೆ ಎನ್ನಲಾಗಿತ್ತು. ಭಯೋತ್ಪಾದನಾ ಪ್ರಕರಣಗಳ ಸಂಖ್ಯೆ ಇಳಿದಿಲ್ಲ ಎಂಬುದು ಈಗಾಗಲೇ ಬಹಿರಂಗವಾಗಿದೆ. ಎನ್‌ಸಿಆರ್‌ಬಿ ಅಂಕಿ–ಅಂಶಗಳ ಪ್ರಕಾರ ಖೋಟಾ ನೊಟಿನ ಹಾವಳಿಯೂ ನಿವಾರಣೆಯಾಗಿಲ್ಲ, ಬದಲಾಗಿ ಹೆಚ್ಚಿದೆ!



ವ್ಯಂಗ್ಯಚಿತ್ರ: ಕೀರ್ತಿಶ್, ಬಿಬಿಸಿಹಿಂದಿ ನ್ಯೂಸ್

2017ರಲ್ಲಿ ವಶಪಡಿಸಿಕೊಂಡ ಖೋಟಾ ನೋಟುಗಳ ಮೌಲ್ಯ ರೂ.28.1 ಕೋಟಿ. ನೋಟುರದ್ದತಿಯ ಮೊದಲು 2016ರಲ್ಲಿ ವಶಪಡಿಸಿಕೊಂಡ ಮೊತ್ತ ರೂ. 15.1 ಕೋಟಿ. ಅಂದರೆ ನೋಟುರದ್ದತಿಯ ನಂತರ ದುಪ್ಪಟ್ಟಾಗಿದೆ. ಹಳೆಯ 500 ಮತ್ತು 1000ರೂ. ನೊಟುಗಳನ್ನು ರದ್ದು ಮಾಡಿ ಹೊಸ ಹೆಚ್ಚು ಸುರಕ್ಷಿತವೆನ್ನಲಾದ 500, 2000 ನೋಟುಗಳನ್ನು ತಂದರೂ ಖೋಟಾ ನೋಟುಗಳ ಸಂಖ್ಯೆಯಾದರೂ ಇಳಿಯುವ ಬದಲು ಅದೂ 2.81ಲಕ್ಷದಿಂದ ನೋಟುರದ್ದತಿಯ ನಂತರ 3.55ಲಕ್ಷಕ್ಕೆ ಏರಿದೆ.

ಇನ್ನೂ ಕುತೂಹಲದ ಸಂಗತಿ ಎಂದರೆ **ಅತಿ ಹೆಚ್ಚು ಪ್ರಮಾಣದಲ್ಲಿ ಖೋಟಾ ನೋಟುಗಳನ್ನು ವಶಪಡಿಸಿಕೊಂಡಿರುವುದು ಅಚ್ಛೇ ದಿನ್‌ಗಳ ಮಾದರಿ ರಾಜ್ಯ ಗುಜರಾತದಲ್ಲಿ!** ಅಲ್ಲಿ ಕೋಟಿ ಮೌಲ್ಯದ ನೊಟುಗಳನ್ನು ವಶಪಡಿಸಿಕೊಳ್ಳಲಾಯಿತು, ನಂತರದ ಸ್ಥಾನ ದಿಲ್ಲಿಯದ್ದು, 6.7ಕೋಟಿ ರೂ. ಮೂರನೇ ಸ್ಥಾನದಲ್ಲಿ ಉತ್ತರಪ್ರದೇಶ(2.8 ಕೋಟಿ ರೂ.) ಇದೆ.



ವ್ಯಂಗ್ಯಚಿತ್ರ: ಇ.ಪಿ.ಉನ್ನಿ, ಇಂಡಿಯನ್ ಎಕ್ಸ್‌ಪ್ರೆಸ್

ಗ್ರಾಮೀಣ ಕುಟುಂಬಗಳ ಕೊಳ್ಳುವ ಶಕ್ತಿ ಕಳೆದ ಏಳುವರ್ಷಗಳಲ್ಲೇ ಅತಿ ಕಡಿಮೆ

ಸೆಪ್ಟಂಬರ್ ತ್ರೈಮಾಸಿಕದಲ್ಲಿ ಗ್ರಾಮೀಣ ಕುಟುಂಬಗಳ ಉಪಭೋಗದ ಪ್ರಮಾಣ ಕಳೆದ ಏಳುವರ್ಷಗಳಲ್ಲೇ ಅತ್ಯಂತ ಕೆಳಗಿನ ಮಟ್ಟವನ್ನು ಮುಟ್ಟಿದೆ ಎಂದು ಮಾರುಕಟ್ಟೆ ಸಂಶೋಧನಾ ಸಂಸ್ಥೆ ನೀಲ್ಸನ್ ಹೇಳಿದೆ. ದೀರ್ಘ ಕಾಲದಿಂದ ಬಾಧಿಸುತ್ತಿರುವ ಕೃಷಿ ಸಂಕಟ, ಮತ್ತು ಗ್ರಾಮೀಣ ಆದಾಯಗಳು ಸ್ಥಗಿತಗೊಂಡಿರುವುದರಿಂದಾಗಿ ಈ ಕುಟಂಬಗಳ ಕೊಳ್ಳುವ ಸಾಮರ್ಥ್ಯ ಬಹುವಾಗಿ ಕ್ಷಯಿಸಿ ಹೋಗಿರುವುದು ಇದಕ್ಕೆ ಕಾರಣ ಎಂದೂ ಅದು ಹೇಳಿದೆ.

ಬೆಳೆಗಳ ಬೆಲೆಗಳಲ್ಲಿ ಕುಸಿತ, ಇದರಿಂದಾಗಿ ಆದಾಯಗಳಲ್ಲೂ ಕುಸಿತ ರೈತರನ್ನು ಮಾತ್ರವಲ್ಲ, ಭೂಹೀನ ಕೂಲಿಕಾರರನ್ನೂ ತಟ್ಟಿದೆ. ಈ ಎರಡು ವಿಭಾಗಗಳು ಒಟ್ಟಾಗಿ ಗ್ರಾಮೀಣ ಜನಸಂಖ್ಯೆಯ ಮೂರನೇ ಎರಡರಷ್ಟಾಗುತ್ತದೆ. ಕಳೆದ ವರ್ಷ ಈ ಅವಧಿಯಲ್ಲಿ ಗ್ರಾಮೀಣ ಬಳಕೆಯ ಪ್ರಮಾಣ 13.9% ದಷ್ಟು ಏರಿದ್ದರೆ, ಈ ವರ್ಷ ಕೇವಲ 3.9% ದಷ್ಟು ಏರಿದೆ.

ಬೇಗನೇ ಖರ್ಚಾಗುವ ಬಳಕೆ ಸಾಮಗ್ರಿ (ಎಫ್‌ಎಂಸಿಜಿ)ಗಳ ಖರೀದಿಗೆ ಜನಗಳು ಖರ್ಚು ಮಾಡುವ ಮೊತ್ತದಲ್ಲಿ 36% ದಷ್ಟು ಗ್ರಾಮೀಣ ಪ್ರದೇಶಗಳಿಂದ ಬರುತ್ತಿತ್ತು, ಮತ್ತು ಅದು ನಗರ ಪ್ರದೇಶಗಳಿಗೆ ಹೋಲಿಸಿದರೆ 3ರಿಂದ 5ಶೇ. ಹೆಚ್ಚಿನ ವೇಗದಲ್ಲಿ ಬೆಳೆಯುತ್ತಿತ್ತು. ಆದರೆ ಮೊದಲ ಬಾರಿಗೆ ಈ ಪ್ರವೃತ್ತಿ ಬದಲಾಗಿದೆ ಎಂದು ಇಂತಹ ಬಳಕೆ ಸಾಮಗ್ರಿಗಳ ಬೇಡಿಕೆಯ ಪ್ರಮಾಣವನ್ನು ಗುರುತಿಸಿ ಸಾಮಗ್ರಿ ತಯಾರಿಕರಿಗೆ ಅಗತ್ಯ ಮಾಹಿತಿಗಳನ್ನು ಒದಗಿಸುವ ಈ ಸಂಸ್ಥೆ ಹೇಳಿದೆ.

ಅಕಾಲಿಕ ಮಳೆ, ಅದರಿಂದಾಗಿ 13 ರಾಜ್ಯಗಳಲ್ಲಿ ಪ್ರವಾಹದಿಂದಾಗಿ ರೈತರ, ಕೂಲಿಕಾರರ ಪರಿಸ್ಥಿತಿ ಇನ್ನಷ್ಟು ಹದಗೆಟ್ಟಿದೆ. ಇದು ಗ್ರಾಮೀಣ ಪ್ರದೇಶದ ಸಣ್ಣ ಪುಟ್ಟ ಕಿರಾಣಿ ಅಂಗಡಿಗಳನ್ನೂ ಬಹುವಾಗಿ ತಟ್ಟಿದೆ. ಕೊಳ್ಳುವವರಿಲ್ಲದೆ ಅವರ ಆದಾಯಗಳಲ್ಲೂ ಬಹಳಷ್ಟು ಕಡಿತವಾಗಿದೆ.

"ಮೋದಿ ಸರಕಾರದ ಧೋರಣೆಗಳು ಎಲ್ಲ ವಿಭಾಗಗಳನ್ನೂ ತಟ್ಟಿವೆ, ಅವರ ಶ್ರೀಮಂತ ಬಂಟರನ್ನು ಬಿಟ್ಟು" ಎಂದು ಈ ಬಗ್ಗೆ ಟಿಪ್ಪಣಿ ಮಾಡುತ್ತ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ಹೇಳಿದ್ದಾರೆ. ಆದರೆ ಈ ಸರಕಾರಕ್ಕೆ ಇದರ ಪರಿವೆಯೇ ಇಲ್ಲ, ಅದು ಜನಗಳನ್ನು ಒಡೆಯುವಲ್ಲಿ ಮತ್ತು ಧ್ರುವೀಕರಿಸುವಲ್ಲಿಯೇ ನಿರತವಾಗಿದೆ ಎಂದು ಅವರು ಖೇದ ವ್ಯಕ್ತ ಪಡಿಸಿದ್ದಾರೆ

ಎಕ್ಸಿಟ್ ಪೋಲಿಗರನ್ನು ನಗೆಪಾಟಲು ಮಾಡಿದ ಮತದಾರರು

ಮಹಾರಾಷ್ಟ್ರ ಮತ್ತು ಹರ್‍ಯಾಣ ವಿಧಾನಸಭಾ ಚುನಾವಣೆಗಳ ಫಲಿತಾಂಶಗಳು ಅತಿ ದೊಡ್ಡ ಆಘಾತ ಉಂಟು ಮಾಡಿರುವುದು ಸರಕಾರದ ಮಾಧ್ಯಮ ಬಂಟರಿಗೆ. ಈ ಬಗ್ಗೆ ಸಾಮಾಜಿಕ ಮಾಧ್ಯಮಗಳಲ್ಲಿ ಬಹಳಷ್ಟು ನಗೆ ಚಾಟಿಕೆಗಳು ಹರಿದಾಡುತ್ತಿವೆ. ಈ ಎರಡು ರಾಜ್ಯಗಳ ಸಾಮಾನ್ಯ ಮತದಾರರು ಅವರನ್ನು ಎಷ್ಟು ನಗೆಪಾಟಲು ಮಾಡಿದ್ದಾರೆ ನೋಡಿ:

ಮಹಾರಾಷ್ಟ್ರ

ಪಕ್ಷಗಳು	ಇಂಡಿಯಟುಡೆ	ನ್ಯೂಸ್18	ಎಬಿಪಿ	ರಿಪಬ್ಲಿಕ್	ಟೈಮ್ಸ್‌ನೌ	**ಸರಾಸರಿ**	**ಫಲಿತಾಂಶ**
ಬಿಜೆಪಿ+	180	243	204	222	230	**213**	**161**
ಕಾಂಗ್ರೆಸ್+	81	41	69	54	48	**61**	**98**
ಇತರರು	27	4	15	1	10	**14**	**29**

ಹರ್‍ಯಾಣ

ಪಕ್ಷಗಳು	ಟೈಮ್ಸ್‌ನೌ	ರಿಪಬ್ಲಿಕ್	ಇಂಡಿಯಾನ್ಯೂಸ್	ಟಿವಿ9	**ಸರಾಸರಿ**	**ಫಲಿತಾಂಶ**
ಬಿಜೆಪಿ	71	52–63	75–80	47	**66**	**40**
ಕಾಂಗ್ರೆಸ್	11	19–15	9–12	23	14	**31**
ಇತರರು	8	19–12	1–4	20	**10**	**19**



ವ್ಯಂಗ್ಯಚಿತ್ರ: ಪಿ.ಮಹಮ್ಮದ್

ಜನರಲ್ಲಿ ಗಾಬರಿ ಹುಟ್ಟಿಸಿದ ಬ್ಯಾಂಕುಗಳ ಕಾರ್ಯವೈಖರಿ



ಪಿಎಂಸಿ ಬ್ಯಾಂಕ್ ಪ್ರಕರಣದಿಂದಾಗಿ ಬ್ಯಾಂಕುಗಳ ಕಾರ್ಯವೈಖರಿಯ ಬಗ್ಗೆ ಎದ್ದಿರುವ ದಿಗಿಲನ್ನು ಸರ್ಕಾರವು ಸೂಕ್ತ ಕ್ರಮಗಳ ಮೂಲಕ ದೂರ ಮಾಡಬೇಕು. ಈ ಕೆಲಸವನ್ನು, ರಿಸರ್ವ್ ಬ್ಯಾಂಕ್ ಕೊಟ್ಟಿರುವ ತಪ್ಪು ಅರ್ಥ ಕೊಡುವ ಪದ ಬಳಕೆಯಿಂದ ಕೂಡಿದ ಸ್ಪಷ್ಟೀಕರಣವು ಸಾಧಿಸುತ್ತದೆಯೇ?

ಜನರ ಉಳಿತಾಯಗಳನ್ನು ಮತ್ತು ಠೇವಣಿದಾರರ ಹಿತವನ್ನು ಸದಾ ಕಾಲವೂ ಸರ್ಕಾರದ ವಿವಿಧ ಸಂಸ್ಥೆಗಳು ರಕ್ಷಿಸುತ್ತಿರಬೇಕು ಎನ್ನುವ ಗ್ರಹಿಕೆ ಮತ್ತು ನಿರೀಕ್ಷೆಗಳನ್ನು ಬದಲಾಯಿಸಬೇಕು ಎಂದು ಕೇಂದ್ರ ಸರ್ಕಾರ ಮತ್ತು ರಿಸರ್ವ್ ಬ್ಯಾಂಕ್ ನಂಬಿದಂತಿದೆ. 2017ರಲ್ಲಿ ಇಂತಹ ಚಿಂತನೆಗಳನ್ನು ಮೋದಿ ಸರ್ಕಾರವು ಕಾನೂನು ಬದ್ಧಗೊಳಿಸಲು ಹೊರಟಿತ್ತು. ತೀವ್ರ ವಿರೋಧದಿಂದಾಗಿ ಅದನ್ನು ಹಿಂಪಡೆಯಲಾಯಿತು. ಈಗ ಅದೇ ಮಸೂದೆಗೆ ತನಗಿರುವ ಒರಟು ಬಹುಮತವನ್ನು ಬಳಸಿಕೊಂಡರೆ ಆಶ್ಚರ್ಯವಿಲ್ಲ.

ಪ್ರೊ. ಸಿ.ಪಿ.ಚಂದ್ರಶೇಖರ್, ಕನ್ನಡಕ್ಕೆ: ಕೆ.ಎಂ.ನಾಗರಾಜ್

ಅಕ್ಟೋಬರ್ ಒಂದರಂದು ಭಾರತೀಯ ರಿಸರ್ವ್ ಬ್ಯಾಂಕ್ ಒಂದು ಅಸಾಧಾರಣ ಮತ್ತು ವಿವೇಚನೆಯಿಲ್ಲದ ಒಂದು ಚುಟುಕು ಹೇಳಿಕೆ ನೀಡಿದೆ: "ಸಹಕಾರಿ ಬ್ಯಾಂಕ್‌ಗಳೂ ಸೇರಿದಂತೆ ಕೆಲವು ನಿರ್ದಿಷ್ಟ ಬ್ಯಾಂಕ್‌ಗಳ ಠೇವಣಿದಾರರಲ್ಲಿ ಆತಂಕ ಹುಟ್ಟಿಸುವಂತಹ ವದಂತಿಗಳು ಅಲ್ಲಲ್ಲಿ ಹರಿದಾಡುತ್ತಿವೆ. ಭಾರತದ ಬ್ಯಾಂಕಿಂಗ್ ವ್ಯವಸ್ಥೆ ಸುರಕ್ಷಿತವಾಗಿದೆ ಮತ್ತು ಸುಭದ್ರವಾಗಿದೆ ಎಂದು ರಿಸರ್ವ್ ಬ್ಯಾಂಕ್ ಜನರಿಗೆ ಭರವಸೆ ಕೊಡುತ್ತದೆ. ಹಾಗಾಗಿ, ಇಂತಹ ವದಂತಿಗಳ ಆಧಾರದ ಮೇಲೆ ಜನರು ಗಾಬರಿಯಾಗುವ ಅಗತ್ಯವಿಲ್ಲ".

ರಿಸರ್ವ್ ಬ್ಯಾಂಕ್‌ನ ಈ ಹೇಳಿಕೆ ವಿವೇಚನೆಯಿಲ್ಲದ್ದು. ಏಕೆಂದರೆ, ಪಂಜಾಬ್ ಮತ್ತು ಮಹಾರಾಷ್ಟ್ರ ಸಹಕಾರಿ (ಪಿ.ಎಂ.ಸಿ.) ಬ್ಯಾಂಕ್‌ನ ಇತ್ತೀಚಿನ ವಿದ್ಯಮಾನಗಳು, ಅದರಲ್ಲೂ ಮುಖ್ಯವಾಗಿ ತಮ್ಮ ಖಾತೆಯಲ್ಲಿ ಎಷ್ಟೇ ಹಣವಿದ್ದರೂ ಸಹ ಠೇವಣಿದಾರರು ಇಂತಿಷ್ಟು ಮೊತ್ತಕ್ಕಿಂತ ಹೆಚ್ಚು ಹಣವನ್ನು ಆರು ತಿಂಗಳ ಅವಧಿಯಲ್ಲಿ ಬಿಡಿಸಿಕೊಳ್ಳುವಂತಿಲ್ಲ ಎನ್ನುವ ಪರಿಸ್ಥಿತಿಯಲ್ಲಿ, ಉಳಿದ ಇತರೆ ಬ್ಯಾಂಕ್‌ಗಳ ಠೇವಣಿದಾರರು ತಮಗೂ ಈ ಪರಿಸ್ಥಿತಿ ಬರಬಹುದೆಂಬ ಆತಂಕದಲ್ಲಿ ತಮ್ಮ ಠೇವಣಿ ಹಿಂಪಡೆಯಲು ಬ್ಯಾಂಕ್‌ಗಳ ಮೇಲೆ ಲಗ್ಗೆ ಹಾಕುವ ಸಾಧ್ಯತೆಯ ಬಗ್ಗೆ ಜನರ ಗಮನವನ್ನು ಅನವಶ್ಯಕವಾಗಿ ಸೆಳೆದಂತಾಗುತ್ತದೆ. ರಿಸರ್ವ್ ಬ್ಯಾಂಕ್‌ನ ಈ ಸಾರ್ವಜನಿಕ ಹೇಳಿಕೆಯು ತಪ್ಪು ಗ್ರಹಿಕೆಯಿಂದ ಕೂಡಿದೆ. ಏಕೆಂದರೆ, ಆತಂಕಗೊಂಡ ಬ್ಯಾಂಕ್ ಠೇವಣಿದಾರರು ತಮಗೆ ತೋಚಿದ್ದನ್ನು ಮಾಡದಂತೆ ಮನವೊಲಿಸುವಷ್ಟು ವಿಶ್ವಾಸಾರ್ಹತೆಯನ್ನು ರಿಸರ್ವ್ ಬ್ಯಾಂಕ್ ಉಳಿಸಿಕೊಂಡಿದೆ ಎನ್ನುವ ದಾಷ್ಟ್ಯತೆಯನ್ನು ಇದು ತೋರಿಸಿದೆ.

ರಿಸರ್ವ್ ಬ್ಯಾಂಕ್ ನಿಗದಿಪಡಿಸಿದ ಎಲ್ಲ ನೀತಿ ನಿಯಮಾವಳಿಗಳನ್ನು ಪಂಜಾಬ್ ಮತ್ತು ಮಹಾರಾಷ್ಟ್ರ ಸಹಕಾರಿ ಬ್ಯಾಂಕ್ ಉಲ್ಲಂಘಿಸಿ ಠೇವಣಿದಾರರಿಗೆ ಅಷ್ಟೊಂದು ಅಗಾಧ ಪ್ರಮಾಣದ ವಂಚನೆ ಎಸಗಿದ ಕೃತ್ಯವು ರಿಸರ್ವ್ ಬ್ಯಾಂಕ್ ನ ಮೂಗಿನಡಿಯಲ್ಲೇ ನಡೆದಿತ್ತು. ಠೇವಣಿದಾರರ ಹಿತರಕ್ಷಣೆ ಮಾಡುವ ಉದ್ದೇಶದಿಂದ ಬ್ಯಾಂಕ್ ನಿಯಮಾವಳಿಗಳನ್ನು ರೂಪಿಸಿ ಅವುಗಳ ಪಾಲನೆಯನ್ನು ತನಿಖೆಯ ಮೂಲಕ ಖಚಿತಪಡಿಸಿಕೊಳ್ಳುವ ಜವಾಬ್ದಾರಿ ಹೊತ್ತಿರುವ ರಿಸರ್ವ್ ಬ್ಯಾಂಕ್, ಠೇವಣಿದಾರರಿಗೆ ವಂಚನೆಯಾಗದಂತೆ ಕಣ್ಗಾವಲಿಡುವ ಮಾತು ಒತ್ತಟ್ಟಿಗಿರಲಿ, ಒಂದು ಬ್ಯಾಂಕಿನಲ್ಲಿ ಇಂತಹ ಒಂದು ಬೃಹದಾಕಾರದ ಮೋಸ ನಡೆದಾಗ, ಠೇವಣಿದಾರರಿಗೆ ಶೀಘ್ರವಾಗಿ ಪರಿಹಾರ ಒದಗಿಸುವಲ್ಲಿ ಅಸಮರ್ಥವಾಗಿದೆ. ಪಿಎಂಸಿ ಬ್ಯಾಂಕ್‌ನ ವಂಚನೆಯ ಪ್ರಕರಣ ಬಯಲಿಗೆ ಬಂದ ಆರಂಭದಲ್ಲಿ ಠೇವಣಿದಾರರು ತಮ್ಮ ಖಾತೆಯಲ್ಲಿರುವ ಹಣದಲ್ಲಿ, ಆರು ತಿಂಗಳ ಅವಧಿಯಲ್ಲಿ ಬಿಡಿಸಿಕೊಳ್ಳಬಹುದಾದ ಹಣದ ಮೊತ್ತವನ್ನು ಕೇವಲ ಒಂದು ಸಾವಿರ ರೂಗಳೆಂದು ಆರಂಭದಲ್ಲಿ ನಿಗದಿಪಡಿಸಿತ್ತು.

ತಮ್ಮದೇ ಹಣವನ್ನು ಬಿಡಿಸಿಕೊಳ್ಳಲು ಠೇವಣಿದಾರರ ಮೇಲೆ ಆರು ತಿಂಗಳ ಕಾಲದ ನಿರ್ಬಂಧ ಹೇರಿದ ಕ್ರಮವನ್ನು ರಿಸರ್ವ್ ಬ್ಯಾಂಕ್ ಹೇಗೆ ಸಮರ್ಥಿಸಿಕೊಳ್ಳುತ್ತದೆ ಎಂದರೆ, ಶಾಶ್ವತವಾಗಿ ಒಂದು ಬ್ಯಾಂಕ್ ಮುಚ್ಚಿದರೆ, ಒಬ್ಬ ಠೇವಣಿದಾರನು ಲಕ್ಷಗಟ್ಟಲೆ ಅಥವಾ ಕೋಟಿಗಟ್ಟಲೆ ಠೇವಣಿ ಇಟ್ಟಿದ್ದರೂ ಸಹ, ಅವನಿಗೆ ಠೇವಣಿ ವಿಮೆಯ ಮೂಲಕ ಸಿಗುವ ಗರಿಷ್ಠ ಪರಿಹಾರವು ಕೇವಲ ಒಂದು ಲಕ್ಷ ರೂಗಳು ಮಾತ್ರ ಎಂಬ ಕಾರಣವನ್ನು ಒಡ್ಡುತ್ತದೆ. ಈ ಸಂಬಂಧವಾಗಿ ಒಂದು ಮುಖ್ಯವಾದ ಅಂಶವನ್ನು ಗಮನಿಸಬೇಕಿದೆ. ಅದೇನೆಂದರೆ, 1969ರ ಬ್ಯಾಂಕ್ ರಾಷ್ಟ್ರೀಕರಣದ ಹಿಂದಿನ ಅವಧಿಯಲ್ಲಿ ಅನೇಕ ಖಾಸಗಿ ಬ್ಯಾಂಕುಗಳು ಮುಳುಗಿದವು. ಸಹಸ್ರಾರು ಠೇವಣಿದಾರರು ಹಣ ಕಳೆದುಕೊಂಡರು. ಅವರಿಗೆ ಪರಿಹಾರ ಒದಗಿಸುವ ಉದ್ದೇಶದಿಂದ ರಿಸರ್ವ್ ಬ್ಯಾಂಕ್ ಡಿಐಸಿಜಿಸಿ ಎನ್ನುವ ಉಪ ಸಂಸ್ಥೆಯನ್ನು 1968ರಲ್ಲಿ ಸ್ಥಾಪಿಸಿತು. ಆರಂಭದಲ್ಲಿ ಈ ಸಂಸ್ಥೆಯು ಒಬ್ಬ ಠೇವಣಿದಾರನಿಗೆ ಬ್ಯಾಂಕ್ ಮುಳುಗಿದ ಸಂದರ್ಭದಲ್ಲಿ ಐದು ಸಾವಿರ ರೂಗಳ ಠೇವಣಿ ವಿಮಾ ಪರಿಹಾರ ಒದಗಿಸುತ್ತಿತ್ತು. ಈ ಪರಿಹಾರದ ಮೊತ್ತವನ್ನು ಕಾಲ ಕ್ರಮದಲ್ಲಿ ಏರಿಸಲಾಗಿದೆ. ಈಗ ಸಿಗುತ್ತಿರುವ ಒಂದು ಲಕ್ಷ ರೂಗಳ ಗರಿಷ್ಠ ಪರಿಹಾರದ ಮಿತಿಯನ್ನು ಇಪ್ಪತ್ತಾರು ವರ್ಷಗಳ ಹಿಂದೆ (1993ರಲ್ಲಿ) ಪರಿಷ್ಕರಿಸಲಾಗಿತ್ತು. ಈ ಮೊತ್ತವನ್ನು ಕನಿಷ್ಠ ಐದು ಪಟ್ಟಾದರೂ ಹೆಚ್ಚಿಸಬೇಕೆಂದು ದಾಮೋದರನ್ ಸಮಿತಿ 2011ರಲ್ಲಿ ಶಿಫಾರಸು ಮಾಡಿತ್ತು. ಆದರೆ, ಈ ಬಗ್ಗೆ ರಿಸರ್ವ್ ಬ್ಯಾಂಕ್ ಮೌನವಾಗಿದೆ. ಠೇವಣಿದಾರರ ಹಿತರಕ್ಷಣೆ ಮಾಡುವಲ್ಲಿ ರಿಸರ್ವ್ ಬ್ಯಾಂಕ್ ಸೋತಿದೆ ಎಂಬುದನ್ನು ಈ ಒಂದು ಅಂಶವೇ ಸಾರುತ್ತದೆ.

ಠೇವಣಿ ವಿಮೆಯ ಗರಿಷ್ಠ ಮೊತ್ತವು ಈಗಿರುವ ದರಿದ್ರ ಮಟ್ಟದಲ್ಲೇ ಉಳಿದಿರಲು ಕಾರಣವೇನು? ಪಿಎಂಸಿ ಬ್ಯಾಂಕ್ ರೀತಿಯಲ್ಲಿ ಬ್ಯಾಂಕುಗಳು ಮುಳುಗಿ ಠೇವಣಿದಾರರ ಹಣವನ್ನು ಹಿಂತಿರುಗಿಸುವ ಪ್ರಸಂಗ ಉದ್ಭವವಾಗಬಹುದು ಎಂದು ಕೇಂದ್ರ ಸರ್ಕಾರ ಮತ್ತು ಭಾರತೀಯ ರಿಸರ್ವ್ ಬ್ಯಾಂಕ್ ಎಣಿಸದಿರಲು ಎರಡು ಕಾರಣಗಳಿವೆ. ಮೊದಲನೆಯದು, ಯಾವುದೇ ಒಂದು ಬ್ಯಾಂಕ್ ಮುಳುಗುವ ಸಂದರ್ಭ ಎದುರಾದಾಗ ಅದನ್ನು ಮುಳುಗಲು ಬಿಟ್ಟರೆ, ಅದರಿಂದ ಠೇವಣಿದಾರರಿಗೆ ಉಂಟಾಗುವ ಆಕ್ರೋಶವು ರಾಜಕೀಯವಾಗಿ ಅಪಾಯಕಾರಿಯಾಗುತ್ತದೆ. ಆದ್ದರಿಂದ, ಅಂತಹ ಆಪತ್ಕಾಲೀನ ಪರಿಸ್ಥಿತಿಯಲ್ಲಿ ಮುಳುಗಲಿರುವ ಬ್ಯಾಂಕನ್ನು ಇನ್ನೊಂದು ಯಶಸ್ವಿ ಬ್ಯಾಂಕಿನೊಂದಿಗೆ ಬಲವಂತವಾಗಿ ಗಂಟು ಹಾಕುವ ಅಂದಾಜು ಕೇಂದ್ರ ಸರ್ಕಾರಕ್ಕೆ ಮತ್ತು ಭಾರತೀಯ ರಿಸರ್ವ್ ಬ್ಯಾಂಕ್‌ಗೆ ಇತ್ತು. ಆದರೆ, ಬ್ಯಾಂಕ್ ಪ್ರವರ್ತಕರ ಪ್ರತಿರೋಧದಿಂದಾಗಿ ಇಂತಹ ಏರ್ಪಾಟನ್ನು ಕಾರ್ಯ ರೂಪಕ್ಕೆ ತರುವುದು ನಂತರ ಸಾಧ್ಯವಾಗಲಿಲ್ಲ..

ಆದರೆ, ಬ್ಯಾಂಕ್ ರಾಷ್ಟ್ರೀಕರಣದ ನಂತರ ಮುಳುಗುವ ಅಂಚಿನಲ್ಲಿದ್ದ ಒಂದು ಬ್ಯಾಂಕನ್ನು ಇನ್ನೊಂದು ಯಶಸ್ವಿ ಸಾರ್ವಜನಿಕ ಬ್ಯಾಂಕಿನೊಂದಿಗೆ ಗಂಟು ಹಾಕುವ ಕಾರ್ಯವು ಸಾಧ್ಯವಾಗಿತ್ತು. ಉದಾರೀಕರಣೋತ್ತರ ಕಾಲದ ಬ್ಯಾಂಕಿಂಗ್‌ನ ಒಂದು ಮಾದರಿ ಎನಿಸಿದ್ದ ಖಾಸಗಿ ವಲಯದ ಗ್ಲೋಬಲ್ ಟ್ರಸ್ಟ್ ಬ್ಯಾಂಕ್ ಮುಳುಗುವ ಪರಿಸ್ಥಿತಿಯಲ್ಲಿದ್ದಾಗ ಅದನ್ನು ಸಾರ್ವಜನಿಕ ವಲಯದ ಓರಿಯಂಟಲ್ ಬ್ಯಾಂಕ್ ಆಫ್ ಕಾಮರ್ಸ್‌ನೊಂದಿಗೆ ವಿಲೀನಗೊಳಿಸಲಾಯಿತು. ಇಂತಹ ಒಂದು ನಿವಾರಣೋಪಾಯವನ್ನು ತನ್ನ ಕೈಯಲ್ಲಿ ಹೊಂದಿದ್ದ ರಿಸರ್ವ್ ಬ್ಯಾಂಕ್, ಯಾವುದೇ ಒಂದು ರೋಗಗ್ರಸ್ತವಾದ ಬ್ಯಾಂಕನ್ನು ಸುಸ್ಥಿತಿಗೆ ತರಲು ಪ್ರಯತ್ನಿಸುತ್ತಿತ್ತು ಮತ್ತು ಅಂತಹ ಪ್ರಯತ್ನಗಳು ವಿಫಲವಾದಾಗ, ರೋಗಗ್ರಸ್ತವಾದ ಯಾವುದೇ ಬ್ಯಾಂಕನ್ನು ಒಂದು ಸಾರ್ವಜನಿಕ ವಲಯದ ಬ್ಯಾಂಕಿನೊಂದಿಗೆ ವಿಲೀನಗೊಳಿಸುವ ವಿಶ್ವಾಸವನ್ನೂ ಹೊಂದಿತ್ತು.



ರಿಸರ್ವ್ ಬ್ಯಾಂಕ್ ಕೈಗೊಳ್ಳುತ್ತಿದ್ದ ಅಂತಹ ಕ್ಷಿಪ್ರ ಕ್ರಮಗಳು ಪ್ರಸಕ್ತ ಸನ್ನಿವೇಶದಲ್ಲಿ ಮಾಯವಾಗಿವೆ, ಏಕೆಂದರೆ, ನೀತಿಗಳು, ಸ್ಥಿತಿಗತಿಗಳು ಸಾಕಷ್ಟು ಬದಲಾಗಿವೆ. 2000ದ ಇಸವಿಯ ನಂತರ, ಸಾಲಗಳ ಮೂಲಕ ಉಂಟಾದ ಆರ್ಥಿಕ ಉಬ್ಬರದ ಸಾಧನಗಳಾಗಿದ್ದ ಸಾರ್ವಜನಿಕ ವಲಯದ ಬ್ಯಾಂಕ್‌ಗಳು ಕೊಟ್ಟ ಸಾಲವನ್ನು ವಸೂಲಿ ಮಾಡಲಾಗದ ಕಾರಣದಿಂದಾಗಿ ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ಹೆಣಗಾಡುತ್ತಿರುವ ಇಂದಿನ ಪರಿಸ್ಥಿತಿಯಲ್ಲಿ ಅವು ಮುಳುಗುತ್ತಿರುವ ಇನ್ನೊಂದು ಬ್ಯಾಂಕನ್ನು ವಹಿಸಿಕೊಳ್ಳಲಾಗುತ್ತಿಲ್ಲ. ಸಧ್ಯದ ಪರಿಸ್ಥಿತಿಯಲ್ಲಿ, ಕೆಲವು ಅಶಕ್ತ ಬ್ಯಾಂಕುಗಳು ಮುಳುಗುವುದನ್ನು ತಪ್ಪಿಸುವ ಉದ್ದೇಶದಿಂದ ಅವುಗಳನ್ನು ಶಕ್ತ ಬ್ಯಾಂಕುಗಳೊಂದಿಗೆ ವಿಲೀನಗೊಳಿಸುವ ಪ್ರಯತ್ನಗಳು ಈಗ ಕಾರ್ಯತಃ ನಡೆಯುತ್ತಿವೆ. ಮೂಲ ಸಮಸ್ಯೆ ಎಂದರೆ, ಸರ್ಕಾರ ತಳೆದಿರುವ ವಿತ್ತೀಯ ನಿಲುವಿನಿಂದಾಗಿ, ಮುಳುಗಡೆ ಸನ್ನಿಹಿತವಾಗಿರುವ ಬ್ಯಾಂಕುಗಳ ವಸೂಲಾಗದ ಸಾಲಗಳ ಹೊರೆಯನ್ನು ನಿಭಾಯಿಸುವ ಮನಸ್ಸು ಸರ್ಕಾರಕ್ಕಿಲ್ಲ.

ವಾಸ್ತವವಾಗಿ, ಬ್ಯಾಂಕುಗಳು ಸದ್ಯದಲ್ಲಿ ಎದುರಿಸುತ್ತಿರುವ ಇಕ್ಕಟ್ಟಿನ ಪರಿಸ್ಥಿತಿಯ ತಳದಲ್ಲಿ ಸರ್ಕಾರದ ಮೃದು ತೆರಿಗೆ ನೀತಿ ಮತ್ತು ಅದರ ಸಾಂಪ್ರದಾಯಿಕ ವಿತ್ತೀಯ ನಿಲುಮೆಗಳು ಅಡಕವಾಗಿವೆ. ಹೆಚ್ಚು ಬಂಡವಾಳ ಹೂಡಿಕೆ ಅವಲಂಬಿತವಾದ ಮೂಲಸೌಕರ್ಯದಂತಹ ವಲಯಗಳಲ್ಲಿ ಹೂಡಿಕೆ ಮಾಡಲು ಸರ್ಕಾರವು ಅಸಮರ್ಥವಾಗಿರುವುದರಿಂದ ಆ ಜವಾಬ್ದಾರಿಯನ್ನು ನಿರ್ವಹಿಸಲು ಖಾಸಗಿ ವಲಯವನ್ನು ಕೋರಲಾಗಿತ್ತು. ಖಾಸಗಿ ವಲಯವು ಆ ಕಾರ್ಯವನ್ನು ಕೈಗೊಳ್ಳುವ ಸಲುವಾಗಿ ಅವರಿಗೆ ಸರ್ಕಾರದ ಗ್ಯಾರಂಟಿಯ ಮೇಲೆ ಸಾರ್ವಜನಿಕ ವಲಯದ ಬ್ಯಾಂಕುಗಳು ಮತ್ತು ಐಎಲ್‌ಎಫ್‌ಎಸ್ ನಂತಹ ಸಂಸ್ಥೆಗಳು ಸಾಲ ಸೌಲಭ್ಯ ಒದಗಿಸುವಂತೆ ಬಲವಂತಪಡಿಸಲಾಗಿತ್ತು. ಆದರೆ, ಈ ಯೋಜನೆ ಕಾರ್ಯತಃ ಯಶಸ್ವಿಯಾಗಿಲ್ಲ, ಕೆಲವು ಯೋಜನೆಗಳು ನೆಲ ಮಟ್ಟದಿಂದ ಮೇಲೆ ಏಳಲೇ ಇಲ್ಲ ಅಥವಾ ಕಾರ್ಯ–ಸಾಧ್ಯವಾಗಿರಲಿಲ್ಲ. ಹಾಗಾಗಿ, ಅವುಗಳಿಗೆ ಒದಗಿಸಿದ ಹಲವು ಲಕ್ಷ ಕೋಟಿ ರೂಪಾಯಿಗಳ ಸಾಲ ವಸೂಲಾಗದೆ ಉಳಿಯಿತು. ಈ ಎಲ್ಲ ಘಟನಾವಳಿಗಳನ್ನು ಒಂದೇ ಮಾತಿನಲ್ಲಿ ಹೇಳುವುದಾದರೆ, 1991ರಿಂದ ನವ ಉದಾರ ಅಜೆಂಡಾವನ್ನು ಜಾರಿಗೆ ತರುವಲ್ಲಿ ಸಾರ್ವಜನಿಕ ವಲಯದ ಬ್ಯಾಂಕುಗಳನ್ನು ಬಳಸಿಕೊಂಡದ್ದರ ನೇರ ಪರಿಣಾಮವಾಗಿ ಬ್ಯಾಂಕುಗಳು ಈಗ ಅಪಾಯದಲ್ಲಿವೆ ಮತ್ತು ಅದರಿಂದಾಗಿ ಸಾಲ ಪಡೆದ ಸಂಸ್ಥೆಗಳು ಸರಣಿಯೋಪಾದಿಯಲ್ಲಿ ನೆಲಕ್ಕುರುಳುತ್ತಿವೆ.

ಬ್ಯಾಂಕಿಂಗ್ ಬಿಕ್ಕಟ್ಟಿನ ಬೇರುಗಳು ಬಹಳ ಆಳಕ್ಕೆ ಹೋಗಿವೆ. ಬ್ಯಾಂಕುಗಳು ಎದುರಿಸುತ್ತಿರುವ ಸಮಸ್ಯೆಗಳಿಗೆ ಅವುಗಳ ಕಾರ್ಯಾಚರಣಾ ವೈಫಲ್ಯ ಅಥವಾ ವಂಚನೆಯ ಪ್ರಕರಣಗಳಿಗಿಂತ ಮುಖ್ಯವಾಗಿ, ಅದು, 2000ದ ಇಸವಿಯ ನಂತರದ ಅವಧಿಯಲ್ಲಿ ಅನುಸರಿಸಿದ ನೀತಿಗಳ ಮೂಲಕ (ಬ್ಯಾಂಕ್ ಸಾಲಗಳ ಮೂಲಕ) ಉಂಟು ಮಾಡಿದ ಆರ್ಥಿಕ ಉಬ್ಬರ ಮತ್ತು ಪ್ರಸಕ್ತ ಆರ್ಥಿಕ ಇಳಿತ ಇವುಗಳ ಫಲಶೃತಿ ಎಂಬುದನ್ನು ಈ ಬಿಕ್ಕಟ್ಟು ಸೂಚಿಸುತ್ತದೆ. ಈ ಅವಧಿಗೆ ಮೊದಲು ಬ್ಯಾಂಕುಗಳ ಮೇಲೆ ಕಟ್ಟುನಿಟ್ಟಿನ ನಿಯಂತ್ರಣವಿಟ್ಟಿದ್ದ ಮತ್ತು ಮೇಲುಸ್ತುವಾರಿಯ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದ ರಿಸರ್ವ್ ಬ್ಯಾಂಕ್, ಉದಾರೀಕರಣದ ವಾತಾವರಣದಲ್ಲಿ ನಿಯಂತ್ರಣ ಮತ್ತು ಮೇಲುಸ್ತುವಾರಿಯನ್ನು ಸಡಿಲಗೊಳಿಸಿತು. ಈ ಸಡಿಲಗೊಳಿಸುವಿಕೆಯ ಅಂಗವಾಗಿ ಮಾರುಕಟ್ಟೆ ಸೂಚಿಸಿದ ನಡತೆಗಳ ಆಧಾರದ ಮೇಲೆ ತನ್ನ ಜವಾಬ್ದಾರಿಯನ್ನು ನಿರ್ವಹಿಸಲು ಆರಂಭಿಸಿತು. ಈ ಬದಲಾವಣೆಯು ಕರ್ತವ್ಯಲೋಪಗಳಿಗೆ ಮತ್ತು ವಂಚನೆಗಳಿಗೆ ಒಂದು ಹಿತವಾದ ವಾತಾವರಣ ಒದಗಿಸಿತು. ಲಾಭಕ್ಕಾಗಿಯೇ ಆಗುವ ಖಾಸಗಿ ಹೂಡಿಕೆಯನ್ನು ಉತ್ತೇಜಿಸುವ ಒಂದು ಪಾತ್ರವನ್ನು ಬ್ಯಾಂಕ್ ವಹಿಸುವುದಾದರೆ, ಆ ಲಾಭದಲ್ಲಿ ಒಂದು ಪಾಲಿಗೆ ಆಸೆಪಡುವುದು ತಪ್ಪದು.

ಈ ವಾಸ್ತವವನ್ನು ಕಡೆಗಣಿಸಿ, ಬ್ಯಾಂಕ್ ಮುಳುಗಡೆಯಂತಹ ವದಂತಿಗಳನ್ನು ನಂಬದಿರಿ ಎಂಬ ತನ್ನ ಸ್ಪಷ್ಟನೆಯನ್ನು ಮತ್ತು ಭಾರತದ ಬ್ಯಾಂಕಿಂಗ್ ವ್ಯವಸ್ಥೆ ಸುಭದ್ರವಾಗಿದೆ ಎಂಬ ತನ್ನ ಆಶ್ವಾಸನೆಯನ್ನು ಠೇವಣಿದಾರರು ನಂಬುತ್ತಾರೆ ಎಂಬುದು ರಿಸರ್ವ್ ಬ್ಯಾಂಕ್‌ನ ವಿಶ್ವಾಸ. ರಿಸರ್ವ್ ಬ್ಯಾಂಕ್‌ನ ಈ ವಿಶ್ವಾಸವು ಪಿಎಂಸಿ ಬ್ಯಾಂಕ್ ಮೇಲೆ ಎಸಗಿದ ವಂಚನೆಯ ಪ್ರಕರಣವು ಒಂದು ಅಪವಾದವಷ್ಟೇ ಎನ್ನಬಹುದಾದ ದಾರಿಗೆಟ್ಟ ಪ್ರಕರಣವೇ ಹೊರತು ಅದು ವ್ಯವಸ್ಥೆಯ ರಚನೆಯಲ್ಲಿರುವ ದೋಷದ ಲಕ್ಷಣ ಅಲ್ಲವೆಂಬ ಭಾವನೆಯ ಮೇಲೆ ನಿಂತಿದೆ. ಒಂದು ವೇಳೆ ಈ ಭಾವನೆ ನಿಜವಲ್ಲದಿದ್ದರೆ, ಇಂತಹ ಮೋಸದ ಕೃತ್ಯಗಳನ್ನು ತಡೆಗಟ್ಟುವಲ್ಲಿ ಮತ್ತು ಠೇವಣಿದಾರರ ಹಿತ ರಕ್ಷಣೆ ಮಾಡುವಲ್ಲಿ ರಿಸರ್ವ್ ಬ್ಯಾಂಕ್‌ನ ಅಸಾಮರ್ಥ್ಯವು ಇನ್ನೂ ಹೆಚ್ಚು ಕಳವಳಕಾರಿಯಾಗಿ ಕಾಣುತ್ತದೆ. ಬಹುಷಃ, ಜನರ ಉಳಿತಾಯಗಳನ್ನು ಮತ್ತು ಠೇವಣಿದಾರರ ಹಿತವನ್ನು ಸದಾ ಕಾಲವೂ ಸರ್ಕಾರದ ವಿವಿಧ ಸಂಸ್ಥೆಗಳು ರಕ್ಷಿಸುತ್ತಿರಬೇಕು ಎನ್ನುವ ಗ್ರಹಿಕೆ ಮತ್ತು ನಿರೀಕ್ಷೆಗಳನ್ನು ಸಾಧ್ಯವಾದರೆ ಬದಲಾಯಿಸಬೇಕು ಎಂದು ಕೇಂದ್ರ ಸರ್ಕಾರ ಮತ್ತು ರಿಸರ್ವ್ ಬ್ಯಾಂಕ್ ನಂಬಿವೆ.

ಇಂತಹ ಚಿಂತನೆಗಳನ್ನು ಮೋದಿ ಸರ್ಕಾರವು ಕಾನೂನು ಬದ್ಧಗೊಳಿಸಲು ಹೊರಟಿತ್ತು. 2017ರ ಅಗಸ್ಟ್‌ನಲ್ಲಿ, 'ಹಣಕಾಸು ಪರಿಹಾರ ಮತ್ತು ಠೇವಣಿ ವಿಮೆ' ಎಂಬ ಒಂದು ಮಸೂದೆ(ಈಖಆಖ ಏಟಟ ರಜಿ 2017) ಯನ್ನು ಲೋಕ ಸಭೆಯಲ್ಲಿ ಮಂಡಿಸಲಾಗಿತ್ತು. ಅದರ ಪ್ರಕಾರವಾಗಿ, ಪಿಎಂಸಿ ಬ್ಯಾಂಕ್ ವಂಚನೆಯಂತಹ ಪ್ರಕರಣಗಳಲ್ಲಿ (ಅಂದರೆ, ಬ್ಯಾಂಕ್ ಠೇವಣಿಗಳನ್ನು ಮರು ಪಾವತಿ ಮಾಡಲಾಗದೆ ಮುಳುಗಿದಾಗ) ಠೇವಣಿದಾರರು ವಂಚನೆಯ ಭಾರವನ್ನು ಹೊರಬೇಕಿತ್ತು. ಅಂದರೆ, ವಂಚನೆಯಿಂದಾಗಿ ಒಂದು ಬ್ಯಾಂಕ್ ಮುಳುಗಿದಾಗ, ಜನರು ಬ್ಯಾಂಕಿನಲ್ಲಿ ತಮ್ಮ ಹಣವನ್ನು ಠೇವಣಿ ಇಟ್ಟ ತಪ್ಪಿಗೆ, ಇಡೀ ಠೇವಣಿಯನ್ನು ಕಳೆದುಕೊಳ್ಳಬೇಕಾಗಿತ್ತು. ಈ ಪ್ರಸ್ತಾಪಗಳಿಗೆ ತೀವ್ರ ವಿರೋಧ ವ್ಯಕ್ತವಾದ ಸನ್ನಿವೇಶದಲ್ಲಿ ಮಸೂದೆಯನ್ನು ಹಿಂಪಡೆಯಲಾಯಿತು. ಆದರೆ, ಮೋದಿ ಸರ್ಕಾರವು ಎದುರಿಸುತ್ತಿರುವ ಪ್ರಸಕ್ತ ಸವಾಲಗಳ ಸಂದರ್ಭದಲ್ಲಿ, ಅದೇ ಮಸೂದೆಯನ್ನು, ತನಗಿರುವ ಒರಟು ಬಹುಮತವನ್ನು ಬಳಸಿಕೊಂಡು ಕಾನೂನು ಬದ್ಧಗೊಳಿಸಿದರೆ ಆಶ್ಚರ್ಯವಿಲ್ಲ. ಅದೇನೇ ಇರಲಿ, ಬ್ಯಾಂಕುಗಳ ಕಾರ್ಯವೈಖರಿಯ ಬಗ್ಗೆ ಎದ್ದಿರುವ ದಿಗಿಲನ್ನು ಸರ್ಕಾರವು ತನಗೆ ಹೊರೆಯಾಗದಂತಹ ಸೂಕ್ತ ಕ್ರಮಗಳ ಮೂಲಕ ದೂರ ಮಾಡಬೇಕು. ಈ ಕೆಲಸವನ್ನು, ರಿಸರ್ವ್ ಬ್ಯಾಂಕ್ ಕೊಟ್ಟಿರುವ ತಪ್ಪು ಅರ್ಥ ಕೊಡುವ ಪದ ಬಳಕೆಯಿಂದ ಕೂಡಿದ ಸ್ಪಷ್ಟೀಕರಣವು ಸಾಧಿಸುತ್ತದೆಯೇ ಎಂಬುದು ಅಸ್ಪಷ್ಟ.

ಸಾರ್ವಜನಿಕ ಸಂಸ್ಥೆಗಳ ಜಾತ್ಯಾತೀತ ಸ್ವರೂಪ ಉಳಿಯಲಿ

ಆರೋಗ್ಯ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಆರೋಗ್ಯ ಸಚಿವರಾದ ಶ್ರೀರಾಮುಲುರವರು 'ಸಾರ್ವಜನಿಕ ಆರೋಗ್ಯ ರಂಗವನ್ನು ಬಲಪಡಿಸುವ ಹೆಸರಿನಲ್ಲಿ ಹೇಳಿದ ಮಾತುಗಳು ಮಾಧ್ಯಮಗಳಲ್ಲಿ ವರದಿಯಾಗಿವೆ. ಖಾಸಗಿ ಮತ್ತು ಸರಕಾರಿ ಸಹಬಾಗಿತ್ವದ ಬಗ್ಗೆ ಕೇಳಿಕೆಗಳಿವೆ ಎಂಬ ಎಚ್ಚರಿಕೆ ಕೊಡುವ ಮೂಲಕ ಸರಕಾರ ಮುಂದಿನ ದಿನಗಳಲ್ಲಿ ತೆಗೆದುಕೊಳ್ಳುವ ಕ್ರಮವನ್ನು ಸೂಚ್ಯವಾಗಿ ಪ್ರಸ್ತಾಪಿಸಿದ್ದಾರೆ ಮತ್ತು ಆ ಮೂಲಕ ಆರೋಗ್ಯ ರಂಗವನ್ನು ದುರ್ಬಲಗೊಳಿಸುವ ಸಂಚನ್ನು ತೆರೆದಿಟ್ಟಿದ್ದಾರೆ.

ಇದನ್ನು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಕರ್ನಾಟಕ ರಾಜ್ಯ ಸಮಿತಿ ತೀವ್ರವಾಗಿ ಖಂಡಿಸಿದೆ.

ಸರಕಾರ ಕೈಗೊಳ್ಳಬೇಕಾದ ಕ್ರಮ, ನೀಡಬೇಕಾದ ಆದ್ಯತೆಗಳತ್ತ ಗಮನ ಹರಿಸದೇ ಸರ್ಕಾರಿ–ಖಾಸಗಿ ಸಹಭಾಗಿತ್ವವೇ ಪರ್ಯಾಯ ಎಂದು ಹೇಳುವ ಮೂಲಕ ಸಾರ್ವಜನಿಕ ಆರೋಗ್ಯ ರಂಗವನ್ನು ಹಂತ ಹಂತವಾಗಿ ಖಾಸಗಿ– ಕಾರ್ಪೊರೇಟ್ ವಲಯಗಳಿಗೆ ತೆರೆದಿಡುವ ಉದ್ದೇಶ ಇಲ್ಲಿ ಕಾಣಸಿಗುತ್ತಿದೆ. ಅಗತ್ಯ ಸಿಬ್ಬಂದಿ, ಪರಿಕರಗಳನ್ನು ಒದಗಿಸಲಾಗದ ಸರ್ಕಾರವು, ಸರ್ಕಾರಿ ಹಣ ಖಾಸಗಿ ವಲಯಕ್ಕೆ ಸುಲಭವಾಗಿ ಹರಿದು ಹೋಗುವಂತೆ ಮಾಡುವ ಹುನ್ನಾರವಾಗಿದೆ.

ಇಂದಿಗೂ ತಾಲ್ಲೂಕು/ ಜಿಲ್ಲಾ ಕೇಂದ್ರದ ಆಸ್ಪತ್ರೆಗಳಲ್ಲಿ, ಹಾಗೂ ಮಹಾನಗರಗಳೂ ಸೇರಿದಂತೆ ಕನಿಷ್ಟಮೂಲ ಭೂತ ಸೌಕರ್ಯಗಳ ಕೊರತೆಗಳಿವೆ. ಅಗತ್ಯ ಪರಿಣಿತ ತಜ್ಞ ವೈದ್ಯರಿಲ್ಲ, ಅಗತ್ಯಕ್ಕೆ ತಕ್ಕ ನರ್ಸಗಳಿಲ್ಲ. ಡಿ. ಗ್ರೇಡ್ ನೌಕರರ ನೇಮಕಾತಿ ಇಲ್ಲದೆ ಆಸ್ಪತ್ರೆಗಳು ಕಸ ಕೊಳೆಯಿಂದನಾರುತ್ತವೆ. ಆಂಬ್ಯುಲೆನ್ಸ್, ವೆಂಟಿಲೇಟರ್ ಗಳು, ಆಮ್ಲಜನಕ ಸಿಲಿಂಡರ್ ಗಳ ಕೊರತೆ ಎಲ್ಲ ಆಸ್ಪತ್ರೆಗಳಲ್ಲಿಯೂ ಕಣ್ಣಿಗೆ ರಾಚುತ್ತವೆ. ಸರಿಯಾಗಿ ಔಷಧಿಗಳ ದಾಸ್ತಾನು ಇಲ್ಲದೆ ಹೊರಗೆ ಚೀಟಿ ಬರೆದು ಕೊಡಲಾಗುತ್ತದೆ.

ತಾಲ್ಲೂಕು ಆಸ್ಪತ್ರೆಗಳಲ್ಲಿ ಸ್ಕ್ಯಾನಿಂಗ್ ಇಲ್ಲದೆ ಹೊರಗಡೆ ಕಳಿಸುವ ಪರಿಸ್ಥಿತಿ. ಹಾಸಿಗೆಗಳಿಲ್ಲದೆ ಚಿಕಿತ್ಸೆಗಾಗಿ ಬಂದ ರೋಗಿಗಳು ಕಾರಿಡಾರುಗಳಲ್ಲಿ ಮಲಗಿರುವ ವರದಿಗಳು ಆಗಾಗ ಮಾಧ್ಯಮಗಳಲ್ಲಿ ಪ್ರಕಟವಾಗುತ್ತಿವೆ.

ಜನ ಗುಣಮುಖರಾಗುವ ಬದಲು ಹೆಣಗಳಾಗಿ ಹಿಂತಿರುಗುತ್ತಿರುವ ಘಟನೆಗಳು ವರದಿಯಾಗುತ್ತಿವೆ. ಹೀಗಿರುವಾಗ "ಸರ್ಕಾರಿ ಆಸ್ಪತ್ರೆಗೆ ಬರುವ ಯಾರೊಬ್ಬರೂ ಚಿಕಿತ್ಸೆಗಳಿಂದ ವಂಚಿತರಾಗದೇ ಹಿಂತಿರುಗದಂತೆ ತುರ್ತು ಕ್ರಮಗಳನ್ನು ಖಾತ್ರಿ ಗೊಳಿಸದ ಸಚಿವರು, ಆಸ್ಪತ್ರೆಯ ಆವರಣದಲ್ಲಿ ಬಹು ಧರ್ಮೀಯ ದೇವಾಲಯಗಳು ಇರಬೇಕು, ಅವು ಪಾಸಿಟೀವ್ ಎನರ್ಜಿ ನೀಡುತ್ತವೆಂದು ಹೇಳುತ್ತಿದ್ದಾರೆ.

ಹಣಕ್ಕೆ ಕೊರತೆ ಇಲ್ಲ ಎಂಬ ಸಚಿವರ ಹೇಳಿಕೆ ನಿಜವೇ ಇದ್ದಲ್ಲಿ ಸಮರೋಪಾದಿಯಲ್ಲಿ ರಾಜ್ಯದ ಎಲ್ಲ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಅಗತ್ಯ ಸೌಲಭ್ಯ ಒದಗಿಸಿ ಮೇಲ್ದರ್ಜೆಗೆ ಏರಿಸಲು ಮುಂದಾಗಬೇಕೆ ಹೊರತು ಅನ್ಯ ಕಾರ್ಯಗಳಿಗಲ್ಲ ಎಂದು ಸಂಘಟನೆ ತಿಳಿಸಬಯಸುತ್ತದೆ.

ದೇವರ ಪೂಜೆ ಅತ್ಯಂತ ಖಾಸಗಿ ವಿಷಯವಾಗಿದೆ. ಸರಕಾರಿ ಸಂಸ್ಥೆಗಳನ್ನು ಜಾತ್ಯಾತೀತ ಸಂಸ್ಥೆಗಳಾಗಿ ಉಳಿಸಬೇಕೆಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಕರ್ನಾಟಕ ರಾಜ್ಯ ಸಮಿತಿ ಒತ್ತಾಯಿಸಿದೆ.

ಯಡ್ತರೆ: ಮನೆ, ನಿವೇಶನ ರಹಿತರಿಗೆ ನಿವೇಶನ ಒದಗಿಸಲು ಆಗ್ರಹ – ನಾಗರತ್ನ ನಾಡ

2011 ರ ಜನಗಣತಿಯ ಪ್ರಕಾರ ರಾಜ್ಯದಲ್ಲಿ 15 ಲಕ್ಷ ಕುಟುಂಬಗಳಿಗೆ ಸ್ವಂತ ಮನೆಗಳಿಲ್ಲ. ವಾಸ್ತವದಲ್ಲಿ ವಸತಿ ರಹಿತರ ಸಂಖ್ಯೆ ಇದಕ್ಕೂ ದೊಡ್ಡದಿದೆ. ಇದರಲ್ಲಿ ಒಂದು ದೊಡ್ಡ ವಿಭಾಗ ಬಾಡಿಗೆ ಮನೆಗಳನ್ನು ಅವಲಂಬಿಸಿದ್ದು, ತಮ್ಮ ದುಡಿಮೆಯ ಬಹು ದೊಡ್ಡ ಪಾಲನ್ನು ಮನೆ ಬಾಡಿಗೆಗೆ ತೆರುತ್ತಾರೆ. ಒಂದೇ ಮನೆಯಲ್ಲಿ ಒಂದಕ್ಕಿಂತ ಹೆಚ್ಚು ಕುಟುಂಬಗಳು ವಾಸಿಸುವ ಅನಿವಾರ್ಯತೆಗೆ ಒಳಗಾದವರು ಗಣನೀಯ ಸಂಖ್ಯೆಯಲ್ಲಿದ್ದಾರೆ, ದೊಡ್ಡ ಸಂಖ್ಯೆಯಲ್ಲಿ ಕೃಷಿಕೂಲಿ ಕಾರ್ಮಿಕರು ಸ್ವಂತ ಜಮೀನನ್ನು ಹೊಂದದೆ ಸರಕಾರಿ ಭೂಮಿಯಲ್ಲಿ ಅನಧಿಕೃತ ಗುಡಿಸಲುಗಳನ್ನು ಹಾಕಿಕೊಂಡು ಅವುಗಳಲ್ಲೇ ಜೀವನ ಸಾಗಿಸುತ್ತಲಿದ್ದಾರೆ. ಇವರೆಲ್ಲಗೂ ನಿವೇಶನಗಳನ್ನು ಒದಗಿಸಿ ಮನೆಗಳನ್ನು ನಿರ್ಮಿಸಿ ಕೊಡುವುದು ಸರಕಾರದ ಜವಾಬ್ದಾರಿ ಯಾಗಿದೆ. ಎಂದು ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘದ ಕುಂದಾಪುರ ತಾಲೂಕು ಕಾರ್ಯದರ್ಶಿ ನಾಗರತ್ನ ನಾಡ ಹೇಳಿದರು. ಬೈಂದೂರು ಸಿಐಟಿಯು ಕಚೇರಿ ಸಭಾಂಗಣದಲ್ಲಿ ದಿನಾಂಕ16, ಅಕ್ಟೋಬರ್ 2019 ರಂದು ಜರಗಿದ ಯಡ್ತರೆ ಗ್ರಾಮ ಪಂಚಾಯತ್ ವ್ಯಾಪ್ತಿಯ ಮನೆ, ನಿವೇಶನ ರಹಿತ ಅರ್ಜಿದಾರರ ಸಮಾವೇಶದಲ್ಲಿ ಅವರು ಮಾತನಾಡಿದರು. ಸಂಘದ ಉಡುಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವೆಂಕಟೇಶ ಕೋಣಿ ಸಭೆಯನ್ನುದ್ದೇಶಿಸಿ ಮಾತನಾಡುತ್ತಾ, ಮನೆ, ನಿವೇಶನ ರಹಿತರಿಗೆ ಭೂಮಿ ಹಕ್ಕು ಪತ್ರ ಕೈಗೆ ಸಿಗುವ ತನಕ ನಡೆಸುವ ಹೋರಾಟದಿಂದ ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ ಎಂದು ಆಕ್ರೋಶ ವ್ಯಕ್ತ ಪಡಿಸಿದರು. ಯಡ್ತರೆ ಗ್ರಾಮದ ನಿವೇಶನ ರಹಿತರ ಹೋರಾಟ ಸಮಿತಿಗೆ ಅಬ್ಬಕ್ಕ ಕತ್ಲೆಕಾನ್ ಹಿತ್ತಲು, ಜ್ಯೋತಿ ಶಿವರಾಜ್, ಶ್ಯಾಮಲ ಹೆಗ್ಡೇರ ಮನೆ, ಅಲ್ಫೋನ್ಸ್ ರಬೇರೊ, ನಾಗರತ್ನ ಕುದ್ರಿಸಾಲ್, ಕಲ್ಪನಾ ರವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.

ವರದಿ: ವೆಂಕಟೇಶ ಕೋಣಿ

ಬಿಟ್ಟಿ ದುಡಿಮೆಯ ನೆಟ್ಟಿಗರು ಮತ್ತು ಸಾಮಾಜಿಕ ಜಾಲತಾಣಗಳು

ಪುಟ 6 ರಿಂದ

ಹೆಸರಿಸಲು ಬರುತ್ತದೆಯೆ?

ಸಾಮಾಜಿಕ ಜಾಲತಾಣಗಳನ್ನು ನಿರ್ವಹಿಸಲು ತರಬೇತಿ ಪಡೆದ ನುರಿತ ಸಿಬ್ಬಂದಿ ಸಂಸ್ಥೆಗಳಿಂದ ಸಂಬಳ ಪಡೆಯುತ್ತಾರೆ. ನೆಟ್ಟಿಗರ ಸಂಖ್ಯೆಗೆ ಹೋಲಿಸಿದರೆ ಇವರ ಸಂಖ್ಯೆ ಬೆರಳೆಣಿಕೆಯಷ್ಟು ಮಾತ್ರ. ನೆಟ್ಟಿಗರಿಂದ ಪಡೆಯುವ ಮಾಹಿತಿಗಳನ್ನು ಸಂಸ್ಕರಿಸಿ ವ್ಯಾಪಾರಿಗಳಿಗೆ ತಲುಪಿಸುವುದು, ಜಾಹಿರಾತುದಾರರನ್ನು ಜಾಲತಾಣದಲ್ಲಿ ಜಾಹಿರಾತು ಹೂಡುವಂತೆ ಆಕರ್ಷಿಸುವುದು ಇವರ ಕೆಲಸ. ಈ ಕೆಲಸಗಳಿಂದಾಗಿ ಅವರಿಗೆ ಸಿಗುವ ಸಂಬಳ ಅಲ್ಪವೇನಲ್ಲ, ನಿಜ. ಆದರೂ ಅವರ ದುಡಿಮೆಯಿಂದಾಗಿ ಜಾಲತಾಣ ಕಂಪೆನಿಗಳ ಆದಾಯವೇನೂ ಕೋಟಿಗಟ್ಟಲೆ ಹೆಚ್ಚುವುದಿಲ್ಲ. ಹಾಗಿದ್ದರೆ ನೆಟ್ಟಿಗರು ಜಾಲತಾಣಗಳ ಆದಾಯವನ್ನು ಈಗ ಇರುವಷ್ಟು ಅಗಾಧ ಪ್ರಮಾಣದಲ್ಲಿ ಹೇಗೆ ಹೆಚ್ಚಿಸುತ್ತಿರಬಹುದು?

ನೆಟ್ಟಿಗರು ಒಂದೇ ಸಮಯದಲ್ಲಿ ಮೂರು ಬಗೆಯ ಬಿಟ್ಟಿ ದುಡಿಮೆ ಮಾಡುತ್ತಾರೆ. ಒಂದು, ಜಾಲತಾಣವನ್ನು ತೆರೆದ ಕ್ಷಣವೇ ಜಾಲತಾಣಕ್ಕೆ ಜಾಹಿರಾತುದಾರರಿಂದ ಹಣಸಂದಾಯವಾಗುವ ಸಮಯದ ಗಣನೆ ಪ್ರಾರಂಭವಾಗುತ್ತದೆ. ಅಂದರೆ ನೆಟ್ಟಿಗರು ಜಾಲತಾಣವನ್ನು ವೀಕ್ಷಿಸಲು ತೆರೆಯುವುದೇ ಜಾಲತಾಣ ಕಂಪೆನಿಗೆ ಕೊಡುವ 'ಬಿಟ್ಟಿ ದುಡಿಮೆ'ಯಾಗುತ್ತದೆ. ಎರಡು, ನೆಟ್ಟಿಗರು ಜಾಲತಾಣದಲ್ಲಿ ವಿಹರಿಸುತ್ತಿದ್ದಂತೆ, ಅವರಿಂದ ಪಡೆದ ಸಂಸ್ಕರಿಸಿದ ಮಾಹಿತಿಯನ್ನು ಆಧರಿಸಿ ಆ ನೆಟ್ಟಿಗರ ಇಷ್ಟ, ಆಯ್ಕೆ, ಮನೋಧರ್ಮಗಳನ್ನು ಆಧರಿಸಿ ಲಗತ್ತಿಸಿದ ಜಾಹಿರಾತು ಕಾಣಿಸಿಕೊಳ್ಳುತ್ತದೆ. ನೆಟ್ಟಿಗರು ಅದನ್ನು ತೆರೆದರೆ ಸಾಕು, ಸರಕನ್ನು ಕೊಂಡುಕೊಳ್ಳಬೇಕೆಂದಿಲ್ಲ, ಜಾಹಿರಾತುದಾರರಿಂದ ಜಾಲತಾಣಕ್ಕೆ ಹಣ ರವಾನೆಯಾಗುತ್ತದೆ. ಮೂರು, ನೆಟ್ಟಿಗರು ಆ ಜಾಹಿರಾತಿನಲ್ಲಿ ನೋಡಿದ ಸರಕನ್ನು ಖರೀದಿಸಿದರೆ, ಆಗಲೂ ಜಾಲಿಗ ಕಂಪೆನಿಗೆ ಜಾಹಿರಾತುದಾರರಿಂದ ಹಣ ಸಂದಾಯವಾಗುತ್ತದೆ.

ಇದಲ್ಲದೆ ಪ್ರತಿಯೊಬ್ಬ ನೆಟ್ಟಿಗನೂ ಬಳಕೆದಾರನಾಗಿ ಜಾಲತಾಣವನ್ನು ತೆರೆಯುತ್ತಲೇ ಎರಡು ಬಗೆಯ 'ಬಿಟ್ಟಿ ದುಡಿಮೆ'ಯಲ್ಲಿ ತೊಡಗುತ್ತಾನೆ. ಒಂದು, ತನ್ನ ಸ್ವವಿವರಗಳನ್ನು ಜಾಲತಾಣದಲ್ಲಿ ಬಿಡುತ್ತಾನೆ. ಒಂದು ಎಲೆಯನ್ನು ಮುಟ್ಟಿದರೆ ಇಡೀ ಮರವೇ ಸ್ಪಂದಿಸುವಂಥ ಸಂಪರ್ಕಜಾಲವುಳ್ಳ ಜಾಲತಾಣಗಳಲ್ಲಿ ತನ್ನ ಸ್ವವಿವರಗಳನ್ನು ಕೊಡುವುದರೊಂದಿಗೆ ತನ್ನೊಂದಿಗೆ ನಾನಾ ರೀತಿಯಲ್ಲಿ ಸಂಪರ್ಕವಿರುವ ಎಲ್ಲರ ವಿವರಗಳನ್ನೂ ಜಾಲತಾಣಕ್ಕೆ ತಲುಪಿಸುವ ಕೊಂಡಿಯಾಗುತ್ತಾನೆ. ಈ ಜಾಲತಾಣಗಳನ್ನು ತೆರೆಯುವ ನೆಟ್ಟಿಗರ ಆಸೆ, ಆಯ್ಕೆ, ಅನಿಷ್ಟ, ರಾಜಕೀಯ ಒಲವು, ಕುಟುಂಬದ ಸದಸ್ಯರ ವಿವರಗಳು ಇನ್ನೂ ಅದೆಷ್ಟೋ ಮಾಹಿತಿಗಳನ್ನು ತಾಣದ ಮಾಹಿತಿ ಭಂಡಾರದೊಳಕ್ಕೆ ಬಸಿದುಕೊಳ್ಳುವಂತೆ ಸಾಮಾಜಿಕ ಜಾಲತಾಣಗಳು ರಚನೆಯಾಗಿವೆ. ಒಬ್ಬ ಶ್ರಮಿಕನನ್ನು ನೇಮಿಸಿಕೊಂಡು ಅವನಿಂದ ಶ್ರಮವನ್ನು ಬಸಿದುಕೊಂಡು 'ಬಿಟ್ಟಿ ದುಡಿಮೆಯ' ಲಾಭವನ್ನು ಪಡೆಯುವ ಬಂಡವಾಳಶಾಹಿ ಉತ್ಪಾದನಾ ವಿಧಾನವೇ ಇಲ್ಲೂ ಬಳಕೆಯಾಗುತ್ತದೆ. ಮಾಮೂಲಿ ಅರ್ಥದಲ್ಲಿ ಕಾಪಿರೈಟ್ ನಿರ್ಬಂಧವಿಲ್ಲದೆ ಕೇವಲ ಮಾಹಿತಿಯನ್ನು ಮುಕ್ತವಾಗಿ ಕೊಡಲೆಂದೇ ರಚಿತವಾಗಿರುವ ಒಂದೆರಡು ಜಾಲತಾಣಗಳನ್ನು ಬಿಟ್ಟರೆ ಉಳಿದೆಲ್ಲ ಜಾಲತಾಣಗಳೂ ಬಿಟ್ಟಿಯಾಗಿ ಮಾಹಿತಿಯನ್ನು ಕಲೆಹಾಕಿ ವಾಣಿಜ್ಯವೂ ಸೇರಿದಂತೆ ಅನೇಕ ಸ್ವಹಿತಾಸಕ್ತಿಯ ಉದ್ದೇಶಗಳಿಗಾಗಿಯೇ ಬಾಯಿತೆರೆದು ಕುಳಿತಿರುತ್ತವೆ.

ಈ ದಿನಗಳಲ್ಲಿ ಬಳಕೆದಾರರು ಯಾವುದೇ ವಾಣಿಜ್ಯಮಳಿಗೆ ಹೋಗಿ ಏನನ್ನೋ ಕೊಂಡರೂ 'ಖರೀದಿ' ಪೂರ್ಣವಾಗುವ ಮೊದಲು 'ಫೀಡ್‌ಬ್ಯಾಕ್' ಹೆಸರಿನಲ್ಲಿ ಬಳಕೆದಾರನ ಸ್ವವಿವರಗಳನ್ನು, ಅವನ/ಅವಳ ಶಿಕ್ಷಣಮಟ್ಟ ಇತ್ಯಾದಿಯನ್ನು ಸಂಗ್ರಹಿಸುವುದು ಸಾಮಾನ್ಯ ಸಂಗತಿಯಾಗಿದೆ. ಸರಕುಗಳನ್ನು ಮಾರುವುದಕ್ಕಾಗಿಯೇ ಸಂಘಟಿತವಾಗುವ ವಾಣಿಜ್ಯಮೇಳಗಳು ಬಳಕೆದಾರರು ಬಂದರೆ ಸಾಕೆಂದು ಕಾಯುತ್ತಾ ಕುಳಿತಿದ್ದರೂ, 'ಪ್ರವೇಶ ಉಚಿತ' ಎಂದು ಎಲ್ಲ ಕಡೆಗಳಲ್ಲಿ ಜಾಹೀರು ಮಾಡುವುದು ಹಾಸ್ಯಾಸ್ಪದ ಎನಿಸಿದರೂ, ಹಾಗೆ ಜಾಹೀರು ಮಾಡುವ ಮೂಲಕ ಬಳಕೆದಾರರಲ್ಲಿ ಸಾಮಾನ್ಯವಾಗಿ ಅಂತರ್ಗತವಾಗಿರುವ 'ಬಿಟ್ಟಿ' ಬಗೆಗಿನ ದುರಾಸೆಯನ್ನು ಚೆನ್ನಾಗಿ ಬಳಕೆಮಾಡಿಕೊಳ್ಳುತ್ತಾರೆ. ಕುರಿಯನ್ನು ಒಮ್ಮೆ ದೊಡ್ಡಿಯೊಳಕ್ಕೆ ಬಿಟ್ಟುಕೊಂಡರೆ ಸಾಕು, ಅದರ ತುಪ್ಪಟ ಎಷ್ಟು ಬೆಳೆದಿದೆ, ಎಷ್ಟನ್ನು, ಯಾವಾಗ ಕತ್ತರಿಸಬೇಕೆಂಬುದು ಕುರಿಗಾಹಿಗೆ ಗೊತ್ತಿರುವಂತೆ ಬಳಕೆದಾರರು ಮೇಳದೊಳಕ್ಕೆ ಕಾಲಿಟ್ಟರೆ ಸಾಕು ಅವರಿಂದ ಮಿಗುತಾಯ ಮೌಲ್ಯವನ್ನು ಪಡೆಯುವುದು ಹೇಗೆ ಎಂಬುದು ವ್ಯಾಪಾರಿಗಳಿಗೆ ಗೊತ್ತು.

ಬಹಳಷ್ಟುಸಲ ನೆಟ್ಟಿಗನೇ ಸ್ವಇಚ್ಛೆಯಿಂದ, ಸ್ವಸಂತೋಷಕ್ಕಾಗಿ, ಹೆಸರಿನ ಆಸೆಗಾಗಿ ಇನ್ನೂ ಅನೇಕ ಸುಪ್ತ ಆಕಾಂಕ್ಷೆಗಳನ್ನು ಪೂರೈಸಿಕೊಳ್ಳಲು ತಾನೇ ಸಂಪಾದಿಸಿದ, ಸಂಗ್ರಹಿಸಿದ, ಸೃಷ್ಟಿಸಿದ, ವಿಷಯ–ಚಿತ್ರ–ವೀಡಿಯೋ ಸಾಮಗ್ರಿಯನ್ನು ತನ್ನ ಖರ್ಚಿನಲ್ಲೇ ಜಾಲತಾಣಕ್ಕೆ ತುಂಬುತ್ತಾನೆ. ಅವಕ್ಕೆ ಜಾಗ ಕೊಟ್ಟ ಉಪಕಾರಕ್ಕಾಗಿ ಜಾಲತಾಣವು ಅದನ್ನು ತನ್ನ ಸಾಮಗ್ರಿಯಾಗಿ ಮಾಡಿಕೊಳ್ಳುವುದರ ಮೂಲಕ ನೆಟ್ಟಿಗನ 'ಬಿಟ್ಟಿ ದುಡಿಮೆ'ಯನ್ನು ತನ್ನ ಆದಾಯಕ್ಕಾಗಿ ಬಳಸಿಕೊಳ್ಳುತ್ತದೆ. ನೆಟ್ಟಿಗನ 'ಸಮ್ಮತಿ'ಯನ್ನು ಯಾವುದೋ ಸಂದು ಗೊಂದಿನಲ್ಲಿ ಇರಿಸಿ, ನಿಬಂಧನೆಗಳಿಗೆ 'ನನ್ನ ಒಪ್ಪಿಗೆ ಇದೆ' ಎಂಬುದು ಮಾತ್ರ ಎದ್ದುಕಾಣುವಂತೆ ನಿಬಂಧನೆಯ ಪತ್ರವು ರಚಿತವಾಗಿರುತ್ತದೆ.

ಪತ್ರಿಕೆಗಳು, ಜಾಹಿರಾತುಗಳು ಕಡಿಮೆಯಿದ್ದಾಗ ಓದುಗ–ಲೇಖಕರಿಂದ ಆಹ್ವಾನಿಸಿದ ಬರಹ–ಚಿತ್ರಗಳಿಗೆ ಜಾಗಕೊಟ್ಟು 'ಸಂಸ್ಕೃತಿ ಪ್ರೀತಿ'ಯನ್ನು ನಟಿಸುತ್ತಾ ಓದುಗರ ಶ್ರಮವನ್ನು ಬಿಟ್ಟಿಯಾಗಿ ಬಳಸಿಕೊಳ್ಳುವ ನಯವಂಚನೆ ಮುದ್ರಣ ಮಾಧ್ಯಮಗಳಲ್ಲೂ ಇದೆ.

ವಿಶ್ವದಾದ್ಯಂತ ಊಳಿಗಮಾನ್ಯ ಸಮಾಜಗಳ ವಾಣಿಜ್ಯ ಬಂಡವಾಳವು 16ನೇ ಶತಮಾನದಿಂದೀಚೆಗೆ ಯೂರೋಪಿನ ಸಮಾಜಗಳಲ್ಲಿ ನಡೆದ ಔದ್ಯಮಿಕ ಕ್ರಾಂತಿಯಿಂದಾಗಿ ಔದ್ಯಮಿಕ ಬಂಡವಾಳವಾಗಿ ಬಂಡವಳಿಗ ಮತ್ತು ಶ್ರಮಿಕ ಎಂಬ ವರ್ಗಗಳ ಹುಟ್ಟಿಗೆ ಕಾರಣವಾಯಿತು. ಅಲ್ಲಿಂದೀಚೆಗೆ ನಿರಂತರವಾಗಿ ನಡೆಯುತ್ತಲೇ ಇರುವ ಯಂತ್ರೋಪಕರಣಗಳ ಆವಿಷ್ಕಾರಗಳು ಬಂಡವಳಿಗರು ಮತ್ತು ಶ್ರಮಿಕರ ನಡುವಿನ ಶ್ರಮಸಂಬಂಧಗಳನ್ನು, ಉತ್ಪಾದನಾ ವಿಧಾನಗಳನ್ನು, ಬಂಡವಾಳಶಾಹಿಯ ಸ್ವರೂಪವನ್ನು ಮಾರ್ಪಡಿಸುತ್ತಲೇ ಬಂದಿವೆ. ಇಪ್ಪತ್ತನೇ ಶತಮಾನದ ಆದಿಯಲ್ಲಿ ಬೆರಳೆಣಿಕೆಯ ದೇಶಗಳಲ್ಲಿ ಅಸ್ತಿತ್ವಕ್ಕೆ ಬಂದ ಸಮಾಜವಾದೀ ಶ್ರಮಸಂಬಂಧಗಳು ಮತ್ತು ಉತ್ಪಾದನಾ ಸಂಬಂಧಗಳ ಪ್ರಭಾವದ ಹೊರತಾಗಿಯೂ ಜಾಗತಿಕ ಬಂಡವಾಳವು ಜನಸಾಮಾನ್ಯರ ಮೇಲೆ ತನ್ನ ಹಿಡಿತವನ್ನು ಉಳಿಸಿಕೊಂಡೇ ಬಂದಿದೆ. ಬಿಕ್ಕಟ್ಟಿನ ಮೇಲೆ ಬಿಕ್ಕಟ್ಟುಗಳನ್ನು ಎದುರಿಸುತ್ತಿದ್ದರೂ ತಂತ್ರಜ್ಞಾನವನ್ನು ತನ್ನ ಕೈಲಿರಿಸಿಕೊಂಡೇ ಕಂಪ್ಯೂಟರ್ ಮತ್ತು ಡಿಜಿಟಲ್ ಯಂತ್ರೋಪಕರಣಗಳ ಹಣಕಾಸು ಬಂಡವಾಳ–ಕಾರ್ಪೋರೇಟ್ ಬಂಡವಾಳದ ಸ್ವರೂಪವನ್ನು ಪಡೆಯುವ ಹೊತ್ತಿಗೆ 'ಇಡೀ ಸಮಾಜವೇ ಒಂದು ಕಾರ್ಖಾನೆ, ಎಲ್ಲ ಬಳಕೆದಾರರೂ ಕಾರ್ಮಿಕರು' ಎನ್ನಬಹುದಾದ ಹಂತವನ್ನು ತಲುಪಿದೆ. ಈ ಹಿನ್ನೆಲೆಯಲ್ಲಿ ಜನಸಾಮಾನ್ಯರ ವರ್ಗಬೇಧಗಳನ್ನೂ ಮೀರಿ ಎಲ್ಲರನ್ನೂ ಆವರಿಸಿರುವ ಜಾಲತಾಣಗಳು ಅವನ್ನು ಬಳಸುವ ನೆಟ್ಟಿಗರ 'ನೋಡುವಿಕೆಯನ್ನು' ದುಡಿಮೆಯನ್ನಾಗಿಸಿದೆ. ಅವರನ್ನು ಬಳಕೆದಾರ–ಉತ್ಪಾದಕ ಎಂಬ ಸಂಕೀರ್ಣ ದುಡಿಮೆಗಾರರನ್ನಾಗಿ ಮಾಡಿದೆ. (ಕನ್ಸ್ಯೂಮರ್ ಮತ್ತು ಪ್ರೊಡ್ಯೂಸರ್ ಪದಗಳ ಹೈಬ್ರಿಡ್ ಆಗಿ, ಪ್ರೊಸ್ಯೂಮರ್ ಎಂಬ ಪದ ಈಗಾಗಲೇ ಬಳಕೆಯಲ್ಲಿದೆ). ಅತ್ಯಂತ ಸಂಕೀರ್ಣವಾದ ಇಂದಿನ ಬಂಡವಾಳಶಾಹಿಯು ನಡೆಸುತ್ತಿರುವ ಶೋಷಣೆಯ ಈ ಪ್ರಕ್ರಿಯೆಯನ್ನು, ಹಿಂದಿನ ದಿನಗಳ ಶ್ರಮಿಕರು ಕಾರ್ಖಾನೆ–ಉದ್ಯಮಗಳಲ್ಲಿ ತುತ್ತಾಗುವ ಶೋಷಣೆಯೊಂದಿಗೆ ಹೋಲಿಸುವಾಗ ಸಾಕಷ್ಟು ಕ್ಲಿಷ್ಟ ಪ್ರಶ್ನೆಗಳನ್ನು ಎದುರಿಸಬೇಕಾಗುತ್ತದೆ. ವೀಕ್ಷಿಸುವುದೇ ಹೇಗೆ ಬಿಟ್ಟಿ ದುಡಿಮೆಯಾಗುತ್ತದೆ ಎನ್ನುವುದು ಮಾರ್ಕ್ಸ್ ಹೇಳುವ ಶೋಷಣೆಯ ಯಾವ ಗಂಧವೂ ಇಲ್ಲದವರಿಗಂತೂ ಅರ್ಥವಾಗುವುದು ಕಷ್ಟ.

ಈಗ ಎಲ್ಲರ ಮನೆಗಳಲ್ಲೂ ಇರುವ ಟೀವಿ ವಾಹಿನಿಗಳು ವೀಕ್ಷಿಸುವವರನ್ನೇ ಹೊಸಬಗೆಯ ಕಾರ್ಮಿಕರನ್ನಾಗಿ ಮಾಡುತ್ತಿವೆ. ಅವರು ಟಿವಿ ಕಾರ್ಯಕ್ರಮಗಳನ್ನು ನೋಡುವುದೇ ಒಂದು ಕಾಯಕವಾಗುತ್ತದೆ. ಹೆಚ್ಚು ಜನರು ನೋಡಿದಷ್ಟೂ ಆ ವಾಹಿನಿಯ ಟಿಆರ್‌ಪಿ ಹೆಚ್ಚುತ್ತದೆ. ಟಿಆರ್‌ಪಿ ಹೆಚ್ಚಿದಷ್ಟೂ ಜಾಹಿರಾತುಗಳ ಸಂಖ್ಯೆ ಹೆಚ್ಚುತ್ತದೆ. ಅದರಿಂದ ವಾಹಿನಿಯ ಗಳಿಕೆ ಹೆಚ್ಚುತ್ತದೆ. ಇದು ಒಮ್ಮುಖದ 'ಕಾರ್ಮಿಕತೆ'. ಆದರೆ ಸಾಮಾಜಿಕ ಜಾಲತಾಣಗಳಲ್ಲಿ ನೆಟ್ಟಿಗರ ವೀಕ್ಷಣೆಯು ಕಾಯಕವೂ ಹೌದು, ಮಿಗುತಾಯ ಮೌಲ್ಯವನ್ನು ಸೃಷ್ಟಿಸುವ ದುಡಿಮೆಯೂ ಹೌದು. ಒಟ್ಟಿನಲ್ಲಿ ಈ ಡಿಜಿಟಲ್ ಯುಗದ ಬಂಡವಳಿಗರ ಪಾಲಿಗೆ ಬಳಕೆದಾರನ ಬಳಕೆಯೇ ಹೇಗೆ ಬಿಟ್ಟಿ ದುಡಿಮೆಯಾಗಿ ಶೋಷಣೆಯಾಗಬಲ್ಲದು ಎಂಬುದನ್ನು ಒಂದು ಸಾಮಾನ್ಯ ಉದಾಹರಣೆಯನ್ನು ಕೊಡಬಹುದು. ಮಾರುವುದಕ್ಕಾಗಿಯೇ ಸಾಕುವ ಕುರಿ, ಕೋಳಿ, ಮೇಕೆಗಳು ಮತ್ತು ಹಾಲಿನ ವ್ಯಾಪಾರಕ್ಕಾಗೇ 'ಸಾಕುವ' ಹಸು–ಎಮ್ಮೆಗಳೊಂದಿಗೆ ಹೋಲಿಸಿದರೆ ಡಿಜಟಲ್ ➚

ಕನ್ನಡ ವಿಶ್ವವಿದ್ಯಾಲಯ ಹಂಪಿ

ಸಂಶೋಧನಾರ್ಥಿಗಳಿಗೆ ಬಾಕಿ ಉಳಿಸಿಕೊಂಡಿರುವ ಮಾಸಿಕ ಸಹಾಯಧನ ಬಿಡುಗಡೆ ಮಾಡುವಂತೆ ಮತ್ತು ನಿರ್ಮಾಣ ಹಂತದಲ್ಲಿರುವ ವಸತಿ ನಿಲಯವನ್ನು ಪೂರ್ಣಗೊಳಿಸಿ ಪ್ರಾರಂಭಿಸಲು ಒತ್ತಾಯಿಸಿ ಎಸ್‌ಎಫ್‌ಐ, ಎಐಎಸ್‌ಎಫ್, ಎಐಡಿಎಸ್‌ಓ ಮತ್ತು ಕೆವಿಎಸ್ ಒಳಗೊಂಡ ಪ್ರಗತಿಪರ ವಿದ್ಯಾರ್ಥಿ ಸಂಘಟನೆಗಳ ಒಕ್ಕೂಟದ ನೇತೃತ್ವದಲ್ಲಿ ದಿನಾಂಕ 24/10/2019ರ ಗುರುವಾರದಿಂದ ಕನ್ನಡ ವಿಶ್ವವಿದ್ಯಾಲಯದ ಮುಖ್ಯ ದ್ವಾರದ ಮುಂದೆ ಅನಿರ್ದಿಷ್ಟಾವಧಿ ಪ್ರತಿಭಟನಾ ಧರಣಿ ನಡೆಸಲಾಗುತ್ತಿದೆ.

ಕನ್ನಡ ವಿಶ್ವವಿದ್ಯಾಲಯವು ಕನ್ನಡ ನಾಡು, ನುಡಿ, ಸಂಸ್ಕೃತಿಗಳ ವಿಶೇಷ ಅಧ್ಯಯನಕ್ಕಾಗಿ ಮತ್ತು ಸಂಶೋಧನೆಗಾಗಿಯೇ 1991 ರಲ್ಲಿ ಸ್ಥಾಪನೆಯಾದ ವಿಶ್ವವಿದ್ಯಾಲಯವಾಗಿದೆ. ಚಂದ್ರಶೇಖರ ಕಂಬಾರ, ಎಂ.ಎಂ. ಕಲಬುರ್ಗಿ ಅವರಂತಹ ಹಿರಿಯ ಸಾಹಿತಿಗಳು ಕಟ್ಟಿಸಿದ ವಿಶ್ವವಿದ್ಯಾಲಯ ಇದಾಗಿದ್ದು, ಕನ್ನಡ ನಾಡು, ನುಡಿ, ಸಂಸ್ಕೃತಿ ಮತ್ತು ಸಾಹಿತ್ಯಕ್ಕೆ ಅಪಾರ ಕೊಡುಗೆ ನೀಡಿರುವಂತಹ ವಿದ್ವಾಂಸರನ್ನು ಒಳಗೊಂಡಿದೆ. ಇಂತಹ ವಿಶ್ವವಿದ್ಯಾಲಯದಲ್ಲಿ ಸಂಶೋಧನಾರ್ಥಿಗಳಾಗಿ ದಾಖಲಾತಿ ಪಡೆಯುವುದು ಹೆಮ್ಮೆಯ ವಿಷಯ.

ಈ ವಿಶ್ವವಿದ್ಯಾಲಯಕ್ಕೆ ಸರ್ಕಾರಗಳ ನಿರ್ಲಕ್ಷತನ, ಭ್ರಷ್ಟಾಚಾರ ಮತ್ತು ಸ್ವಜನ ಪಕ್ಷಪಾತದಿಂದಾಗಿ ಇಲ್ಲಿನ ಸಂಶೋಧನಾರ್ಥಿಗಳು ತೊಂದರೆ ಅನುಭವಿಸುವಂತಾಗಿದೆ. ರಾಜ್ಯದ ವಿವಿಧ ಭಾಗಗಳಿಂದ ಬಂದು ಸಂಶೋಧನೆಯನ್ನು ಕೈಗೊಂಡಿರುವ ಸುಮಾರು 500ಕ್ಕೂ ಹೆಚ್ಚು ದಲಿತ ಸಮುದಾಯದ ವಿದ್ಯಾರ್ಥಿಗಳು ಇಲ್ಲಿದ್ದಾರೆ. ಇವರಲ್ಲಿ ಹಲವರಿಗೆ ವಿಶ್ವವಿದ್ಯಾಲಯವು ಕೊಡುವ ಮಾಸಿಕ ಸಹಾಯಧನವನ್ನು 2016 – 17, 2017 – 18 ಮತ್ತು 2018 – 19 ರಿಂದ ನೀಡದಿರುವುದು ಮಾತ್ರ ದುರಂತ.

ಈ ವಿಷಯವಾಗಿ ಹಲವು ಬಾರಿ ವಿಶ್ವವಿದ್ಯಾಲಯಕ್ಕೆ ಮತ್ತು ಸರಕಾರಕ್ಕೆ ಮನವಿ ಪತ್ರಗಳನ್ನು ಸಲ್ಲಿಸಲಾಗಿದೆ. ರಾಜ್ಯದ ಗಮನ ಸೆಳೆಯುವಂತೆ ವಿಶ್ವವಿದ್ಯಾಲಯದ ಆಡಳಿತ ಕಚೇರಿಯ ಮುಂದೆ ಮೂರು ದಿನಗಳ ಕಾಲ ಅಹೋರಾತ್ರಿ ಹೋರಾಟವನ್ನು ನಡೆಸಲಾಗಿದೆ. ಈ ಸಂದರ್ಭದಲ್ಲಿ ಸಂಶೋಧನಾರ್ಥಿಗಳಿಗೆ ಮಾನ್ಯ ಉಪ ಕುಲಪತಿಗಳು ನೀಡಿದ ಭರವಸೆಯನ್ನು ನಂಬಿ ಅವರ ಮೇಲಿನ ಗೌರವದಿಂದ ಅಂದು ಪ್ರತಿಭಟನೆಯನ್ನು ಹಿಂಪಡೆಯಲಾಗಿತ್ತು.

ಆಗಸ್ಟ್ ತಿಂಗಳಿನಲ್ಲಿ 2017 – 18 ಮತ್ತು 2018 – 19 ನೇ ಸಾಲಿನ ವಿದ್ಯಾರ್ಥಿಗಳಿಗೆ ಹಿಂದಿನ ಕುಲಪತಿಗಳು ಹಾಗೂ ಅಂದಿನ ಆಡಳಿತ ಮಂಡಳಿಯು ಸಂಶೋಧನಾ ಸಹಾಯಧನವನ್ನು



ಕೊಡದೆ ಬಾಕಿ ಉಳಿಸಿಕೊಂಡಿರುವ ಕಾರಣದಿಂದಾಗಿ ಮತ್ತು ವಿಶ್ವವಿದ್ಯಾಲಯದಲ್ಲಿ ಹಣಕಾಸಿನ ಕೊರತೆ ಇರುವುದರಿಂದ ತಕ್ಷಣ ಸಹಾಯಧನ ನೀಡಲು ಸಾಧ್ಯವಿಲ್ಲವೆಂದು ಅನುದಾನ ಬಂದ ತಕ್ಷಣ ಸಹಾಯಧನವನ್ನು ನೀಡುತ್ತೇವೆಂದು ಭರವಸೆ ನೀಡಲಾಗಿತ್ತು. ನಂತರದಲ್ಲಿ 2019 ರ ಏಪ್ರಿಲ್ ನಿಂದ ಸೆಪ್ಟೆಂಬರ್ ತಿಂಗಳ ವರೆಗೆ ಮಾಸಿಕ ಸಹಾಯಧನವನ್ನು ನೀಡಿರುವುದು ಸ್ವಾಗತಾರ್ಹ. ಆದರೆ ಹಿಂದಿನ 2016 – 17 ನೇ ಸಾಲಿನಲ್ಲಿ ನಾಲ್ಕು ತಿಂಗಳು, ಮತ್ತು 2017 ರಿಂದ 19 ತಿಂಗಳು ಮತ್ತು 2018 – 19 ನೇ ಸಾಲಿನ ಖಾಯಂ ನೋಂದಣಿ ಆಗಿರುವ ಸಂಶೋಧನಾರ್ಥಿಗಳಿಗೂ ಮಾಸಿಕ ಸಹಾಯಧನವನ್ನು ನೀಡಿರುವುದಿಲ್ಲ. ಈ ಹಣವನ್ನು ತಕ್ಷಣವೇ ನೀಡಲು ಕ್ರಮ ವಹಿಸಬೇಕು.

ಅಲ್ಲದೆ ವಿಶ್ವವಿದ್ಯಾಲಯದಲ್ಲಿರುವ ಸಂಶೋಧನಾರ್ಥಿಗಳಿಗೆ ಸೂಕ್ತ ವಸತಿ ನಿಲಯದ ವ್ಯವಸ್ಥೆಯಿಲ್ಲ. ಇರುವಂತಹ ವಸತಿ ನಿಲಯವು ಹಲವು ಸಮಸ್ಯೆಗಳಿಂದ ಕೂಡಿವೆ. ಹಾಗಾಗಿ ನಿರ್ಮಾಣ ಹಂತದಲ್ಲಿರುವ ವಸತಿ ನಿಲಯವನ್ನು ಕೂಡಲೇ ಪ್ರಾರಂಭಿಸಬೇಕು. ಹಾಗೂ ಹಿಂದುಳಿದ ವರ್ಗದ ಸಂಶೋಧನಾರ್ಥಿಗಳಿಗೆ ವಸತಿ ನಿಲಯದ ಹೊಸ ಕಟ್ಟಡವನ್ನು ನಿರ್ಮಿಸಿ ಸೌಲಭ್ಯ ಕಲ್ಪಿಸಬೇಕು.

ನಮ್ಮ ಬೇಡಿಕೆಗಳು:

1. ಕನ್ನಡ ವಿಶ್ವವಿದ್ಯಾಲಯವು ಬಾಕಿ ಉಳಿಸಿಕೊಂಡಿರುವ ಎಸ್ಸಿ/ಎಸ್ಟಿ ಸಂಶೋಧನಾರ್ಥಿಗಳ ಸಹಾಯಧನವನ್ನು ಕೂಡಲೇ ನೀಡಬೇಕು
2. **Scp / Tsp** ಅನುದಾನದ ಕ್ರಿಯಾ ಯೋಜನೆಯಲ್ಲಿ ಸಂಶೋಧನಾರ್ಥಿಗಳಿಗೆ ಮಾಸಿಕ ಸಹಾಯಧನ ನೀಡಲು ಮೊದಲ ಆದ್ಯತೆ ನೀಡಬೇಕು ಮತ್ತು ಅದಕ್ಕಾಗಿ ಹಣ ಮೀಸಲಿಡಬೇಕು.
3. ದೇವರಾಜ ಅರಸು ಮತ್ತು ಅಲ್ಪಸಂಖ್ಯಾತ ವರ್ಗದ ಇಲಾಖೆಗಳು ನೀಡುವಂತೆ ಎಸ್ಸಿ /ಎಸ್ಟಿ ವಿದ್ಯಾರ್ಥಿಗಳಿಗೂ ಆನ್ ಲೈನ್ ಮೂಲಕವೇ ಮಾಸಿಕ ಸಹಾಯಧನವನ್ನು ನೀಡಬೇಕು. ಮತ್ತು ಮೂರು ವರ್ಷಗಳ ಬದಲಿಗೆ ಐದು ವರ್ಷಗಳಿಗೆ ಹೆಚ್ಚಿಸಬೇಕು.
4. ಸಂಶೋಧನಾರ್ಥಿಗಳಿಗೆ ಈಗ ನೀಡುತ್ತಿರುವ ಆರ್ಥಿಕ ಸಹಾಯಧನವನ್ನು 10,000 ದಿಂದ 20,000 ರೂ. ಗೆ ಹೆಚ್ಚಿಸಬೇಕು
5. ನಿರ್ಮಾಣ ಹಂತದಲ್ಲಿರುವ ವಸತಿ ನಿಲಯವನ್ನು ಈ ಕೂಡಲೇ ತೆರೆದು ಎಸ್ಸಿ / ಎಸ್ಟಿ ಸಂಶೋಧನಾರ್ಥಿಗಳಿಗೆ ವಸತಿ ನಿಲಯ ವ್ಯವಸ್ಥೆಯನ್ನು ಕಲ್ಪಿಸಬೇಕು. ಹಾಗೂ ಹಿಂದುಳಿದ ವರ್ಗದ ಸಂಶೋಧನಾರ್ಥಿಗಳಿಗೆ ವಸತಿ ನಿಲಯದ ಹೊಸ ಕಟ್ಟಡವನ್ನು ನಿರ್ಮಿಸಿ ಸೌಲಭ್ಯ ಕಲ್ಪಿಸಬೇಕು.
6. ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿಯು ಈ ಭಾಗದ ಎಸ್ಸಿ /ಎಸ್ಟಿ ಓಬಿಸಿ ಮತ್ತು ಮೈನಾರಿಟಿ ಸಂಶೋಧನಾರ್ಥಿಗಳಿಗೆ ಸಂಶೋಧನೆಯನ್ನು ಪ್ರೋತ್ಸಾಹಿಸುವ ಸಲುವಾಗಿ ಸಹಾಯಧನವನ್ನು ಮತ್ತು ವಿಶ್ವವಿದ್ಯಾಲಯದ ಅಭಿವೃದ್ಧಿಗೆ ಅನುದಾನವನ್ನು ನೀಡಬೇಕು.
7. ಇತರೆ ವಿಶ್ವವಿದ್ಯಾಲಯಗಳಿಗೆ ಇರುವಂತೆ ಕನ್ನಡ ವಿಶ್ವವಿದ್ಯಾಲಯಕ್ಕೆ ಅನ್ಯ ಆದಾಯ ಮೂಲಗಳು ಇಲ್ಲದೆ ಇರುವುದರಿಂದ ಮತ್ತು ಸಂಶೋಧನೆಗೆ ಹೆಚ್ಚಿನ ಆದ್ಯತೆ ನೀಡುವ ಸಲುವಾಗಿ ರಾಜ್ಯ ಸರ್ಕಾರವು ಬಜೆಟ್ಟಲ್ಲಿ ಹೆಚ್ಚಿನ ಅನುದಾನವನ್ನು ನೀಡಬೇಕು.

ಈ ಎಲ್ಲಾ ಬೇಡಿಕೆಗಳ ಈಡೇರಿಕೆಗಾಗಿ ಸಂಶೋಧನಾರ್ಥಿಗಳ ಅನಿರ್ದಿಷ್ಟಾವಧಿ ಧರಣಿ ನಡೆಸಲಾಗುತ್ತಿದೆ. ಮೊದಲ ದಿನದ ಸಂಜೆ 6.30ಕ್ಕೆ ಪ್ರತಿಭಟನೆಯ ಸ್ಥಳಕ್ಕೆ ಆಗಸಿದ ವಿಶ್ವವಿದ್ಯಾಲಯದ ಉಪಕುಲಪತಿಗಳು ಮತ್ತು ಆಡಳಿತ ಮಂಡಳಿ. ಬೇಡಿಕೆಗಳ



ಈಡೇರಿಸುವುದಾಗಿ ಮೌಖಿಕ ಭರವಸೆ ನೀಡಿರುತ್ತಾರೆ. ಅದನ್ನು ಒಪ್ಪದ ಸಂಶೋಧನಾರ್ಥಿಗಳು ಬೇಡಿಕೆಗಳ ಈಡೇರಿಸುವ ಕುರಿತು ಮತ್ತು ವಿದ್ಯಾರ್ಥಿ ಮುಖಂಡರ ಮೇಲಿನ ದೂರನ್ನು ಹಿಂಪಡೆಯುವ ಕುರಿತು ಖಚಿತವಾಗಿ ಮತ್ತು ಲಿಖಿತವಾಗಿ ಹಿಂಬರಹ ನೀಡುವಂತೆ ಒತ್ತಾಯಿಸಿದ್ದಾರೆ. ಹಾಗಾಗಿ ಎರಡನೇ ದಿನವೂ ಪ್ರತಿಭಟನಾ ಧರಣಿ ಮುಂದುವರಿದಿದೆ ಎಂದು ಎಸ್‌ಎಫ್‌ಐ ರಾಜ್ಯಾಧ್ಯಕ್ಷ ವಿ. ಅಂಬರೀಷ್ ತಿಳಿಸಿದ್ದಾರೆ.

ಪ್ರತಿಭಟನೆಯಲ್ಲಿ ಸಿಐಟಿಯು ಮುಖಂಡರಾದ ಭಾಸ್ಕರ್ ರೆಡ್ಡಿ, ಡಿಎಚ್‌ಎಸ್ ಮುಖಂಡರಾದ ಜಂಬಯ್ಯ ನಾಯಕ್, ಎಐಎಸ್‌ಎಫ್ ನ ಮಾಜಿ ಮುಖಂಡರಾದ ಜನಾರ್ಧನ್, ಡಿವೈಎಫ್‌ಐ ನ ಮಹೇಶ್ ಬಿಸಟ್ಟಿ, ಕಲ್ಯಾಣಯ್ಯ, ಸಮುದಾಯ ಸಂಘಟನೆಯ ಸಿದ್ದಲಿಂಗಪ್ಪ, ಭ್ರಷ್ಟಾಚಾರ ನಿರ್ಮೂಲನೆ ವೇದಿಕೆಯ ಜಿಲ್ಲಾ ಸಂಚಾಲಕ ವೀರಭದ್ರ ನಾಯಕ್, ಯುವ ಮುಖಂಡರಾದ ಹುಳ್ಳಿ ಉಮೇಶ್, ವೆಂಕಟೇಶ್ ಬಾಬು ಮತ್ತು ಸುರೇಶ್ ಚೌಹಾಣ್ ಭಾಗವಹಿಸಿ ಬೆಂಬಲಿಸಿ ಮಾತನಾಡಿದ್ದಾರೆ.

ಪ್ರತಿಭಟನೆಯ ನೇತೃತ್ವವನ್ನು ಪ್ರಗತಿಪರ ವಿದ್ಯಾರ್ಥಿ ಸಂಘಟನೆಗಳ ಒಕ್ಕೂಟದ SFI ರಾಜ್ಯಾಧ್ಯಕ್ಷರಾದ ವಿ. ಅಂಬರೀಷ್, AISF ರಾಜ್ಯ ಕಾರ್ಯದರ್ಶಿ ರಮೇಶ್ ನಾಯಕ್, AIDSO ಜಿಲ್ಲಾಧ್ಯಕ್ಷ ಸುರೇಶ್, KVS ರಾಜ್ಯ ಸಂಚಾಲಕ ಸರೋವರ ಬೆಂಕಿಕೆರೆ ವಹಿಸಿದ್ದು, ನೂರಾರು ಸಂಶೋಧನಾರ್ಥಿಗಳು ಪ್ರತಿಭಟನಾ ಧರಣಿಯಲ್ಲಿ ಭಾಗವಹಿಸಿದ್ದರು.

ಪ್ರತಿಭಟನಾ ಸ್ಥಳಕ್ಕೆ ಉಪಕುಲಪತಿಗಳು ಮತ್ತು ಕುಲಸಚಿವರು ಭೇಟಿ ನೀಡಿ ಬೇಡಿಕೆಗಳನ್ನು ಈಡೇರಿಸುವುದಾಗಿ ಲಿಖಿತವಾಗಿ ಭರವಸೆ ನೀಡಿದರು. ನಂತರ ಪ್ರತಿಭಟನೆಯನ್ನು ತಾತ್ಕಾಲಿಕವಾಗಿ ಹಿಂಪಡೆಲಾಯಿತು. ಭರವಸೆಯಂತೆ ಬೇಡಿಕೆಗಳನ್ನು ಈಡೇರಿಸಲು ವಿಶ್ವವಿದ್ಯಾಲಯ ಆಡಳಿತ ಮಂಡಳಿ ವಿಫಲವಾದರೆ ರಾಜಭವನ ಚಲೋ ನಡೆಸುವುದಾಗಿ ಎಚ್ಚರಿಕೆ ನೀಡಲಾಗಿದೆ.

ಯುಗದ ಬಂಡವಾಳಶಾಹಿ ಸಂಸ್ಥೆಗಳು ನೆಟ್ಟಿಗರನ್ನು ಏತಕ್ಕಾಗಿ 'ಸಾಕುತ್ತಿವೆ' ಎಂಬುದು ಅರ್ಥವಾಗಬಹುದು. ಈ ಪ್ರಾಣಿಗಳಬಗ್ಗೆ ಸಾಕುವವರು ತೋರಿಸುವ ಕಾಳಜಿ, ಕೊಡುವ ಮೇವು, ಹಿಂಡಿ ನೀರು, ಔಷಧೋಪಚಾರಗಳೆಲ್ಲಾ ಅವು ಹೆಚ್ಚು ಕೊಬ್ಬಿ, ಹೆಚ್ಚು ಹಾಲುಕೊಟ್ಟು ಹೆಚ್ಚು ಲಾಭ ಬರಲಿ ಎಂಬುದೇ ಆಗಿದೆ. ಹೀಗಾಗಿ ಈ ಪ್ರಾಣಿಗಳ ಕೆಲಸವೇ ತಿನ್ನುವುದು. ಅವುಗಳ ಸ್ವಂತ ಅಸ್ತಿತ್ವಕ್ಕೆ ಯಾವ ಬೆಲೆಯೂ ಇಲ್ಲ. ಅವು ಆ ಕ್ರಿಯೆಯಿಂದ ಉತ್ಪತ್ತಿಮಾಡುವುದೆಲ್ಲಾ ಮಾರಬಹುದಾದ ಸರಕನ್ನು. ಅದಲ್ಲದೆ, ಸಾಕುವವರಿಗೆ ಮತ್ತಷ್ಟು ಹಣ ತಂದುಕೊಡಬಲ್ಲ ಹಿಕ್ಕೆ, ತುಪ್ಪಟ, ಸಗಣಿ, ಗಂಜಲಗಳನ್ನು ಬದುಕಿರುವ ತನಕವೂ, ಚಕ್ಕಳ–ಮೂಳೆಗಳನ್ನು ಸತ್ತಮೇಲೂ ಬಿಟ್ಟುಹೋಗುತ್ತವೆ. ತಿನ್ನುವಾಗ ಅವು 'ಮೇವನ್ನು ಆನಂದಿಸುತ್ತವೆ' ಎಂಬುದು ಅವಕ್ಕೆ ಮಾಡುವ ಎಲ್ಲ ಆರೈಕೆಯು ಅವಕ್ಕಾಗಿ ಅಲ್ಲ, ಸಾಕುವವರ ಲಾಭಕ್ಕಾಗಿ ಎಂಬ ಸತ್ಯವನ್ನು ತಿರಸ್ಕರಿಸುವುದಿಲ್ಲ. ಸಣ್ಣಪುಟ್ಟ ಆದಾಯದವರೂ ಸೇರಿದಂತೆ, ಬಹುತೇಕ ನೆಟ್ಟಿಗರು ಜಾಲತಾಣಗಳಿಂದ ಪಡೆಯುವ ಸಂತೋಷ, ಸಂತೃಪ್ತಿಗಳು ಬಂಡವಾಳಶಾಹಿ ದೈತ್ಯ ಸಂಸ್ಥೆಗಳ ಲಾಭಕೋರತನವನ್ನು, 'ಬಿಟ್ಟಿ ದುಡಿಮೆಯ' ಮೂಲಕ ನೆಟ್ಟಿಗರ ಸಾಮಾಜಿಕ ಶ್ರಮವನ್ನು ಖಾಸಗಿ ಸಂಪತ್ತನ್ನಾಗಿ ಶೇಖರಿಸುವ ಬಂಡವಳಿಗರ ಅವಮಾನುಷತೆ, ಅವಮಾನವೀಯುತೆಯನ್ನು ಇಲ್ಲವೆನಿಸುವುದಿಲ್ಲ. ಬಂಡವಾಳದ ಏಕೈಕ ಗುರಿ ಲಾಭ, ಹೆಚ್ಚು ಲಾಭ! ಹೊಸ ಹೊಸ ತಂತ್ರಜ್ಞಾನಗಳ ಆವಿಷ್ಕಾರಗಳು ಜನಸಾಮಾನ್ಯರಲ್ಲಿ ಕಡಿಮೆ ಶ್ರಮ, ಹೆಚ್ಚಿನ ಸುಖ–ನೆಮ್ಮದಿಗಳ ಆಸೆ ಹುಟ್ಟಿಸಿದರೆ, ಬಂಡವಳಿಗರಿಗೆ ಅವನ್ನು ತಮ್ಮ ತೆಕ್ಕೆಗೆ ತೆಗೆದುಕೊಂಡು ಶ್ರಮಿಕರ ಬಿಟ್ಟಿ ದುಡಿಮೆಯನ್ನು ಸಂಪತ್ತನ್ನಾಗಿಸುವುದು ಹೇಗೆ ಎಂಬ ಹಂಚಿಕೆಯಾಗಿರುತ್ತದೆ.

ಜನರು, ಶೋಷಣೆಯ ಬಗ್ಗೆ ಹೆಚ್ಚು ಹೆಚ್ಚು ಅರಿವು, ತಿಳುವಳಿಕೆಗಳನ್ನು ಪಡೆದು ಬಂಡವಾಳವಾದವನ್ನು ತಿರಸ್ಕರಿಸಿ ಸಮ ಸಮಾಜವನ್ನು ಕಟ್ಟುವವರೆಗೂ ಬಂಡವಳಿಗರು ಮೇಲುಗೈ ಪಡೆದು ಜನಸಮುದಾಯವನ್ನು ವಂಚಿಸುತ್ತಲೇ ಇರುತ್ತಾರೆ. ಇದಕ್ಕಾಗಿ ಬೇಕಾದ ಸಮಗ್ರ ರಾಜಕೀಯ ದೃಷ್ಟಿ ಮಾರ್ಕ್ಸ್‌ವಾದದಿಂದ ಮಾತ್ರ ದೊರೆಯುವಂಥದು. ಈ ಮಾಹಿತಿ ಪ್ರಧಾನ ಡಿಜಿಟಲ್ ಯುಗದ ಬಂಡವಾಳದಲ್ಲಿ ಸಾಮಾಜಿಕ ಜಾಲತಾಣಗಳ ಹಿಂದಿರುವ ರಾಜಕೀಯವನ್ನು ಅವುಗಳ ಮುಂದೆ ಮಾಡುವ ತಾತ್ಕಾಲಿಕ ಸಂತೋಷವು ಮರೆಸದಂತೆ ನೋಡಿಕೊಳ್ಳುವ ಎಚ್ಚರ ಅತ್ಯಂತ ಮುಖ್ಯವಾದದ್ದು. ಜಾಗ್ರತನಾಗು ಬಳಕೆದಾರ ಜಾಗ್ರತನಾಗು ಎನ್ನುವ ಸಂದೇಶ ಬಳಕೆದಾರರಾದ ನೆಟ್ಟಿಗರಿಗೆ ತೀರಾ ಅವಶ್ಯಕ.

ಶಹಾಪುರ: ಜಾತಿರಹಿತ ವರ್ಗರಹಿತ ಸಮಾಜ ನಿರ್ಮಾಣಕ್ಕಾಗಿ ಹೋರಾಡಿ

ದೇಶದ ರೈತರು ಕೂಲಿಕಾರರ ಮತ್ತು ಕಾರ್ಮಿಕರು ಆರ್ಥಿಕ ಬೇಡಿಕೆಗಳಿಗಾಗಿ ಹೋರಾಟ ಮಾಡುತ್ತಾ ದೇಶವನ್ನು ವರ್ಗ ಶೋಷಣೆಯಿಂದ ಹಾಗೂ ಜಾತಿ ದಮನದಿಂದ ಮುಕ್ತಗೊಳಿಸಬೇಕೆಂದು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯ ಅಧ್ಯಕ್ಷರಾದ ಕಾಮ್ರೇಡ್ ನಿತ್ಯಾನಂದಸ್ವಾಮಿ ಕರೆ ನೀಡಿದರು.

ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಯಾದಗೀರ ಜಿಲ್ಲಾ ಮಟ್ಟದ ಅಧ್ಯಯನ ಶಿಬಿರವನ್ನೂ ಕನ್ನಡ ಸಾಹಿತ್ಯ ಪರಿಷತ್ ಕಾರ್ಯಾಲಯದಲ್ಲಿ ಉದ್ಘಾಟಿಸಿ ಮಾತನಾಡಿದರು. ನಮ್ಮ ಸಮಾಜ ಒಂದು ಮಾನವ ಸಮಾಜ ಹೌದು ಆದರೆ ಅದೊಂದು ಮಾನವೀಯ ಸಮಾಜ ಅಲ್ಲಾ. ನಮ್ಮ ಸಮಾಜ ಕಾರ್ಮಿಕರ ಶೋಷಣೆಯ. ದಲಿತರ ದಮನ ಮಹಿಳೆಯರ ಅತ್ಯಾಚಾರ. ಅಲ್ಪಸಂಖ್ಯಾತ ರ ವಿರುದ್ಧ ದ್ವೇಶ ಸಾದಿಸುವುದು ಮೊದಲಾದ ಅನಿಷ್ಠಗಳಿಂದ ರೋಗಗ್ರಸ್ತವಾಗಿದೆ. ಈ ಅನಿಷ್ಠಗಳನ್ನು ತೊಲಗಿಸದೆ ಈ ದೇಶ ಅಭಿವೃದ್ಧಿ ಕಾಣಲು ಸಾಧ್ಯವಿಲ್ಲ ಎಂದು ಹೇಳಿದರು.

ಪ್ರಧಾನಿ ನರೇಂದ್ರ ಮೋದಿಯವರು ಆಡಳಿತವೈಖರಿಯನ್ನು ತೀವ್ರವಾಗಿ ಟೀಕಿಸಿದ ಅವರು ರಾಜ್ಯದ ನೆರೆ ಸಂತ್ರಸ್ತರಿಗೆ ಕನಿಷ್ಠ ಪರಿಹಾರ ಕೊಟ್ಟು ಅವರಿಗೆ ಪುನರ್ವಸತಿ ಕಲ್ಪಿಸಲು ಮೋದಿಯವರು ವಿಫಲರಾಗಿದ್ದಾರೆ ಎಂದರು. ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಸಮರ್ಪಕ ಜಾರಿಗಾಗಿ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ ಹೋರಾಟವನ್ನು ಮುಂದುವರೆಸಲಿದೆ ಎಂದು ಹೇಳಿದರು. ಅನುಷ್ಠಾನಕ್ಕಾಗಿ ಕೇಂದ್ರಸರ್ಕಾರ ನೀಡಬೇಕಾದ ಅನುದಾನವನ್ನು ಹೆಚ್ಚಿಸಬೇಕು ಎಂದು ಆಗ್ರಹಿಸಿದರು. ಕೂಲಿಕಾರರ ಸಂಘದ ಜಿಲ್ಲಾಧ್ಯಕ್ಷರಾದ ದಾವಲಸಾಬ ನದಾಫ್ ಅಧ್ಯಕ್ಷತೆಯನ್ನು ವಹಿಸಿದ್ದರು. ಆರಂಭದಲ್ಲಿ ಸವಿತಾ ಪೂಜಾರಿ ಎಲ್ಲರನ್ನು ಸ್ವಾಗತಿಸಿದರು ಕೊನೆಯಲ್ಲಿ ಬಸವರಾಜ ಕಟ್ಟಿಮನಿ ಎಲ್ಲರನ್ನು ವಂದಿಸಿದರು. ಈ ಸಂದರ್ಭದಲ್ಲಿ ಶರಣಪ್ಪ ವಕೀಲರು, ಕಾಳಪ್ಪ ಮಾರೆಪ, ಚಂದ್ರರೆಡ್ಡಿ, ರಂಗಮ್ಮ, ಖಾಜಾಸಾಬ, ಬೋನಾಳ, ಇತರರು ಇದ್ದರು.

JANASHAKTHI KANNADA VARA PATRIKE OCTOBER 28 - NOVEMBER 3 , 2019 Price: Rs. 10/- Date of Publication: 25 October 2019 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at Bangalore PSO, BG - 560026 Licensed to Post without prepayment License No. WPP-283

ಕೂಲಿಕಾರರ ತಾಲೂಕ್ ಸಮ್ಮೇಳನಗಳು

2020 ಜನವರಿ 1ರಿಂದ 3ರ ವರೆಗೆ ಕೇರಳದ ಕಣ್ಣೂರಿನಲ್ಲಿ ನಡೆಯಲಿರುವ ಅಖಿಲ ಭಾರತ ಕೃಷಿ ಕೂಲಿಗಾರರಸಮ್ಮೇಳನದ ಪೂರ್ವಭಾವಿಯಾಗಿ 2019 ಡಿಸೆಂಬರ್ 13 ರಿಂದ 15 ರವರೆಗೆ ಕಲಬುರ್ಗಿ ನಗರದಲ್ಲಿ ಕೂಲಿಕಾರರ7ನೇ ರಾಜ್ಯ ಸಮ್ಮೇಳನ ನಡೆಯಲಿದೆ. ಈಗ ಗ್ರಾಮ, ತಾಲೂಕು, ಜಿಲ್ಲಾಮಟ್ಟದ ಸಮ್ಮೇಳನಗಳು ನಡೆಯುತ್ತಿವೆ.

ಕಲ್ಬುರ್ಗಿ ತಾಲೂಕ್ ಸಮ್ಮೇಳನ

ಇದೇ ತಿಂಗಳ 22ರಂದು ಕಲಬುರ್ಗಿಯಲ್ಲಿ2ನೇ ತಾಲೂಕು ಸಮ್ಮೇಳನ ನಡೆಯಿತು.ರಾಜ್ಯ ಸಮ್ಮೇಳನವನ್ನು ಯಶಸ್ವಿಗೊಳಿಸಲು ತೀರ್ಮಾನಿಸಲಾಯಿತು. ನಗರದಲ್ಲಿ ವಸತಿರಹಿತರಿಗೆ ನಿವೇಶನ ಮಂಜೂರು ಮಾಡಲು ಒತ್ತಾಯಿಸಿ ಹೋರಾಟ ಮುಂದುವರೆಸಲುಸಮ್ಮೇಳನ ನಿರ್ಧರಿಸಿತು. ಹಾಸ್ಟೆಲ್ ಹೊರಗುತ್ತಿಗೆ ನೌಕರರ ಹೋರಾಟಕ್ಕೆ ಬೆಂಬಲ ಘೋಷಿಸಲಾಯಿತು.

ಸಮ್ಮೇಳನವನ್ನು ರಾಜ್ಯ ಸಮಿತಿಯ ಅಧ್ಯಕ್ಷರಾದ ಸಂಗಾತಿ ನಿತ್ಯಾನಂದಸ್ವಾಮಿ ಉದ್ಘಾಟಿಸಿದರು. ರಾಮಚಂದ್ರ ಪವಾರ್ ಅಧ್ಯಕ್ಷತೆ ವಹಿಸಿದ್ದರು. ಆರಂಭದಲ್ಲಿ ಭೀಮಶೆಟ್ಟಿಯಂಪಳ್ಳಿಎಲ್ಲರನ್ನು ಸ್ವಾಗತಿಸಿ ಕೊನೆಯಲ್ಲಿ ವಂದಿಸಿದರು. ಯಾದಗಿರಿ ಜಿಲ್ಲಾ ಅಧ್ಯಕ್ಷರಾದ ದಾವಲ್ ಸಾಬ್ ನದಾಫ್ ಮತ್ತು ಕಾರ್ಮಿಕ ಮುಖಂಡರಾದ ಎಂ.ಬಿ.ಸಜ್ಜನ್ ಮತ್ತು ಶ್ರೀಮಂತ ಬಿರಾದಾರ್ ಶುಭಕೋರಿಮಾತನಾಡಿದರು. ರಾಮಚಂದ್ರಪವಾರ್ ಅಧ್ಯಕ್ಷರಾಗಿರುವ 11 ಮಂದಿ ಸದಸ್ಯರುಳ್ಳ ನೂತನ ತಾಲೂಕು ಸಮಿತಿಯನ್ನು ಆಯ್ಕೆ ಮಾಡಲಾಯಿತು. ಕೊನೆಯಲ್ಲಿ ಜಿಲ್ಲಾ ಅಧ್ಯಕ್ಷರಾದ ಭೀಮಶೆಟ್ಟಿ ಯಂಪಳ್ಳಿ ಸಮಾರೋಪ ಮಾಡಿದರು.

ಚಿಂಚೋಳ್ಳಿ ತಾಲೂಕು ಸಮ್ಮೇಳನ :

ದಿನಾಂಕ 23 10 19ರಂದು ಚಿಂಚೋಳಿಯಲ್ಲಿ ಕೂಲಿಕಾರರ7ನೇ ತಾಲೂಕ ಸಮ್ಮೇಳನ ಯಶಸ್ವಿಯಾಗಿ ಜರುಗಿತು.ಮೆರವಣಿಗೆ ಹಾಗೂ ಧ್ವಜಾರೋಹಣದೊಂದಿಗೆ ಸಮ್ಮೇಳನದ ಕಲಾಪಗಳು ಆರಂಭಗೊಂಡವು. ಖಾಜಾಮಿಯಾ ಅಧ್ಯಕ್ಷತೆ



ವಹಿಸಿದ್ದರು.

ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದ ನಿತ್ಯಾನಂದಸ್ವಾಮಿ ಕೃಷಿ ಕೂಲಿಕಾರರು ಉದ್ಯೋಗ, ಕೂಲಿ,ಭೂಮಿ, ಮನೆ ನಿವೇಶನ ಇತ್ಯಾದಿಗಳಿಗಾಗಿ ಹೋರಾಡುತ್ತಾಮಹಿಳೆಯರ ಮೇಲಿನ ದೌರ್ಜನ್ಯಗಳ ವಿರುದ್ಧ, ಜಾತಿ ಅಸ್ಪೃಶ್ಯತೆ ವಿರುದ್ಧ, ಕೋಮುವಾದದ ವಿರುದ್ಧವೂ ಹೋರಾಡಬೇಕೆಂದು ಕರೆ ನೀಡಿದರು.

ತಾಲೂಕು ಕಾರ್ಯದರ್ಶಿ ಮಲ್ಲಮ್ಮ ಕೋಡ್ಲಿ ಚಟುವಟಿಕೆಗಳ ವರದಿಯನ್ನು ಮಂಡಿಸಿದರು. ಚರ್ಚೆಯ ನಂತರ ವರದಿಯನ್ನು ಅಂಗೀಕರಿಸಲಾಯಿತು. ಜಗದೇವಿ ಚಂದನಕೇರಾ ಅಧ್ಯಕ್ಷರಾಗಿರುವ ಮತ್ತು ಪ್ರದೀಪ್ ಕಾರ್ಯದರ್ಶಿಯಾಗಿರುವ 17 ಜನರ ಸಮಿತಿಯನ್ನು ಆಯ್ಕೆಮಾಡಲಾಯಿತು.

ಸುರಪುರ ಹುಣಸಗಿ ತಾಲೂಕು ಸಮ್ಮೇಳನ

ಯಾದಗಿರಿ ಜಿಲ್ಲೆಯ ಸುರಪುರ ತಾಲೂಕು ನೂತನವಾಗಿ ತಾಲೂಕುಗಳ ಜಂಟಿ ಸಮ್ಮೇಳನ ತುಂಬಾ ಯಶಸ್ವಿಯಾಗಿ ಹುಣಸಗಿಯಲ್ಲಿ ನಡೆಯಿತು. ಸಮ್ಮೇಳನದ ಪೂರ್ವದಲ್ಲಿ ಬೃಹತ್ ಮೆರವಣಿಗೆಯನ್ನು ಹೊರಡಿಸಲಾಗಿತ್ತು. ಗ್ರಾಮೀಣ ವಾದ್ಯಗಳೊಂದಿಗೆಸಾಗಿದ ಮೆರವಣಿಗೆಯಲ್ಲಿ 500ಕ್ಕೂ ಹೆಚ್ಚು ಜನ ಭಾಗವಹಿಸಿದ್ದರು. ಹೋರಾಟಗಾರ್ತಿಸಿದ್ದಮ್ಮ ಬಜಂತ್ರಿ ಧ್ವಜಾರೋಹಣ ಮಾಡಿದರು.

ಅಗಲಿದ ಸಂಗಾತಿಗಳಿಗೆ ಶ್ರದ್ಧಾಂಜಲಿ ಸಲ್ಲಿಸಿದ



ಬಳಿಕ ಬಸವರಾಜ ಕಟ್ಟಿಮನಿ ಎಲ್ಲರನ್ನು ಸ್ವಾಗತಿಸಿದರು. ಸಮ್ಮೇಳನವನ್ನು ಉದ್ಘಾಟಿಸಿದ ನಿತ್ಯಾನಂದಸ್ವಾಮಿ ಮಾತನಾಡಿ ಕೃಷಿಕೂಲಿಕಾರರ ಮತ್ತು ಗ್ರಾಮೀಣ ಇಂದಿನ ದುಸ್ಥಿತಿಗೆಕೇಂದ್ರದ ಮೋದಿ ನೇತೃತ್ವದ ಬಿಜೆಪಿ ಸರ್ಕಾರದ ಶ್ರೀಮಂತರ ಪರವಾದ ನೀತಿಗಳೇ ಕಾರಣ ಎಂದು ಸುಧೀರ್ಘವಾಗಿ ವಿವರಿಸಿದರು. ದಾವಲ್ ಸಾಬ್ ನದಾಫ್ ಮಂಡಿಸಿದ ಚಟುವಟಿಕೆಗಳ ವರದಿಯನ್ನು ಚರ್ಚಿಸಿ ಅಂಗೀಕರಿಸಲಾಯಿತು.

ಅಂಗನವಾಡಿ ನೌಕರರ ಜಿಲ್ಲಾ ಅಧ್ಯಕ್ಷರಾದ ಸುರೇಖಾ ಕುಲಕರ್ಣಿ,ಕೂಲಿಕಾರರ ಮುಖಂಡರಾದ ಮಲ್ಲಮ್ಮ ಕೋಡ್ಲಿ ಮಾತನಾಡಿದರು. ಉದ್ಯೋಗ ಖಾತ್ರಿ ಯೋಜನೆ ಸಮರ್ಪಕ ಜಾರಿಗಾಗಿ, ಮನೆ ನಿವೇಶನಗಳಿಗಾಗಿ ಹೋರಾಟವನ್ನು ಮುನ್ನಡೆಸಲುನಿರ್ಧರಿಸಲಾಯಿತು.ಕೊನೆಯಲ್ಲಿ ನಜೀರ್ ಸಾಬ್ ಅಧ್ಯಕ್ಷರಾಗಿರುವ 17 ಸದಸ್ಯರ ಸುರಪುರ ತಾಲೂಕು ಸಮಿತಿಯನ್ನು ಹಾಗೂ ಬಸವರಾಜ ಕಟ್ಟಿಮನಿ ಸಂಚಾಲಕರಾಗಿರುವ ಹುಣಸಗಿ ತಾಲೂಕ್ ಸಂಚಾಲಕ ಸಮಿತಿಯನ್ನು ಆಯ್ಕೆಮಾಡಲಾಯಿತು. **"ಗೆಲುವು ನಮ್ಮದು"** ಹಾಡಿನೊಂದಿಗೆ ಸಮ್ಮೇಳನ ಮುಕ್ತಾಯವಾಯಿತು.

ಸುಜ್ಜಲೂರು ವಲಯ ಸಮ್ಮೇಳನ:

ಮಂಡ್ಯ ಜಿಲ್ಲೆ ಮಳವಳ್ಳಿ ತಾಲೂಕಿನ ಸುಜ್ಜಲೂರು 2ನೇ ವಲಯ ಸಮ್ಮೇಳನ 20–10–19 ರಂದು ಯಶಸ್ವಿಯಾಗಿ ನಡೆಯಿತು. ರಾಜ್ಯ ಪ್ರಧಾನ ಕಾರ್ಯದರ್ಶಿ ಚಂದ್ರಪ್ಪ ಹೊಸ್ಕೇರಾ ಸಮ್ಮೇಳನವನ್ನು ಉದ್ಘಾಟಿಸಿದರು. ಚಟುವಟಿಕೆಗಳ ವರದಿಯ ಮೇಲೆ ಚರ್ಚೆ ನಡೆಸಿ ಅಂಗೀಕರಿಸಲಾಯಿತು ನೂತನ ಸಮಿತಿಗೆ ಪಾಪಣ್ಣ ಅಧ್ಯಕ್ಷರಾಗಿ ಅಧ್ಯಕ್ಷರಾಗಿಯೂ ಹನುಮಂತ ಕಾರ್ಯದರ್ಶಿಯಾಗಿ ಹಾಗೂ 12 ಜನ ಸದಸ್ಯರನ್ನು ಆಯ್ಕೆ ಮಾಡಲಾಯಿತು.



ಕರ್ನಾಟಕ ರಾಜ್ಯ ಮಟ್ಟದ
ಮಸಣ ಕಾರ್ಮಿಕರ ಪ್ರಥಮ ಸಮಾವೇಶ

ಅಕ್ಟೋಬರ್ 22, 2019 ರಂದು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನವನದಲ್ಲಿ ಕರ್ನಾಟಕ ರಾಜ್ಯ ಮಟ್ಟದ ಮಸಣ ಕಾರ್ಮಿಕರ ಪ್ರಥಮ ಸಮಾವೇಶ ನಡೆಯಿತು. ರಾಜ್ಯದ ವಿವಿದ ಜಿಲ್ಲೆಗಳಿಂದ ಸುಮಾರು 350 ಕ್ಕೂ ಹೆಚ್ಚು ಮಸಾಣದಲ್ಲಿ ಗುಂಡಿ ತೆಗೆಯುವ ಕಾರ್ಮಿಕರು ಈ ಸಮಾವೇಶದಲ್ಲಿ ತುಂಬ ಉತ್ಸುಕದಿಂದ ಭಾಗವಹಿಸಿದ್ದರು.

ಸಮಾವೇಶದ ಅಧ್ಯಕ್ಷತೆಯನ್ನು ಸಹ ಸಂಚಾಲಕಿಯಾದ ಶ್ರೀಮತಿ ಮಾಳಮ್ಮ ನವರು ವಹಿಸಿದ್ವರು. ಈ ಸಮಾವೇಶದಲ್ಲಿ ದಲಿತ ಹಕ್ಕುಗಳ ಸಮಿತಿಯ ರಾಜ್ಯ ಸಂಚಾಲಕರಾದ, ಗೋಪಾಲಕೃಷ್ಣ ಹರಳಹಳ್ಳಿ, ರಾಜಣ್ಣ, ನಾಗಣ್ಣ ಮತ್ತು ಹನುಮೇಗೌಡ ಭಾಗವಹಿಸಿ ಮಾತನಾಡಿದರು. ಡಿ.ಎಸ್. ಎಂ.ಎಂ.ನ ರಾಷ್ಟ್ರೀಯ ಸದಸ್ಯರಾದ ನಾಗರಾಜ ನಂಜುಂಡಯ್ಯ ಮತ್ತು ಪ್ರಗತಿ ಪರ ಹೋರಾಟಗಾರ ಮಹಾದೇವ್ ರವರು ಭಾಗವಹಿಸಿ ಸಮಾವೇಶ ಉದ್ದೇಶಿಸಿ ಮಾತನಾಡಿದರು. ಸಂಘದ ರಾಜ್ಯ ಸಂಚಾಲಕರಾದ ಯು.ಬಸವರಾಜು ಪ್ರಸ್ತಾವಿಕ ವಾಗಿ ಮಾತನಾಡಿದರು.

ಸಮಾವೇಶಕ್ಕೆ ಆಗಮಿಸಿದ ಸಮಾಜ ಕಲ್ಯಾಣ ಇಲಾಖೆಯ ವಿಶೇಷ ಅಧಿಕಾರಿಯಾದ ಶ್ರೀ ವೆಂಕಟಯ್ಯ ನವರು, ಸಂಘಟಕರು ಸಲ್ಲಿಸಿದ ಮನವಿ ಪತ್ರವನ್ನು ಸ್ವೀಕರಿಸಿ, ಎಲ್ಲಾ ಬೇಡಿಕೆಯ ಗಳನ್ನು ಈಡೇರಿಸಲು ಸರ್ಕಾರದ ಬಳಿ ಮಾತನಾಡಿ ನಿಮ್ಮಸಂಘದ ಪದಾಧಿಕಾರಿಗಳೊಂದಿಗೆ ಮಾತು ಕತೆ ನಡೆಸಲು ಪ್ರಯತ್ನ ಪಡುತ್ತೇನೆ ಎಂದು ಭರವಸೆ ನೀಡಿದರು. ಅದೇ ರೀತಿ ಸಮಾಜ ಕಲ್ಯಾಣ ಇಲಾಖೆಯ ಜಂಟೀ ನಿರ್ದೇಶಕ ರು ಸಮಾವೇಶಕ್ಕೆ ಆಗಮಿಸಿ ಮನವಿ ಸ್ವೀಕರಿಸಿದರು. (ಮನವಿ ಪತ್ರವನ್ನು ಪ್ರತ್ಯೇಕವಾಗಿ ನೀಡಲಾಗಿದೆ).



JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana**, No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**